ಮಂಗಳವಾರ, ಫೆಬ್ರುವರಿ 24, 2026 | ₹ 7.00

prajavani.net prajavani

www.prajavani.net


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಣ್ಣಗಳಲ್ಲಿ ಮಿಂದೆದ್ದ ಚೆಲುವೆ

ಪಶ್ಚಿಮ ಬಂಗಾಳದ ನಾದಿಯಾದಲ್ಲಿ, ಹೋಳಿ ಆಚರಣೆ ವೇಳೆ ಯುವತಿಯೊಬ್ಬರು ಸಂತಸದಿಂದ ಭಾಗಿಯಾಗಿದ್ದರು





ಸ್ಟೈಲ್ ಪ್ಲೀಸ್...

ಕಲಬುರಗಿಯ ಶರಣಬಸವೇಶ್ವರ ಕೆರೆಯ ಉದ್ಯಾನದಲ್ಲಿ ಹಮ್ಮಿಕೊಂಡಿರುವ ಫಲಪುಷ್ಪ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಭಾಗಿಯಾಗಿದ್ದವರು

ಚಿಟಿಕೆ ಸುದ್ದಿ

ಮೃತ್ಯುಂಜಯ ದೊಡ್ಡವಾಡಗೆ 'ಗೌರಿ ಸುಂದರ್' ಪ್ರಶಸ್ತಿ

ಬೆಂಗಳೂರು: ಸುಂದರ ಪ್ರಕಾಶನ ನೀಡುವ 2026ನೇ ಸಾಲಿನ 'ಗೌರಿ ಸುಂದರ್' ವಾರ್ಷಿಕ ಪ್ರಶಸ್ತಿಗೆ ಮೃತ್ಯುಂಜಯ ದೊಡ್ಡವಾಡ ಅವರು ಆಯ್ಕೆಯಾಗಿದ್ದಾರೆ.


ಮೃತ್ಯುಂಜಯ ದೊಡ್ಡವಾಡ

ಸುಗಮ ಸಂಗೀತ ಗಾಯಕ, ಸಂಗೀತ ನಿರ್ದೇಶಕ ಮೃತ್ಯುಂಜಯ ದೊಡ್ಡವಾಡ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಶಸ್ತಿ ಸಮಿತಿಯ ಸದಸ್ಯರಾದ ಕವಿ ಬಿ.ಆರ್.ಲಕ್ಷ್ಮಣರಾವ್, ಕಾರ್ಯದರ್ಶಿ ಇಂದಿರಾ ಸುಂದರ್ ತಿಳಿಸಿದ್ದಾರೆ. ಪ್ರಶಸ್ತಿಯು ₹10,000 ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಎಸ್‌ಟಿಎಸ್ ಕಪ್ 2026 ಕ್ರಿಕೆಟ್

ರಾಜರಾಜೇಶ್ವರಿ ನಗರ: ಯಶವಂತಪುರ ಶಾಸಕ ಎಸ್.ಟಿ.ಸೋಮಶೇಖರ್ ಹೆಸರಿನಲ್ಲಿ ಎಸ್.ಟಿ.ಎಸ್ ಕಪ್ 2026 ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ.

ಯಶವಂತಪುರ ಕ್ಷೇತ್ರದ ಮತದಾರರಿಗೆ ಮಾತ್ರ ಅವಕಾಶವನ್ನು ಕಲ್ಪಿಸಲಾಗಿದ್ದು, ಮಾ.5ರ ಒಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು.

ಪ್ರಥಮ ಬಹುಮಾನ ₹3 ಲಕ್ಷ ನಗದು ಮತ್ತು ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ₹2.50 ಲಕ್ಷ, ತೃತೀಯ ಬಹುಮಾನ ₹2 ಲಕ್ಷ, ನಾಲ್ಕನೇ ಬಹುಮಾನ ₹1.50 ಲಕ್ಷ, ಐದನೇ ಬಹುಮಾನ ₹1 ಲಕ್ಷ ಸಿಗಲಿದೆ. ಉಳಿದ ತಂಡಗಳಿಗೆ ತಲಾ ₹12,000 ಸಮಾಧಾನಕರ ಬಹುಮಾನ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ 9742381982, 9986773424 ಸಂಪರ್ಕಿಸಬಹುದು.

ಕಾಲ್ತುಳಿತ ಪ್ರಕರಣ: ಪಿಐಎಲ್ ಇತ್ಯರ್ಥ

ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ್ದ ದುರಂತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಕುರಿತ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ರಾಜ್ಯ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು ಘಟನಾ ತರುವಾಯ ಸರ್ಕಾರ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಕುರಿತಂತೆ ನ್ಯಾಯಪೀಠಕ್ಕೆ ಅರುಹಿದರು.

'ಜನಸಂದಣಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಬಿಡುಗಡೆ ಮಾಡಿದೆ. ಸಭೆ, ಸಮಾರಂಭ ಮತ್ತು ಕಾರ್ಯಕ್ರಮಗಳಲ್ಲಿ ಜನಸಂದಣಿ ನಿಯಂತ್ರಿಸಲು 'ಕರ್ನಾಟಕ ಜನಸಂದಣಿ ನಿಯಂತ್ರಣ' ಮಸೂದೆ ಸಿದ್ಧಪಡಿಸಲಾಗಿದೆ' ಎಂದರು. ಭವಿಷ್ಯದಲ್ಲಿ ಈ ಕುರಿತು ಕಾಯ್ದೆ ಜಾರಿಗೊಳಿಸಲು ಸರ್ಕಾರ ಉದ್ದೇಶಿಸಿದೆ.

ಅಂತೆಯೇ, ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯ ನೇಮಿಸಿರುವ ಅಮಿಕಸ್ ಕ್ಯೂರಿಯಾದ ಪದಾಂಕಿತ ಹಿರಿಯ ವಕೀಲೆ ಎಸ್.ಸುಶೀಲಾ ಅವರ ಸಲಹೆ-ಶಿಫಾರಸುಗಳನ್ನು ಪರಿಗಣಿಸಲಾಗುವುದು' ಎಂದು ನ್ಯಾಯಪೀಠಕ್ಕೆ ಭರವಸೆ ನೀಡಿದರು. ಶಶಿಕಿರಣ ಶೆಟ್ಟಿಯವರ ಈ ಹೇಳಿಕೆ ದಾಖಲಿಸಿಕೊಂಡ ನ್ಯಾಯಪೀಠ ಅರ್ಜಿ ಇತ್ಯರ್ಥಪಡಿಸಿತು.

ಪ್ರಕರಣವೇನು?

2025ರ ಜೂನ್ 4ರಂದು ನಡೆದಿದ್ದ ಐಪಿಎಲ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಆರ್‌ಸಿಬಿ ತಂಡ ಜಯಗಳಿಸಿತ್ತು. ಮರುದಿನ (ಜೂ.5) ನಗರದಲ್ಲಿ ಆರ್‌ಸಿಬಿ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಪರಿಣಾಮ ಲಕ್ಷಾಂತರ ಜನ ಚಿನ್ನಸ್ವಾಮಿ ಕ್ರೀಡಾಂಗಣದ ಮುಂದೆ ಜಮಾಯಿಸಿದ್ದರು. ಈ ವೇಳೆ ಕಾಲ್ತುಳಿತ ಉಂಟಾಗಿ 11 ಜನ ಮೃತಪಟ್ಟು, 56 ಜನ ಗಾಯಗೊಂಡಿದ್ದರು. ಘಟನೆ ಕುರಿತಂತೆ ಹೈಕೋರ್ಟ್ ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಂಡು ವಿಚಾರಣೆ ನಡೆಸಿತ್ತು.

ಕಿರ್ಲೋಸ್ಕರ್ ಆಸ್ತಿ ಹರಾಜಿಗೆ ಆದೇಶ

ಬೆಂಗಳೂರು: 'ಮೈಸೂರು ಕಿರ್ಲೋಸ್ಕರ್ ಲಿಮಿಟೆಡ್' ಕಂಪನಿಯ ಮಾಜಿ ಆಡಳಿತ ಮಂಡಳಿಯು, ಕಂಪನಿಯನ್ನು ಮುಚ್ಚುವ ಮೊದಲು ತನ್ನ ಬಳಿಯಿದ್ದ ಬಹುಕೋಟಿ ಮೌಲ್ಯದ 6 ಎಕರೆ 29 ಗುಂಟೆ ಜಮೀನು ಮತ್ತು ಆಸ್ತಿಗಳನ್ನು ತನ್ನದೇ ಶಿಕ್ಷಣ ಸಂಸ್ಥೆಯಾಗಿರುವ, 'ಕಿರ್ಲೋಸ್ಕರ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್'ಗೆ (ಕೆಐಎಎಂಎಸ್) ವರ್ಗಾಯಿಸುವ ಮೂಲಕ 'ಗುತ್ತಿಗೆ ಪತ್ರ (ಲೀಸ್ ಡೀಡ್) ಕಾರ್ಯಗತಗೊಳಿಸಿರುವುದು ಕಾನೂನು ಬಾಹಿರ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಕಂಪನಿ ನ್ಯಾಯಾಲಯ 2015ರ ಜುಲೈ 21ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ, 'ಮೈಸೂರು ಕಿರ್ಲೋಸ್ಕರ್ ಲಿಮಿಟೆಡ್ ಕಂಪನಿ'ಯ 'ಅಧಿಕೃತ ಲಿಕ್ವಿಡೇಟರ್' (ಬರ್ಖಾಸ್ತುದಾರ) ಸಲ್ಲಿಸಿದ್ದ 'ಮೂಲ ಮೇಲ್ಮನವಿ'ಯನ್ನು (ಒಎಸ್‌ಎ) ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

ಈ ಕುರಿತಾದ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪ್ರಕಟಿಸಿದ್ದು, 'ಆಸ್ತಿಯನ್ನು ಸ್ವಾಧೀನಪಡಿಸಿಕೊಂಡು ಸಾರ್ವಜನಿಕ ಹರಾಜಿಗೆ ಇರಿಸಿ' ಎಂದು ಮೇಲ್ಮನವಿದಾರರೂ ಆದ ಹೈಕೋರ್ಟ್‌ನಿಂದ ನೇಮಕಗೊಂಡಿರುವ ಅಧಿಕೃತ ಲಿಕ್ವಿಡೇಟರ್‌ಗೆ (ಒಎಲ್) ನಿರ್ದೇಶಿಸಿದೆ.



'ಮುಚ್ಚುವ ಹಂತದಲ್ಲಿದ್ದ ಕಂಪನಿಯು ತನ್ನ ಸಾಲಗಾರರು ಮತ್ತು ಷೇರುದಾರರ ಹಿತಾಸಕ್ತಿ ಬಲಿಕೊಟ್ಟು, ಕೇವಲ ತನಗೆ ಸಂಬಂಧಿಸಿದ ಸಂಸ್ಥೆಗೆ ಲಾಭ ಮಾಡಿಕೊಡುವ ದುರುದ್ದೇಶದಿಂದ ಈ ಲೀಸ್ ಡೀಡ್ ಕಾರ್ಯಗತಗೊಳಿಸಿದೆ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ. 'ಕೂಡಲೇ ಆಸ್ತಿಯನ್ನು ವಶಕ್ಕೆ ಪಡೆದು ಸಾರ್ವಜನಿಕ ಹರಾಜು ಮೂಲಕ ಬಾಕಿದಾರರಿಗೆ ಹಣ ಮರುಪಾವತಿಸಬೇಕು' ಎಂದು ಲಿಕ್ವಿಡೇಟರ್‌ಗೆ ತಾಕೀತು ಮಾಡಿದೆ.

ಅಂತೆಯೇ, 'ಅಧಿಕೃತ ಲಿಕ್ವಿಡೇಟರ್, ಆಸ್ತಿಯನ್ನು ಸ್ವಾಧೀನಕ್ಕೆ ಪಡೆಯುವತನಕ ಕೆಐಎಎಂಎಸ್ ತನ್ನ ಸ್ವಾಧೀನದಲ್ಲಿರುವ ಸ್ವತ್ತುಗಳ ಮಾರುಕಟ್ಟೆ ಬಾಡಿಗೆಯನ್ನು ಪಾವತಿಸಲು ಬಾಧ್ಯಸ್ಥವಾಗಿರುತ್ತದೆ. ಒಂದು ವೇಳೆ ಕೆಐಎಎಂಎಸ್ ಬಯಸಿದರೆ ಸಾರ್ವಜನಿಕ ಹರಾಜು ಪ್ರಕ್ರಿಯೆಯಲ್ಲೂ ಭಾಗವಹಿಸಬಹುದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಪ್ರಕರಣ: ಕಂಪನಿ ನ್ಯಾಯಾಲಯ 2004ರ ಏಪ್ರಿಲ್ 1ರಂದು ಮೈಸೂರು ಕಿರ್ಲೋಸ್ಕರ್ ಲಿಮಿಟೆಡ್ ಕಂಪನಿಯನ್ನು ಮುಕ್ತಾಯಗೊಳಿಸಲು ಆದೇಶಿಸಿತ್ತು. ಈ ಆದೇಶ ಹೊರಬೀಳುವ ಮೊದಲು ಅಂದರೆ 2000 ಜನವರಿ 22ರಂದು, 'ಮೈಸೂರು ಕಿರ್ಲೋಸ್ಕರ್ ಲಿಮಿಟೆಡ್‌ನ ಮಾಜಿ ಆಡಳಿತ ಮಂಡಳಿ' ಕೆಐಎಎಂಎಸ್ ಜೊತೆಗಿನ ಆಸ್ತಿ ವರ್ಗಾವಣೆಯ 28 ವರ್ಷಗಳ ಗುತ್ತಿಗೆ ಒಪ್ಪಂದವನ್ನು ಜಾರಿಗೊಳಿಸಿತ್ತು.

ತದನಂತರ ಕೆಐಎಎಂಎಸ್, ಹರಿಹರ ತಾಲ್ಲೂಕಿನ ಸರ್ವೆ ನಂಬರ್ 23 ಮತ್ತು 27ರ ವ್ಯಾಪ್ತಿಯಲ್ಲಿ ಒಟ್ಟು 6 ಎಕರೆ, 29 ಗುಂಟೆ ಜಮೀನನ್ನು ಹಾಗೂ ಈ ಜಮೀನಿನಲ್ಲಿರುವ ಕಟ್ಟಡಗಳು, ರಚನೆಗಳು, ಸೌಲಭ್ಯಗಳು, ಸೌಕರ್ಯಗಳು, ಸ್ಥಾವರಗಳು ಮತ್ತು ಯಂತ್ರೋಪಕರಣಗಳನ್ನು ತನ್ನ ವಶಕ್ಕೆ ಪಡೆದಿತ್ತು. ಬಹುಕೋಟಿ ಮೌಲ್ಯದ ಈ ಆಸ್ತಿಯನ್ನು ತಿಂಗಳಿಗೆ ₹1,250ರ ಮೊತ್ತಕ್ಕೆ ಗುತ್ತಿಗೆ ನೀಡಲಾಗಿತ್ತು.

ಸುದ್ದಿ 2 ನಿಮಿಷ

13,600 ಆಸ್ತಿ ಮಾಲೀಕರಿಗೆ ನೋಟಿಸ್

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಕಟ್ಟಡದ ಅಳತೆಯನ್ನು ವಾಸ್ತವಕ್ಕಿಂತ ಕಡಿಮೆ ನಮೂದಿಸಿ, ತೆರಿಗೆ ವಂಚಿಸಿರುವ ಸುಮಾರು 13,600 ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐಟಿ ವಿಭಾಗವು ರಾಷ್ಟ್ರೀಯ ಮಾಹಿತಿ ಕೇಂದ್ರದ (ಎನ್‌ಐಸಿ) ಸಹಯೋಗದಲ್ಲಿ ಐದು ನಗರ ಪಾಲಿಕೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ಜಿಐಎಸ್ ತಂಡದ ವಿಶೇಷ ಮನೆ-ಮನೆ ಭೇಟಿ ಮೂಲಕ ಆಸ್ತಿ ತೆರಿಗೆ ಮರುಪರಿಶೀಲನೆ ಕಾರ್ಯದ 2ನೇ ಹಂತವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

'ಜಿಐಎಸ್ ಹಾಗೂ ವಿಶೇಷ ಮನೆ-ಮನೆ ಸಮೀಕ್ಷೆ ತಂಡದ ಮಾಹಿತಿ ಆಧಾರದಲ್ಲಿ ಆಸ್ತಿಗಳ ತೆರಿಗೆ ಪರಿಷ್ಕರಿಸಲಾಗಿದೆ. ಆಸ್ತಿ ಮಾಲೀಕರಿಗೆ ನೋಟಿಸ್ ನೀಡಿ, ಸುಮಾರು ₹318 ಕೋಟಿ ತೆರಿಗೆ ವಸೂಲಿ ಮಾಡಲಾಗುತ್ತಿದೆ' ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.



'ಮೊದಲ ಮತ್ತು ಎರಡನೇ ಹಂತಗಳನ್ನು ಸೇರಿಸಿ ಒಟ್ಟು 23,600 ಆಸ್ತಿ ಮಾಲೀಕರಿಂದ ₹688 ಕೋಟಿ ತೆರಿಗೆ ವಸೂಲಿ ಮಾಡುವ ಪ್ರಕ್ರಿಯೆ ಚಾಲನೆ ನೀಡಲಾಗಿದೆ' ಎಂದರು.

ಸಗಟು ಪುಸ್ತಕ ಖರೀದಿಗೆ ₹25 ಕೋಟಿ ಕೊಡಿ: ಮನವಿ

ಬೆಂಗಳೂರು: 'ಮುಂಬರುವ ಬಜೆಟ್‌ನಲ್ಲಿ ಸಾರ್ವಜನಿಕ ಗ್ರಂಥಾಲಯದ ಸಗಟು ಕನ್ನಡ ಪುಸ್ತಕ ಖರೀದಿ ಯೋಜನೆ ಜಾರಿಗೆ ₹25 ಕೋಟಿ ಮೀಸಲಿಡಬೇಕು' ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದೆ.

'2023-24ನೇ ಸಾಲಿನಲ್ಲಿ ಈ ಯೋಜನೆಗೆ ಅನುದಾನ ಮೀಸಲಿಡುವಂತೆ ಕೋರಿದಾಗ ₹10 ಕೋಟಿ ಘೋಷಣೆ ಮಾಡಿದ್ದೀರಿ. ಪುಸ್ತಕ ಸಗಟು ಖರೀದಿ ಯೋಜನೆಯಡಿ ಆಯ್ಕೆಯಾದ ಪುಸ್ತಕಗಳ 300 ಪ್ರತಿ ಖರೀದಿಸಿ ಜಿಲ್ಲಾ, ನಗರ ಕೇಂದ್ರ ಗ್ರಂಥಾಲಯಗಳಿಗೆ ವಿತರಿಸುವ ಯೋಜನೆ ಜಾರಿಯಲ್ಲಿದೆ. ಆದರೆ, ತಮಿಳುನಾಡಿನಲ್ಲಿ 500, ಕೇರಳದಲ್ಲಿ 1,000 ಪ್ರತಿ ಖರೀದಿಸಿ ಸರ್ಕಾರ ಪುಸ್ತಕ ಪ್ರದರ್ಶನ ಏರ್ಪಡಿಸುತ್ತಿದೆ. ನಮ್ಮಲ್ಲೂ ಈ ಯೋಜನೆಗೆ ಹೆಚ್ಚಿನ ಒತ್ತು ಸಿಗಬೇಕು' ಎಂದು ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕಾರ್ಯದರ್ಶಿ ಆರ್.ದೊಡ್ಡೇಗೌಡ ಕೋರಿದ್ದಾರೆ.

ಆದೇಶ ಅನುಷ್ಠಾನಗೊಳಿಸಿ: 'ಗ್ರಂಥಾಲಯಗಳಿಗೆ ಕನ್ನಡ ಸಾಹಿತ್ಯ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳ ಖರೀದಿ ಪ್ರಮಾಣವನ್ನು ಇಳಿಕೆ ಮಾಡಿರುವ ಆದೇಶವನ್ನು ಅನುಷ್ಠಾನಗೊಳಿಸಬೇಕು. ಅರ್ಜಿ ಸಲ್ಲಿಕೆ ಅವಧಿ ಮುಗಿಯಲು ಕೆಲವೇ ದಿನ ಇರುವಾಗ ಇಂತಹ ತಿದ್ದುಪಡಿ ಆದೇಶ ಹೊರಡಿಸಿರುವುದು ಸರಿಯಲ್ಲ. ಹಿಂದಿನ ಆದೇಶದಂತೆಯೇ ಪುಸ್ತಕ ಖರೀದಿಗೆ ಅವಕಾಶ ನೀಡಿ ಲೇಖಕರು, ಪ್ರಕಾಶಕರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಬೇಕು' ಎಂದು ಮಾಡಿದ್ದಾರೆ.

ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಕೆ

ಬೆಟ್ಟಿಂಗ್ ದಂಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನ್‌ಲೈನ್ ಬೆಟ್ಟಿಂಗ್ ಹಾಗೂ ಜೂಜಾಟ ಪ್ರಕರಣದ ಪ್ರಮುಖ ಆರೋಪಿ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿಯೊಂದಿಗೆ ಅಕ್ರಮದಲ್ಲಿ ಶಾಮೀಲಾದ ಆರೋಪದಡಿ ಇತರೆ ವ್ಯಕ್ತಿಗಳು, ಸಂಸ್ಥೆಗಳ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಹೆಚ್ಚುವರಿ ದೋಷಾರೋಪಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ.

ಪೃಥ್ವಿ ಎನ್.ರಾಜ್, ಕೆ.ಸಿ.ತಿಪ್ಪೇಸ್ವಾಮಿ, ಫೋನ್‌ಪೈಸಾ ಪೇಮೆಂಟ್ ಸಲ್ಯೂಷನ್ಸ್ ಪ್ರೈ.ಲಿ ಹಾಗೂ ಲಾಜಿಕ್‌ಫೋರ್ಜ್ ಸಲ್ಯೂಷನ್ಸ್ ಪ್ರೈ.ಲಿ. ಸೇರಿದಂತೆ ಹಲವು ವ್ಯಕ್ತಿಗಳು ಮತ್ತು ಸಂಸ್ಥೆಗಳ ಹೆಸರನ್ನು ದೋಷಾರೋಪಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಬೆಟ್ಟಿಂಗ್ ಜಾಲತಾಣಗಳಾದ ಕಿಂಗ್ 567, ಪ್ಲೇ 567 ಹಾಗೂ ಪ್ಲೇ ವಿನ್ 567 ಬೆಟ್ಟಿಂಗ್‌ನಲ್ಲಿ ಸಾರ್ವಜನಿಕರಿಂದ ಹಣ ಹೂಡಿಕೆ ಮಾಡಿಸಿಕೊಂಡು ವ್ಯವಸ್ಥಿತವಾಗಿ ವಂಚನೆ ಎಸಗಿದ ಆರೋಪದಡಿ ಕಳೆದ ಆಗಸ್ಟ್‌ನಲ್ಲಿ ವೀರೇಂದ್ರ ಪಪ್ಪಿ ನಿವಾಸ ಸೇರಿ ಸಹಚರರ ವಿರುದ್ಧ ದೇಶದೆಲ್ಲೆಡೆ ಸುಮಾರು 60 ಕಡೆಗಳಲ್ಲಿ ಇ.ಡಿ ದಾಳಿ ನಡೆಸಿತ್ತು.

ಈ ಸಂದರ್ಭದಲ್ಲಿ ಕೋಟ್ಯಂತರ ರೂಪಾಯಿ ನಗದು, ಚಿನ್ನದ ಗಟ್ಟಿ ಹಾಗೂ ಐಷಾರಾಮಿ ಕಾರುಗಳನ್ನು ಜಪ್ತಿ ಮಾಡಿಕೊಂಡಿತ್ತು. ತನಿಖೆ ಬಳಿಕ ಶಾಸಕ ವೀರೇಂದ್ರ ಅವರನ್ನು ಬಂಧಿಸಿ, ಅವರಿಗೆ ಸೇರಿದ ಅಂದಾಜು ₹177.30 ಕೋಟಿ ಸ್ಥಿರ ಹಾಗೂ ಚರಾಸ್ತಿಯನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿತ್ತು.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಸಿ ಬೆಟ್ಟಿಂಗ್ ಆ್ಯಪ್‌ಗಳಲ್ಲಿ ಎದುರಾಳಿ ಸ್ಪರ್ಧಿ ಇರುವುದಾಗಿ ಬಿಂಬಿಸಿಕೊಂಡು ಸಾರ್ವಜನಿಕರಿಂದ ಬೆಟ್ಟಿಂಗ್ ಹಣ ಕಟ್ಟಿಸಿಕೊಂಡು ವಂಚಿಸುತ್ತಿದ್ದರು. ಹಣ ವರ್ಗಾಯಿಸಲು ವಿವಿಧ ಪೇಮೆಂಟ್ ಗೇಟ್‌ವೇ ಕಂಪನಿಗಳ ಮ್ಯೂಲ್ (ನಕಲಿ) ಖಾತೆಗಳನ್ನು ಬಳಸಿಕೊಂಡಿದ್ದವು ಎಂದು ಜಾರಿ ನಿರ್ದೇಶನಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಏಳು ಮಂದಿಯಿದ್ದ ಏರ್ ಆಂಬುಲೆನ್ಸ್ ಪತನ

ರಾಂಚಿ (ಪಿಟಿಐ): ರಾಂಚಿಯಿಂದ ದೆಹಲಿಗೆ ಪ್ರಯಾಣಿಸುತ್ತಿದ್ದ ಏರ್ ಆಂಬುಲೆನ್ಸ್ ಜಾರ್ಖಂಡ್‌ನ ಚತ್ರಾ ಜಿಲ್ಲೆಯ ಸಿಮಾರಿಯಾ ಬಳಿ ಅಪಘಾತಕ್ಕೀಡಾಗಿದೆ.

'ಏಳು ಮಂದಿಯಿದ್ದ ವಿಮಾನ ಸೋಮವಾರ ರಾತ್ರಿ 7.10ಕ್ಕೆ ರಾಂಚಿಯಿಂದ ಟೇಕ್ ಆಫ್ ಆಗಿತ್ತು' ಎಂದು ರಾಂಚಿ ವಿಮಾನ ನಿಲ್ದಾಣದ ನಿರ್ದೇಶಕ ವಿನೋದ್ ಕುಮಾರ್ ತಿಳಿಸಿದ್ದಾರೆ. ಇಬ್ಬರು ಪೈಲಟ್‌ಗಳು, ರೋಗಿ ಹಾಗೂ ಅವರ ಇಬ್ಬರು ಸಂಬಂಧಿಕರು, ಒಬ್ಬರು ವೈದ್ಯರು ಮತ್ತು ಒಬ್ಬರು ವೈದ್ಯಕೀಯ ಸಹಾಯಕರು ವಿಮಾನದಲ್ಲಿದ್ದರು ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ರಾಂಚಿ– ದೆಹಲಿ ವಲಯದಲ್ಲಿ ಏರ್ ಆಂಬುಲೆನ್ಸ್ ಆಗಿ ಕಾರ್ಯಾಚರಿಸುತ್ತಿದ್ದ ರೆಡ್‌ಬರ್ಡ್ ಏರ್‌ವೇಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ 'ಬೀಚ್‌ಕ್ರಾಫ್ಟ್ ಸಿ90' ವಿಮಾನವು ಪತನಗೊಂಡಿದೆ' ಎಂದು ಡಿಜಿಸಿಎ ತಿಳಿಸಿದೆ.

ಶೇ 5ರಷ್ಟು ರಾಜಕೀಯ ಮೀಸಲಾತಿಗೆ ಆಗ್ರಹ

ಬೆಂಗಳೂರು: ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 5ರಷ್ಟು ರಾಜಕೀಯ ಮೀಸಲಾತಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಅಂಗವಿಕಲರ ಒಕ್ಕೂಟದ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (ಎಂಆರ್‌ಡಬ್ಲ್ಯು), ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (ವಿಆರ್‌ಡಬ್ಲ್ಯು) ಮತ್ತು ನಗರ ಪುನರ್ವಸತಿ ಕಾರ್ಯಕರ್ತರ (ಯುಆರ್‌ಡಬ್ಲ್ಯು) ಗೌರವ ಧನವನ್ನು ₹ 18 ಸಾವಿರದಿಂದ ₹ 25 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಒಕ್ಕೂಟದ ರಾಜ್ಯ ಅಧ್ಯಕ್ಷ ಶಿವಗೇನಿ ಅತನೂರ್ ಮಾತನಾಡಿ, '2026-27ನೇ ಸಾಲಿನ ಬಜೆಟ್‌ನಲ್ಲಿ ಅಂಗವಿಕಲರಿಗೆ ವಿಶೇಷ ಅನುದಾನ ನೀಡಬೇಕು. ಶಕ್ತಿ ಯೋಜನೆಯಡಿ ಪುರುಷರಿಗೂ ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡಬೇಕು. ಈಗಿನ ಬೆಲೆ ಏರಿಕೆಗೆ ಅನುಗುಣವಾಗಿ ಮಾಶಾಸನವನ್ನು ₹6 ಸಾವಿರಕ್ಕೆ ಹೆಚ್ಚಿಸಬೇಕು. ಅಂಗವಿಕಲರ ಮಕ್ಕಳಿಗೆ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಉಚಿತ ಶಿಕ್ಷಣ ಸಿಗುವಂತಾಗಬೇಕು' ಎಂದು ಆಗ್ರಹಿಸಿದರು.

ವಾಗ್ದೇವಿ ಶಾಲೆಯಲ್ಲಿ ಪುಟಾಣಿ ಪ್ರಪಂಚ

ಪ್ರಜಾವಾಣಿ ವಾರ್ತೆ

ಬೆಂಗಳೂರು ಮಾರತ್‌ಹಳ್ಳಿಯ ವಾಗ್ದೇವಿ ವಿಲಾಸ ಸೂಪರ್ ಶಾಲೆಯಲ್ಲಿ 'ಪುಟಾಣಿ ಪ್ರಪಂಚ' ಮಕ್ಕಳ ಉತ್ಸವವನ್ನು ವಿಶಿಷ್ಟವಾಗಿ ಆಯೋಜಿಸಲಾಗಿತ್ತು.

ಶಿಕ್ಷಣದ ಜತೆಗೆ ಸಾಂಸ್ಕೃತಿಕ ಮೌಲ್ಯಗಳು ಹಾಗೂ ದೇಶಭಕ್ತಿಯ ಭಾವನೆಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಪೋಷಕರಿಂದ ಉತ್ತಮ ಸ್ಪಂದನೆ ದೊರಕಿತು ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.


ಮಾರತ್‌ಹಳ್ಳಿಯ ವಾಗ್ದೇವಿ ಶಾಲೆಯಲ್ಲಿ ನಡೆದ ಪುಟಾಣಿ ಪ್ರಪಂಚ ಕಾರ್ಯಕ್ರಮದಲ್ಲಿ ಗಣ್ಯರು ಭಾಗಿಯಾಗಿದ್ದರು

ಮುಖ್ಯ ಅತಿಥಿಯಾಗಿದ್ದ ನಿವೃತ್ತ ಮೇಜರ್ ಜನರಲ್ ಜಿ.ಡಿ.ಭಕ್ಷಿ ಅವರು, ತಮ್ಮ ಸೇವಾವಧಿಯಲ್ಲಿ ನಡೆದ ಯುದ್ಧ, ಹೋರಾಟಗಳ ನೆನಪುಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡರು.

'ದೇಶಪ್ರೇಮ ಎಂದರೆ ಕೇವಲ ಮಾತಲ್ಲ. ಅದು ಜೀವನ ಮೌಲ್ಯವಾಗಬೇಕು. ದೇಶಭಕ್ತಿಯನ್ನು ಎಂದಿಗೂ ಮರೆಯಬಾರದು' ಎಂದು ಕಿವಿಮಾತು ಹೇಳಿದರು.

ಕಲಾವಿದ ಸುದರ್ಶನ್ ಪಟ್ನಾಯಕ್ ಅವರು ರೂಪಿಸಿದ ಶ್ರೀಕೃಷ್ಣ ಹಾಗೂ ಮೇಜರ್ ಜನರಲ್ ಭಕ್ಷಿ ಅವರ ಸುಂದರ ಮರಳು ಶಿಲ್ಪ ಮನಸೂರೆಗೊಂಡವು.

ವಾಗ್ದೇವಿ ವಿಲಾಸ ಸಂಸ್ಥೆಯ ಅಧ್ಯಕ್ಷ ಕೆ ಹರೀಶ್, ಸಿಇಒ ಶ್ಯಾಲೆಟ್, ಪ್ರಾಂಶುಪಾಲರು ಹಾಗೂ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು.

ಬಜೆಟ್: ಮೂಲಸೌಕರ್ಯಕ್ಕೆ ಒತ್ತು ನೀಡಿ

ಸಂಚಾರ ದಟ್ಟಣೆ ನಿವಾರಿಸಿ



ಇತ್ತೀಚೆಗೆ ಬಜೆಟ್ ಎಂಬುದು ಸಾರ್ವಜನಿಕರ ಅಭಿವೃದ್ಧಿ ಮಾಡುವುದಕ್ಕಿಂತ ಹೆಚ್ಚಾಗಿ ಪಟ್ಟಭದ್ರರ ಜೇಬು ತುಂಬಿಸುವ ಲೆಕ್ಕಾಚಾರವಾಗಿದೆ. ರಾಜಧಾನಿ ಬೆಂಗಳೂರಿನಲ್ಲಿ ಮೂಲಸೌಕರ್ಯ ಅಭಿವೃದ್ಧಿ ಹೆಸರಿನಲ್ಲಿ ಸುರಂಗ ಮಾರ್ಗ ನಿರ್ಮಾಣ ಬೇಡ. ಮುಖ್ಯವಾಗಿ ಸಾರ್ವಜನಿಕ ಶೌಚಾಲಯ ನಿರ್ಮಾಣ, ಪಾದಚಾರಿ ಮಾರ್ಗದ ನಿರ್ವಹಣೆ, ಸಂಚಾರ ದಟ್ಟಣೆ ನಿವಾರಣೆ, ರಸ್ತೆ ಗುಂಡಿಗಳು ಮುಚ್ಚುವುದಕ್ಕೆ ಆದ್ಯತೆ ನೀಡಬೇಕು.

ರಮೇಶ್, ಉತ್ತರಹಳ್ಳಿ

ನಗರದ ರಸ್ತೆಗಳನ್ನು ಅಭಿವೃದ್ಧಿಪಡಿಸಿ



ಬೆಂಗಳೂರು ನಗರದ ಎಲ್ಲ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು. ಇದರ ಜೊತೆಗೆ ಉತ್ತಮ ಸಾರಿಗೆ ಸಂಪರ್ಕದ ವ್ಯವಸ್ಥೆ ಮಾಡಬೇಕು. ಸಂಚಾರ ದಟ್ಟಣೆ ಸಮಸ್ಯೆ ಪರಿಹಾರಕ್ಕೆ ಸಂಬಂಧಿಸಿದ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸಬೇಕು. ಮುಂಬರುವ ಬಜೆಟ್‌ನಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ಆದ್ಯತೆ ನೀಡಬೇಕು.

ಹನಿಯೂರು ಚಂದ್ರೇಗೌಡ, ಬೆಂಗಳೂರು

ಶೌಚಾಲಯಗಳ ಸಂಖ್ಯೆ ಹೆಚ್ಚಿಸಿ



ಬೆಂಗಳೂರು ನಗರಕ್ಕೆ ನಿತ್ಯ ಸಾವಿರಾರು ಮಂದಿ ಬಂದು ಹೋಗುತ್ತಾರೆ. ಆದ್ದರಿಂದ ಮುಖ್ಯವಾಗಿ ಸಾರ್ವಜನಿಕ ಶೌಚಾಲಯಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ನಗರದ ಪ್ರತಿಯೊಂದು ವಾರ್ಡ್‌ನಲ್ಲಿ 100 ಕಾರುಗಳು ಹಾಗೂ 200 ದ್ವಿಚಕ್ರ ವಾಹನಗಳನ್ನು ನಿಲುಗಡೆ ಮಾಡುವ ಸೌಲಭ್ಯ ಕಲ್ಪಿಸಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ

ತ್ಯಾಜ್ಯ ವಿಲೇವಾರಿ ಸಮಸ್ಯೆಗೆ ಪರಿಹಾರ ನೀಡಿ



ಬೆಂಗಳೂರು ನಗರದಲ್ಲಿ ತ್ಯಾಜ್ಯ ವಿಲೇವಾರಿ ಮಾಡುವುದು ಬಹುದೊಡ್ಡ ಸಮಸ್ಯೆ ಆಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಮೂಲಕ ನಗರದ ಸ್ವಚ್ಛತೆಗೆ ಒತ್ತು ನೀಡಬೇಕು. ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಹೆಚ್ಚಿಸಬೇಕು. ಒಳ ಚರಂಡಿ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿ, ಅವುಗಳನ್ನು ನಿರ್ವಹಣೆ ಮಾಡಬೇಕು.

ಶ್ರೀಧರ್ ಹುಟಗಿ, ಬೆಂಗಳೂರು

ಅಭಿವೃದ್ಧಿಗೆ ಒತ್ತು ನೀಡಿ



ಬೆಂಗಳೂರು ನಗರದ ಸಂಚಾರ ದಟ್ಟಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಶಾಲೆಗೆ ಹೋಗುವ ಮಕ್ಕಳು, ಕೆಲಸಕ್ಕೆ ತೆರಳುವ ನೌಕರರು ಸರಿಯಾದ ಸಮಯಕ್ಕೆ ಕಚೇರಿಗೆ ತಲುಪಲು ಆಗುತ್ತಿಲ್ಲ. ಆದ್ದರಿಂದ ಬಜೆಟ್‌ನಲ್ಲಿ ಮೆಟ್ರೊ, ಸುರಂಗ ರಸ್ತೆ ಮತ್ತು ಮೇಲ್ಸೇತುವೆ ಯೋಜನೆಗಳಿಗೆ ಆದ್ಯತೆ ನೀಡಬೇಕು. ಪರಿಸರ ಸ್ನೇಹಿ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬೇಕು.

ಸಿದ್ದು ಮೈದೊಳಲು, ಜ್ಞಾನಭಾರತಿ

ಉದ್ಯಾನಗಳ ಅಭಿವೃದ್ಧಿ ಮಾಡಿ



ಬಜೆಟ್‌ನಲ್ಲಿ ಬೆಂಗಳೂರು ನಗರದ ಅಭಿವೃದ್ಧಿಯ ಜೊತೆಗೆ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಒತ್ತು ನೀಡಬೇಕು. ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆ, ರಸ್ತೆ ಗುಂಡಿಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ತ್ಯಾಜ್ಯ ವಿಲೇವಾರಿಗೆ ಸಮರ್ಪಕ ಯೋಜನೆ ರೂಪಿಸಬೇಕು. ನಗರದಲ್ಲಿ ಇರುವ ಉದ್ಯಾನಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು.

ಸಹನಾ, ಶಿಕ್ಷಕಿ

ಬಜೆಟ್ ನಿರೀಕ್ಷೆ ನೀವೂ ಬರೆಯಿರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ಬಜೆಟ್ ಮಂಡಿಸಲಿದ್ದಾರೆ. ಮೆಟ್ರೊ, ಸುರಂಗ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ, ರಸ್ತೆ, ಶೌಚಾಲಯ, ಪಾದಚಾರಿ ಮಾರ್ಗಗಳ ಅಭಿವೃದ್ಧಿ ಸೇರಿದಂತೆ ರಾಜಧಾನಿಯಲ್ಲಿ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಅನುದಾನದ ಅಗತ್ಯವಿದೆ.

ಜೀವನಮಟ್ಟವನ್ನು ಸುಗಮಗೊಳಿಸಲು ಸರ್ಕಾರ ಬಜೆಟ್‌ನಲ್ಲಿ ಯಾವುದಕ್ಕೆ ಆದ್ಯತೆ ನೀಡಬೇಕು. ತಮ್ಮ ನಿರೀಕ್ಷೆಗಳು ಏನು ಎಂಬುದನ್ನು ಜನರು ಹಂಚಿಕೊಳ್ಳಬಹುದು. 50 ಪದಗಳಿಗೆ ಮೀರದಂತೆ ಬರೆದು, ಭಾವಚಿತ್ರ ಸಮೇತ ಕಳುಹಿಸಬೇಕು.

ವಾಟ್ಸ್‌ಆ್ಯಪ್ ಸಂಖ್ಯೆ: **9606038256**

ಉದ್ಯಮಿ ಸಿ.ಜೆ.ರಾಯ್ ಆತ್ಮಹತ್ಯೆ ಮಾನಸಿಕ ಒತ್ತಡವೂ ಕಾರಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನ್ಫಿಡೆಂಟ್ ಗ್ರೂಪ್ ಸಂಸ್ಥಾಪಕ ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ ಮೊದಲ ಹಂತದ ತನಿಖೆ ಪೂರ್ಣಗೊಳಿಸಿದೆ. ರಾಯ್ ಅವರು ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.


ಸಿ.ಜೆ.ರಾಯ್

ಕಳೆದ 22 ದಿನಗಳಿಂದ ತನಿಖೆ ನಡೆಸಿ ಮಾಹಿತಿ ಕಲೆ ಹಾಕಿರುವ ಎಸ್‌ಐಟಿ, ಕಾನ್ಫಿಡೆಂಟ್ ಗ್ರೂಪ್ ಕಚೇರಿಯಲ್ಲಿ ಗುಂಡು ಹಾರಿಸಿಕೊಂಡಿದ್ದ ಸ್ಥಳದಲ್ಲಿನ ಡಿವಿಆರ್, ಮೊಬೈಲ್, ಎಲೆಕ್ಟ್ರಾನಿಕ್ ಸಾಧನಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಿದೆ. ಘಟನೆ ಕುರಿತು ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಿರುವ ಅಧಿಕಾರಿಗಳು, ತಾಂತ್ರಿಕ ಸಾಕ್ಷ್ಯಾಧಾರ ಗಳ ವರದಿಗಾಗಿ ಕಾಯುತ್ತಿದ್ದಾರೆ. ವರದಿ ಬಂದ ಬಳಿಕ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಕೇರಳದ ಐ.ಟಿ ಅಧಿಕಾರಿಗಳ ತಂಡ ನಾಲ್ಕು ಬಾರಿ ಕಾನ್ಫಿಡೆಂಟ್ ಗ್ರೂಪ್ ಸೇರಿ ಸಿ.ಜೆ.ರಾಯ್‌ಗೆ ಸಂಬಂಧಿಸಿದ ಅನೇಕ ಹಣಕಾಸು ವ್ಯವಹಾರದ ಸ್ಥಳಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿತ್ತು. ಸರ್ಕಾರಕ್ಕೆ ತೆರಿಗೆ ವಂಚನೆ ಆರೋಪದಿಂದಾಗಿ ರಾಯ್ ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ತಜ್ಞ ವೈದ್ಯರ ಬಳಿ ಚಿಕಿತ್ಸೆ ಸಹ ಪಡೆಯುತ್ತಿದ್ದರು. ಮಾನಸಿಕ ಒತ್ತಡವು ಆತ್ಮಹತ್ಯೆಗೆ ಕಾರಣ ಇರಬಹುದು ಎಂಬುದಾಗಿ ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.


'ಹಣ ಹೊಂದಿಸುವ ಒತ್ತಡದಲ್ಲಿದ್ದ ಕಾರಣ ರಾಯ್ ಅವರು ಮನೋವೈದ್ಯರನ್ನು ಆಗಾಗ್ಗೆ ಭೇಟಿ ಮಾಡುತ್ತಿದ್ದರು. ಆತ್ಮಹತ್ಯೆ ಮಾಡಿಕೊಳ್ಳುವ ಎರಡು ದಿನ ಮೊದಲು ಜಯನಗರದ 8ನೇ ಬ್ಲಾಕ್‌ನಲ್ಲಿರುವ ಮನೋವೈದ್ಯಕೀಯ ಆಸ್ಪತ್ರೆಯ ಮನೋವೈದ್ಯರನ್ನು ಭೇಟಿ ಮಾಡಿ, ಒತ್ತಡ ನಿವಾರಣೆ ಸಂಬಂಧ ಚಿಕಿತ್ಸೆ, ಕೌನ್ಸೆಲಿಂಗ್ ಪಡೆದುಕೊಂಡಿದ್ದರು. ರಾಯ್ ಚಿಕಿತ್ಸೆ ಪಡೆದುಕೊಂಡಿದ್ದ ಮನೋವೈದ್ಯರಿಂದಲೂ ಮಾಹಿತಿ ಪಡೆದುಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

ರಾಯ್ ಅವರು ಲ್ಯಾಂಗ್‌ಫೋರ್ಡ್ ರಸ್ತೆಯಲ್ಲಿರುವ ಕಚೇರಿಯಲ್ಲಿ ಜ.30ರಂದು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಜಿ.ರಾಮಕೃಷ್ಣ ಸೇರಿ ಮೂವರಿಗೆ ನಾಡೋಜ

ಹೊಸಪೇಟೆ (ವಿಜಯನಗರ): ಶಿಕ್ಷಣ ತಜ್ಞ ಪ್ರೊ. ಜಿ.ರಾಮಕೃಷ್ಣ, ಶತಾಯುಷಿ ಸಾಹಿತಿ ಪ್ರೊ.ಸಿ.ಮಹದೇವಪ್ಪ ಮತ್ತು ಸಮಾಜ ಸೇವಕ ಎಚ್‌.ಸಿ.ಸತ್ಯನ್ ಅವರು ಪ್ರಸಕ್ತ ಸಾಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವಕ್ಕೆ ಆಯ್ಕೆಯಾಗಿದ್ದಾರೆ.


ಜಿ.ರಾಮಕೃಷ್ಣ


ಸಿ.ಮಹದೇವಪ್ಪ


ಎಚ್‌.ಸಿ.ಸತ್ಯನ್

'ವಿಶ್ವವಿದ್ಯಲಯದ ವಿದ್ಯಾರಣ್ಯ ಆವರಣದ 'ನವರಂಗ' ಬಯಲು ರಂಗಮಂದಿರದಲ್ಲಿ ಮಂಗಳವಾರ ಸಂಜೆ ನಡೆಯುವ 34ನೇ ನುಡಿಹಬ್ಬದಲ್ಲಿ (ಘಟಿಕೋತ್ಸವ) ಕುಲಾಧಿಪತಿಯೂ ಆಗಿರುವ ರಾಜ್ಯಪಾಲ ಥಾವರ್‌ಚಂದ್ರ ಗೆಹಲೋತ್ ಅವರು ನಾಡೋಜ ಗೌರವ ಪ್ರದಾನ ಮಾಡುವರು' ಎಂದು ಕುಲಪತಿ ಪ್ರೊ. ಡಿ.ವಿ.ಪರಮಶಿವಮೂರ್ತಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸತ್ಯನ್ ಅವರ ವಿರುದ್ಧ ಪ್ರಕರಣಗಳಿವೆ ಎಂದು ಆರೋಪಿಸಿ ಎರಡು ಪತ್ರಗಳು ಬಂದಿದ್ದು, ಅದನ್ನು ರಾಜ್ಯಪಾಲರ ಗಮನಕ್ಕೆ ತರಲಾಯಿತು. ನಾಡೋಜ ನೀಡಿ ಗೌರವಿಸುವಂತೆ ರಾಜ್ಯಪಾಲರ ಸೂಚನೆ ಮೇರೆಗೆ ಅವರನ್ನು ಆಯ್ಕೆ ಮಾಡಲಾಗಿದೆ. ಸತ್ಯನ್ ವಿರುದ್ಧ ಗಂಭೀರ ಪ್ರಕರಣಗಳು ಬಾಕಿ ಉಳಿದಿರುವುದು ದೃಢಪಟ್ಟರೆ ಕೊನೆಯ ಕ್ಷಣದಲ್ಲಿ ಗೌರವವನ್ನು ತಡೆಹಿಡಿಯುಲಾಗುವುದು' ಎಂದರು.

ಎಲಿವೇಟೆಡ್ ರೋಟರಿ ಮೇಲ್ಸೇತುವೆ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಮುಖ್ಯ ರಸ್ತೆಯ ಐಒಸಿ ಜಂಕ್ಷನ್‌ನಲ್ಲಿ ಎಲಿವೇಟೆಡ್ ರೋಟರಿ ಮೇಲ್ಸೇತುವೆ ನಿರ್ಮಾಣ ಕುರಿತು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಬಿ-ಸ್ಮೈಲ್ ಹಾಗೂ ಕೆ-ರೈಡ್ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿದರು.

ಐಒಸಿ ಜಂಕ್ಷನ್‌ನಲ್ಲಿ ಸುಮಾರು 3 ಕಿ.ಮೀ.ಗೂ ಹೆಚ್ಚು ಉದ್ದದ ಎಲಿವೇಟೆಡ್ ರೋಟರಿ ಮೇಲ್ಸೇತುವೆ ನಿರ್ಮಾಣ ಹಾಗೂ ಬೈಯ್ಯಪ್ಪನಹಳ್ಳಿ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ ಹೆಚ್ಚುವರಿ ದ್ವಿಪಥ ರೈಲ್ವೆ ಮೇಲ್ಸೇತುವೆ ನಿರ್ಮಾಣದ ಕುರಿತು ಕೆ-ರೈಡ್ ಮತ್ತು ಬಿ-ಸ್ಮೈಲ್ ಅಧಿಕಾರಿಗಳು ಪರಸ್ಪರ ಸಮನ್ವಯ ಸಾಧಿಸಿ, ನಾಗರಿಕರಿಗೆ ತೊಂದರೆ ಉಂಟಾಗದಂತೆ ಏಕಕಾಲದಲ್ಲಿ ಕಾಮಗಾರಿಯನ್ನು ಕೈಗೊಂಡು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಮಹೇಶ್ವರ್‌ರಾವ್ ಸೂಚಿಸಿದರು.

'ರೋಟರಿ ಮೇಲ್ಸೇತುವೆ ನಿರ್ಮಾಣಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪ್ರಸ್ತುತ ಆರ್ಥಿಕ ಬಿಡ್‌ಗಳ ಮೌಲ್ಯಮಾಪನ ಹಂತದಲ್ಲಿದೆ. ಗುತ್ತಿಗೆದಾರರೊಂದಿಗೆ ದರ ನಿಗದಿ ಚರ್ಚೆ ನಡೆಯುತ್ತಿದ್ದು, ಶೀಘ್ರದಲ್ಲೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು. ಸರ್ಕಾರದ ಅನುಮೋದನೆ ದೊರೆತ ನಂತರ ಕಾಮಗಾರಿ ಪ್ರಾರಂಭ ಆಗಲಿದೆ. ಇದೇ ಸ್ಥಳದಲ್ಲಿ ಕೆ-ರೈಡ್‌ನಿಂದ ಬೆಂಗಳೂರು ಉಪನಗರ ರೈಲು ಯೋಜನೆಯ (ಬಿಎಸ್‌ಆರ್‌ಪಿ) ಕಾಮಗಾರಿಯೂ ಪ್ರಾರಂಭವಾಗಲಿದ್ದು, ಸಮನ್ವಯದಿಂದ ಕಾಮಗಾರಿ ಪೂರ್ಣಗೊಳಿಸಬೇಕು' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಾನೂನು ಕೈಗೆತ್ತಿಕೊಳ್ಳಲು ಯಾರಿಗೂ ಅವಕಾಶ ಕೊಡುವುದಿಲ್ಲ: ಜಿ. ಪರಮೇಶ್ವರ

'ರಂಜಾನ್, ಹೋಳಿ: ಎಚ್ಚರಿಕೆಗೆ ಸೂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಜಾನ್ ಮತ್ತು ಹೋಳಿ ಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲು ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹಬ್ಬಗಳ ಆಚರಣೆ ವೇಳೆ ಕಾನೂನು ಕೈಗೆತ್ತಿಕೊಳ್ಳಲು ಯಾರಿಗೂ ಅವಕಾಶ ಕೊಡುವುದಿಲ್ಲ' ಎಂದರು. 'ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಮೆರವಣಿಗೆಯ ಸಂದರ್ಭದಲ್ಲಿ ಅಹಿತಕರ ಘಟನೆ ನಡೆದಿರುವ ಕಾರಣ, ಪೊಲೀಸ್ ಇಲಾಖೆ ಜಾಗ್ರತೆ ವಹಿಸಿದೆ. ಇತರೆ ಕಡೆಗಳಿಗೆ ಹರಡದಂತೆ ಕ್ರಮ ತೆಗೆದುಕೊಳ್ಳಲಾಗಿದೆ' ಎಂದರು.

ಮುಖ್ಯಾಂಶ

- ಪೊಲೀಸ್ ಅಧಿಕಾರಿಗಳಿಗೆ ಗೃಹ ಸಚಿವರ ಸೂಚನೆ
- ಬಾಗಲಕೋಟೆ ಘಟನೆ ಮರುಕಳಿಸದಿರಲು ಮುಂಜಾಗ್ರತೆ

ಬಾಂಗ್ಲಾ ವಲಸಿಗರ ಪತ್ತೆಗೆ ಕಾರ್ಯಾಚರಣೆ: 'ಅಕ್ರಮ ಬಾಂಗ್ಲಾ ವಲಸಿಗರ ಪತ್ತೆಗೆ ಕಳೆದ ಒಂದು ತಿಂಗಳಿಂದ ಎಲ್ಲ ಜಿಲ್ಲೆಗಳಲ್ಲೂ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಅಕ್ರಮ ವಲಸಿಗರು ಕಾಫಿ ತೋಟ, ಕಟ್ಟಡಗಳಲ್ಲಿ ಕೆಲಸ ಮಾಡುತ್ತಾರೆಂಬ ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಿ, ಎಲ್ಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

'ಹೈಕಮಾಂಡ್ ತೀರ್ಮಾನ'

ದಲಿತ ಮುಖ್ಯಮಂತ್ರಿ ಕೂಗು ಕೇಳಿ ಬರುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, 'ಇದೆಲ್ಲ ವಿರೋಧ ಪಕ್ಷದವರು ಮಾಡುತ್ತಿರುವ ಕೆಲಸ. ತಮ್ಮ ವಿಚಾರಗಳನ್ನು ಮುಚ್ಚಿಟ್ಟುಕೊಳ್ಳಲು ಈ ರೀತಿ ಆರೋಪಗಳನ್ನು ಮಾಡುತ್ತಿದ್ದಾರೆ. ದಲಿತ ಮುಖ್ಯಮಂತ್ರಿಯನ್ನು ಕಾಂಗ್ರೆಸ್ ಪಕ್ಷ ಮಾಡಬೇಕಲ್ಲದೆ ಇನ್ನ್ಯಾರು ಮಾಡುತ್ತಾರೆ. ಸಂದರ್ಭ ಬಂದಾಗ ಹೈಕಮಾಂಡ್ ಈ ಬಗ್ಗೆ ತೀರ್ಮಾನ ಮಾಡಲಿದೆ' ಹೇಳಿದರು.



ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸುವ ವಿಚಾರದ ಕುರಿತು ಮಾತನಾಡಿದ ಅವರು, 'ವಿದ್ಯಾರ್ಥಿ ಚುನಾವಣೆ ನಡೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬ ಒತ್ತಡ ಬರುತ್ತಿದೆ. ಈ ಬಗ್ಗೆ ಸಚಿವ ಸಂಪುಟ ನಿರ್ಧರಿಸಲಿದೆ' ಎಂದರು.

ನಗರದಲ್ಲಿ ಇಂದು

ಶ್ರೀ ಸ್ಫೂರ್ತಿ ವಿನಾಯಕ ಸಹಿತ ಸತ್ಯನಾರಾಯಣ ಸ್ವಾಮಿ ದೇವಸ್ಥಾನ ವಾರ್ಷಿಕೋತ್ಸವ, ಬ್ರಹ್ಮ ರಥೋತ್ಸವ: ಹನುಮಂತೋತ್ಸವ ಅಲಂಕಾರ ಸೇವೆ, ಆಯೋಜನೆ ಮತ್ತು ಸ್ಥಳ: ಶ್ರೀ ಸ್ಫೂರ್ತಿ ವಿನಾಯಕ ಸಹಿತ ಸತ್ಯನಾರಾಯಣ ಸ್ವಾಮಿ ದೇವಸ್ಥಾನ, ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 7

ಕಥಾ ಕಮ್ಮಟ: ಸಂಪನ್ಮೂಲ ವ್ಯಕ್ತಿಗಳು: ಬೈರಮಂಗಲ ರಾಮೇಗೌಡ, ಅಮರೇಂದ್ರ ಹೊಲ್ಲಂಬಳ್ಳಿ, ಅಧ್ಯಕ್ಷತೆ: ಐ. ಆನಂದಪ್ಪ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30

ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹ ರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ: ಜಿ.ಪರಮೇಶ್ವರ, ಸ್ಥಳ: ಆರ್.ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಕದಳಿ ಪ್ರಶಸ್ತಿ ಪ್ರದಾನ, ಸನ್ಮಾನ ಸಮಾರಂಭ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಸ್ವೀಕರಿಸುವವರು: ಗೀತಾ ಮಹಾದೇವ ಪ್ರಸಾದ್, ಸನ್ಮಾನ ಸ್ವೀಕರಿಸುವವರು: ಎಸ್.ಜಿ. ಸುಶೀಲಮ್ಮ, ಎಲ್. ರೇವಣಸಿದ್ಧಯ್ಯ, ಸಿ. ಸೋಮಶೇಖರ್, ಅತಿಥಿಗಳು: ಎಂ.ಎಸ್. ಆಶಾದೇವಿ, ಪ್ರಮೀಳಾ ಗರಡಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕದಳಿ ಮಹಿಳಾ ವೇದಿಕೆ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2ರಿಂದ

ಸಂವಾದ ಸಭೆ: ಭಾಗವಹಿಸುವವರು: ಪಿ.ಎಂ. ನರೇಂದ್ರಸ್ವಾಮಿ, ಅತಿಥಿ: ಆರ್. ಗೋಕುಲ್, ಅಧ್ಯಕ್ಷತೆ: ಬಿ.ಆರ್. ಗಣೇಶರಾವ್, ಆಯೋಜನೆ ಮತ್ತು ಸ್ಥಳ: ಕಾಸಿಯಾ, ವಿಜಯನಗರ, ಮಧ್ಯಾಹ್ನ 3

ದಾಸ ತರಂಗಿಣಿ ಗಾಯನ: ಅನಂತ ಮಿಸ್ತ್ರಿ, ಕಿ–ಬೋರ್ಡ್: ವಸಂತರಾವ್ ಕುಂಬ್ಳೆ, ತಬಲಾ: ರೂಪಕ್ ಕಲ್ಲೂರುಕರ್, ತಾಳ: ಸುಧೀಂದ್ರ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ತ್ಯಾಗರಾಜನಗರ, ಸಂಜೆ 6

ಹೊನ್ನಾರು ರಂಗೋತ್ಸವ: 'ಮನಿಯೇ ದೇವರು' ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ರಾಜಾರಾಂ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ರಂಗಗೀತೆಗಳು, ಜನಪದ ಗೀತೆಗಳ ಗಾಯನ: ಪ್ರಸ್ತುತಿ: ಆದಿಮೂಲ ರಂಗತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ದಾಸ ಗಾನ ವೈಭವ: ಗಾಯನ: ಅವನಿ ಭಟ್, ಕಿ–ಬೋರ್ಡ್: ರಾಜೇಂದ್ರ ಬೆಂಡೆ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪ್ರಕಾಶನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

f prajavani.net prajavani | ಮಂಗಳವಾರ, ಫೆಬ್ರುವರಿ 24, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 55 | ಪುಟ 14 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಹೆಟ್ಮೆಯರ್ ಅಬ್ಬರ
ವೆಸ್ಟ್ ಇಂಡೀಸ್‌ನ ಶಿಮ್ರಾನ್ ಹೆಟ್ಮೆಯರ್ (85;34ಎ) ಟಿ20 ವಿಶ್ವಕಪ್‌ನ ಸೂಪರ್ 8ರ ಹಂತದ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಅರ್ಧಶತಕ ದಾಖಲಿಸಿದರು. 107 ರನ್‌ಗಳಿಂದ ವಿಂಡೀಸ್ ಗೆದ್ದಿತು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,294 | ನಿಫ್ಟಿ 25,713 | $/₹ 90.89 | ಚಿನ್ನ (Std. 10g) ₹1,66,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,84,200 (ಬೆಂಗಳೂರು)



ಅಪ್ಪೆಮಿಡಿ: ವಿಶಿಷ್ಟ ತಳಿಗಳ ಭಂಡಾರ ರಕ್ಷಣೆಗೆ ಕೂಗು

• ರಾಜೇಂದ್ರ ಹೆಗಡೆ

ಶಿರಸಿ: ಉತ್ತರ ಕನ್ನಡದ ಅಘನಾಶಿನಿ ನದಿ ಪಾತ್ರದಲ್ಲಿ ಕಂಡುಬರುವ ಅಪರೂಪದ ‘ಅಪ್ಪೆಮಿಡಿ’ ಮಾವಿನ ವೈವಿಧ್ಯ ಸಂರಕ್ಷಣೆಗಾಗಿ ಈ ಪ್ರದೇಶವನ್ನು ‘ಜೀವವೈವಿಧ್ಯ ಪರಂಪರೆ ತಾಣ’ ಎಂದು ಘೋಷಿಸಬೇಕು ಎಂದು ಪರಿಸರ ತಜ್ಞರು ಮತ್ತು ಪರಿಸರ ಪ್ರೇಮಿಗಳು ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ.

30 ಕಿ.ಮೀ ಉದ್ದದ ನದಿದಂಡೆಯಲ್ಲಿನ ಅಪ್ಪೆಮಿಡಿ ವೈವಿಧ್ಯದ ರಕ್ಷಣೆ ಇದರ ಉದ್ದೇಶ. ಮಂಡಳಿಯ ಮಾಜಿ ಅಧ್ಯಕ್ಷ ಅನಂತ ಅಶೀಸರ ಹಾಗೂ ವನ್ಯಜೀವಿ ತಜ್ಞ ಬಾಲಚಂದ್ರ ಸಾಯಿಮನೆ ಈ ಮನವಿ ಸಲ್ಲಿಸಿದ್ದಾರೆ.

‘ಜೈವಿಕ ವೈವಿಧ್ಯ ಕಾಯ್ದೆ 2002ರ ಅನುಬಂಧ 37ರಡಿ ಈ ವಿಶಿಷ್ಟ ಆನುವಂಶಿಕ ಭಂಡಾರವನ್ನು ರಕ್ಷಿಸಬೇಕು’ ಹಕ್ಕೊತ್ತಾಯ ಮಂಡಿಸಿದ್ದಾರೆ. ‘ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕು ವ್ಯಾಪ್ತಿಯ ಸರಕುಳಿಯಿಂದ ಉಂಚಳ್ಳಿ ಜಲಪಾತದವರೆಗಿನ ನದಿ ದಂಡೆಯ ಎರಡೂ ಬದಿಯ 100 ಮೀಟರ್ ವ್ಯಾಪ್ತಿಯನ್ನು ಈ ಸಂರಕ್ಷಿತ ವಲಯದಲ್ಲಿ ಸೇರಿಸಬೇಕು’ ಎಂದು ಕೋರಿದ್ದಾರೆ.

‘ಅಘನಾಶಿನಿ ಯಾವ ಅಣೆಕಟ್ಟುಗಳಿಲ್ಲದ ಮುಕ್ತ ಹರಿವಿನ ನದಿ. ಇಲ್ಲಿನ ವಿಶಿಷ್ಟ ಪರಿಸರ ವ್ಯವಸ್ಥೆಯಲ್ಲಿ ಅನಂತ ಭಟ್ಟನ ಅಪ್ಪೆ, ಜೀರಿಗೆ ಮಿಡಿ, ಕಂಚಪ್ಪೆ ಮತ್ತು ಗಿಳಿಸುಂಡಿಯಂಥ ನೂರಾರು ಅಪರೂಪದ ಅಪ್ಪೆಮಿಡಿ ತಳಿಗಳಿವೆ. ಇತ್ತೀಚಿನ ಅಧ್ಯಯನವೊಂದರ ಪ್ರಕಾರ, 10 ಕಿ.ಮೀ. ವ್ಯಾಪ್ತಿಯಲ್ಲಿ ವಿಶಿಷ್ಟ ಪರಿಮಳ ಹಾಗೂ ರುಚಿಯ ಸಾವಿರಕ್ಕೂ ಹೆಚ್ಚು ಮರಗಳಿವೆ’ ಎಂದು ಅನಂತ ಅಶೀಸರ ಉಲ್ಲೇಖಿಸಿದ್ದಾರೆ.

> **ಅಪ್ಪೆಮಿಡಿಗಳು ಕೇವಲ ಸಾಂಪ್ರದಾಯಿಕ ಉಪ್ಪಿನಕಾಯಿ ತಯಾರಿಕೆಗೆ ಸೀಮಿತವಾಗಿಲ್ಲ. ಇವು ಹವಾಮಾನ ವೈಪರೀತ್ಯ ತಡೆಯಬಲ್ಲ ಮತ್ತು ಕೀಟ ನಿರೋಧಕ ಶಕ್ತಿಯುಳ್ಳ ಅಮೂಲ್ಯ ಆನುವಂಶಿಕ ಸಂಪನ್ಮೂಲಗಳಾಗಿವೆ**
> **ಅನಂತ ಅಶೀಸರ,** ಜೀವವೈವಿಧ್ಯ ಮಂಡಳಿ ಮಾಜಿ ಅಧ್ಯಕ್ಷ

‘2023ರಲ್ಲಿ ಅಘನಾಶಿನಿ ಮುಖಜ ಭೂಮಿಗೆ ‘ರಾಮ್‌ಸರ್ ತಾಣ’ದ ಮಾನ್ಯತೆ ಸಿಕ್ಕ ಬೆನ್ನಲ್ಲೇ, ನದಿ ಮೇಲ್ಭಾಗದ ಜೈವಿಕ ಸಂಪತ್ತು ಉಳಿಸುವ ತುರ್ತು ಅಗತ್ಯ ಕುರಿತು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಪ್ರಸ್ತುತ ಇಲ್ಲಿ ಅತಿಕ್ರಮಣ, ವಾಣಿಜ್ಯ ಏಕದಳ ಕೃಷಿ, ಹವಾಮಾನ ಬದಲಾವಣೆಯಂಥ ಬೆದರಿಕೆ ಇದೆ’ ಎಂದಿದ್ದಾರೆ.

ಈ ವ್ಯಾಪ್ತಿಯ ಅಣಲೆಬೈಲ್, ನೆಗ್ಗು, ಕಾನಸೂರು, ಹಸರಗೋಡು, ಹಾರ್ಸಿಕಟ್ಟಾ, ಸೋವಿನಕೊಪ್ಪ ಮತ್ತು ಹೆಗ್ಗರಣೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಸಮುದಾಯದ ಸಹಭಾಗಿತ್ವದೊಂದಿಗೆ ಜೀನ್ ಮ್ಯಾಪಿಂಗ್, ಪಾರಂಪರಿಕ ಹಬ್ಬಗಳು ಮತ್ತು ಸಂಶೋಧನಾ ಕಾರ್ಯಕ್ರಮ ಹಮ್ಮಿಕೊಳ್ಳುವ ಉದ್ದೇಶವಿದೆ.

‘ಜೀವವೈವಿಧ್ಯ ಪರಂಪರೆ ತಾಣ’ ಘೋಷಣೆ ಬೇಡಿಕೆಗೆ ಮಾನ್ಯತೆ ಸಿಕ್ಕರೆ, ಸ್ಥಳೀಯ ಕೃಷಿಕರ ಹಕ್ಕುಗಳಿಗೆ ಆದ್ಯತೆ ಸಿಗುತ್ತದೆ. ಅಲ್ಲದೇ, ಪಶ್ಚಿಮ ಘಟ್ಟಗಳ ಈ ಅಪರೂಪದ ಜೈವಿಕ ಹಾಗೂ ಸಾಂಸ್ಕೃತಿಕ ಪರಂಪರೆಯು ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ಹಸ್ತಾಂತರವಾಗಲಿದೆ’ ಎಂದು ಬಾಲಚಂದ್ರ ಸಾಯಿಮನೆ ಅವರು ಅಭಿಪ್ರಾಯಪಟ್ಟರು.

ಗ್ರಾಮೀಣ ‘ಉದ್ಯೋಗ’ಕ್ಕೆ ಗ್ರಹಣ

2026–27ನೇ ಸಾಲಿನ ಚಟುವಟಿಕೆಗಳಿಗೆ ಸಿದ್ಧವಾಗದ ಕ್ರಿಯಾ ಯೋಜನೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ನರೇಗಾ ರದ್ದುಪಡಿಸಿ, ಅದರ ಬದಲಿಗೆ ಕೇಂದ್ರ ಸರ್ಕಾರ ರೂಪಿಸಿರುವ ‘ವಿಬಿ ಜಿ ರಾಮ್ ಜಿ’ ಯೋಜನೆಯನ್ನು 2026–27ನೇ ಸಾಲಿನಿಂದ ಜಾರಿಗೊಳಿಸಲು ಅಗತ್ಯ ಕ್ರಿಯಾ ಯೋಜನೆಯನ್ನು ರಾಜ್ಯ ಸರ್ಕಾರ ಸಿದ್ಧಪಡಿಸದ ಕಾರಣ ಗ್ರಾಮೀಣ ಜನರಿಗೆ ಉದ್ಯೋಗದ ‘ಖಾತ್ರಿ’ ಅನಿಶ್ಚಿತವಾಗಿದೆ.

ನರೇಗಾ ಯೋಜನೆಯನ್ನು ಬರುವ ಆರ್ಥಿಕ ವರ್ಷದಲ್ಲಿ ಅನುಷ್ಠಾನಗೊಳಿಸುವ ಕುರಿತು ಆಯಾ ಪಂಚಾಯಿತಿಗಳು ಅಗತ್ಯ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ 2025ರ ಸೆಪ್ಟೆಂಬರ್‌ನಲ್ಲೇ ಗ್ರಾಮೀಣಾಭಿವೃದ್ಧಿ ಇಲಾಖೆ ಸುತ್ತೋಲೆ ಹೊರಡಿಸಿತ್ತು. ಅದೇ ವರ್ಷದ ಅಕ್ಟೋಬರ್ 2ರಿಂದ ಸಿದ್ಧತಾ ಕಾರ್ಯ ಆರಂಭಿಸಿ, 2026ರ ಫೆಬ್ರುವರಿ 20ರ ಒಳಗೆ ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಆದರೆ, ನರೇಗಾ ಯೋಜನೆಯೇ ರದ್ದಾದ ಕಾರಣ ಕ್ರಿಯಾ ಯೋಜನೆಯ ಪ್ರಕ್ರಿಯೆಗಳು ಸ್ಥಗಿತವಾಗಿವೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ‘ನರೇಗಾ ಬಚಾವೋ’ ಆಂದೋಲನ ಹಮ್ಮಿಕೊಂಡಿರುವುದರಿಂದಾಗಿ, ಮುಂದೇನು ಮಾಡಬೇಕೆಂಬ ದಿಕ್ಕು ತೋಚದ ಸ್ಥಿತಿಯಲ್ಲಿ ಅಧಿಕಾರಿಗಳಿದ್ದಾರೆ.

> **ಕ್ರಿಯಾ ಯೋಜನೆ ಸಿದ್ಧವಾಗದೆ ಇರುವುದು ಗ್ರಾಮೀಣ ಕೂಲಿ ಕಾರ್ಮಿಕರ ಭವಿಷ್ಯವನ್ನೇ ಮಂಕಾಗಿಸಿದೆ ಕೇಂದ್ರ, ರಾಜ್ಯ ಸರ್ಕಾರಗಳು ಹಗೆತನ ಬಿಟ್ಟು ಯೋಜನೆ ಜಾರಿಗೊಳಿಸಬೇಕು**
> **ಕಾಡಶೆಟ್ಟಿಹಳ್ಳಿ ಸತೀಶ್,** ಅಧ್ಯಕ್ಷ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

ಕೇಂದ್ರ ಸರ್ಕಾರ 2005ರಲ್ಲಿ ‘ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ’ ಕಾಯ್ದೆಯನ್ನು ಜಾರಿಗೆ ತಂದಿತು. 2006ರಲ್ಲಿ ಕಾರ್ಯರೂಪಕ್ಕೆ ತರಲಾಯಿತು.

▶10



ಚಿಕ್ಕಬಳ್ಳಾಪುರದಲ್ಲಿ ನಡೆದ ‘ಮನರೇಗಾ ಬಚಾವೋ ಸಂಗ್ರಾಮ’ ಪ್ರತಿಭಟನಾ ಸಮಾವೇಶಕ್ಕೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮಣ್ಣು ಹೊರುವ ಮೂಲಕ ಚಾಲನೆ ನೀಡಿದರು — ಪ್ರಜಾವಾಣಿ ಚಿತ್ರ

- **71.18 ಲಕ್ಷ** ಕರ್ನಾಟಕದಲ್ಲಿರುವ ನರೇಗಾ ಕಾರ್ಮಿಕರು
- **36.75 ಲಕ್ಷ** ಮಹಿಳಾ ಕಾರ್ಮಿಕರು
- **9 ಕೋಟಿ** 2025–26ನೇ ಸಾಲಿಗೆ ನಿಗದಿಪಡಿಸಿದ್ದ ಮಾನವ ದಿನಗಳು
- **₹11,553 ಕೋಟಿ** ಮೂರು ವರ್ಷಗಳಲ್ಲಿ ನೀಡಿದ ಕೂಲಿಯ ಮೊತ್ತ

ಹೊಸ ನೀತಿ ಅನಾವರಣಗೊಳಿಸಿದ ಗೃಹ ಸಚಿವಾಲಯ

ಉಗ್ರರ ನಿಗ್ರಹಕ್ಕೆ ‘ಪ್ರಹಾರ್’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕಲು ಮತ್ತು ಉಗ್ರರ ದಾಳಿಗೆ ತಕ್ಕ ಪ್ರತಿಕ್ರಿಯೆ ನೀಡುವ ಕಾರ್ಯತಂತ್ರ ಒಳಗೊಂಡ ದೇಶದ ಮೊತ್ತಮೊದಲ ಭಯೋತ್ಪಾದಕ ನಿಗ್ರಹ ನೀತಿ ‘ಪ್ರಹಾರ್’ ಅನ್ನು ಕೇಂದ್ರ ಗೃಹ ಸಚಿವಾಲಯ ಸೋಮವಾರ ಅನಾವರಣಗೊಳಿಸಿದೆ.

ಭಯೋತ್ಪಾದನೆ ನಿಗ್ರಹ ಕಾರ್ಯದಲ್ಲಿ ತೊಡಗಿರುವ ಏಜೆನ್ಸಿಗಳ ನಡುವೆ ಸಮನ್ವಯತೆ ಸಾಧಿಸುವುದು, ತನಿಖೆಯ ಪ್ರತಿಯೊಂದು ಹಂತದಲ್ಲೂ ಕಾನೂನು ತಜ್ಞರ ಸೇವೆ ಲಭ್ಯವಾಗುವಂತೆ ಮಾಡುವುದು ಹಾಗೂ ಭಯೋತ್ಪಾದಕರಿಗೆ ಹಣಕಾಸಿನ ನೆರವು, ಶಸ್ತ್ರಾಸ್ತ್ರಗಳು ಲಭ್ಯವಾಗುವುದನ್ನು ತಡೆಯುವ ಗುರಿಯನ್ನು ಈ ನೀತಿ ಹೊಂದಿದೆ.

ಗೃಹ ಸಚಿವಾಲಯ ಸಿದ್ಧಪಡಿಸಿರುವ ‘ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ನೀತಿ ಮತ್ತು ಕಾರ್ಯತಂತ್ರ’ ನೀತಿಯು, ‘ದೇಶದ ಒಳಗಿನ ಮತ್ತು ಹೊರಗಿನ ಕೆಲವು ಶಕ್ತಿಗಳು ಡ್ರೋನ್‌ಗಳು ಹಾಗೂ ರೊಬಾಟಿಕ್ಸ್ ಅನ್ನು ಭಯೋತ್ಪಾದನೆಗಾಗಿ ದುರುಪಯೋಗಪಡಿಸಿಕೊಳ್ಳುವುದು’ ಕಳವಳಕ್ಕೆ ಕಾರಣವಾಗಿದೆ ಎಂದು ಹೇಳಿದೆ.

▶11

ದೇಶ ಎದುರಿಸುತ್ತಿರುವ ಬೆದರಿಕೆ...

- ಅಲ್ ಕೈದಾ, ಐಸಿಸ್ ಸೇರಿದಂತೆ ಇತರ ಭಯೋತ್ಪಾದಕರ ಸಂಘಟನೆಗಳ ಗುರಿಯಾಗಿರುವುದು
- ಗಡಿಯಾಚೆಗಿನ ಹ್ಯಾಂಡ್ಲರ್ ಗಳಿಂದ ಡ್ರೋನ್‌ಗಳು ಸೇರಿದಂತೆ ಆಧುನಿಕ ತಂತ್ರಜ್ಞಾನದ ಬಳಕೆ
- ಕ್ರಿಮಿನಲ್ ನೆಟ್‌ವರ್ಕ್‌ಗಳನ್ನು ಬಳಸಿ ಉಗ್ರರನ್ನು ನೇಮಿಸಿಕೊಳ್ಳುವುದು
- ಉಗ್ರರಿಂದ ಕೋಡ್ ವರ್ಡ್‌ಗಳು, ಡಾರ್ಕ್ ವೆಬ್, ಕ್ರಿಪ್ಟೊ ವ್ಯಾಲೆಟ್‌ಗಳ ಬಳಕೆ
- ಡ್ರೋನ್‌ಗಳು, ರೊಬಾಟಿಕ್ಸ್ ಗಳ ದುರುಪಯೋಗ
- ಕ್ರಿಮಿನಲ್ ಹ್ಯಾಕರ್‌ಗಳು, ಸೈಬರ್ ದಾಳಿ ಮೂಲಕ ದೇಶವನ್ನು ಗುರಿಯಾಗಿಸಿರುವುದು

‘ಪ್ರಹಾರ್’ ನೀತಿಯ 7 ಅಂಶಗಳು

- ಭಯೋತ್ಪಾದಕ ದಾಳಿಗಳನ್ನು ತಡೆಗಟ್ಟುವುದು
- ದಾಳಿ ನಡೆದಾಗ ತಕ್ಷಣ ಪ್ರತಿಕ್ರಿಯಿಸುವುದು
- ಉಗ್ರರ ವಿರುದ್ಧದ ಹೋರಾಟಕ್ಕೆ ದೇಶದ ಎಲ್ಲ ಆಂತರಿಕ ಸಾಮರ್ಥ್ಯಗಳನ್ನು ಒಗ್ಗೂಡಿಸುವುದು
- ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆ ಸಂದರ್ಭ ಮಾನವ ಹಕ್ಕುಗಳು ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು
- ಭಯೋತ್ಪಾದನೆ ಪ್ರೋತ್ಸಾಹಿಸುವ ಪರಿಸ್ಥಿತಿಗಳನ್ನು ದುರ್ಬಲಗೊಳಿಸುವುದು
- ಭಯೋತ್ಪಾದನೆಯನ್ನು ಎದುರಿಸಲು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಪ್ರಯತ್ನಗಳನ್ನು ಒಂದುಗೂಡಿಸುವುದು
- ಭಯೋತ್ಪಾದಕ ದಾಳಿ ನಡೆದರೆ ಸಂಪೂರ್ಣ ಸಮಾಜವನ್ನು ತೊಡಗಿಸಿಕೊಂಡು ಪುನರ್ರಚನೆ ಮತ್ತು ಪುನಶ್ಚೇತನಕ್ಕೆ ಪ್ರಯತ್ನಿಸುವುದು

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬ್ಯಾಂಕ್ ನೌಕರರೇ ಶಾಮೀಲು

₹590 ಕೋಟಿ ವಂಚನೆ

ಮುಂಬೈ/ನವದೆಹಲಿ (ಪಿಟಿಐ): ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನಲ್ಲಿನ ಹರಿಯಾಣ ಸರ್ಕಾರಕ್ಕೆ ಸೇರಿದ ಖಾತೆಗಳಲ್ಲಿ ಒಟ್ಟು ₹590 ಕೋಟಿ ಮೊತ್ತದ ವಂಚನೆ ನಡೆದಿರುವುದರಲ್ಲಿ ಬ್ಯಾಂಕ್‌ನ ನೌಕರರು ಮತ್ತು ಹೊರಗಿನವರ ಪಾತ್ರ ಇದೆ ಎಂದು ಬ್ಯಾಂಕ್‌ನ ಸಿಇಒ ವಿ. ವೈದ್ಯನಾಥನ್ ಹೇಳಿದ್ದಾರೆ.

ವಂಚನೆಯ ಮೊತ್ತವನ್ನು ಭರಿಸುವುದಕ್ಕಾಗಿ ಬ್ಯಾಂಕ್ ಒಂದಿಷ್ಟು ಮೊತ್ತವನ್ನು ತೆಗೆದಿರಿಸಬೇಕಾಗುತ್ತದೆ. ಆದರೆ, ಇದರಿಂದಾಗಿ ಬ್ಯಾಂಕ್‌ನ ಲಾಭದ ಮೇಲೆ ದೊಡ್ಡ ಪರಿಣಾಮ ಆಗುವ ಸಾಧ್ಯತೆ ಇಲ್ಲ ಎಂದು ಅವರು ಬ್ಯಾಂಕ್‌ನ ಹೂಡಿಕೆದಾರರು ಹಾಗೂ ಮಾರುಕಟ್ಟೆ ತಜ್ಞರನ್ನು ಉದ್ದೇಶಿಸಿ ಹೇಳಿದ್ದಾರೆ.

ವಂಚನೆಗೆ ಸಂಬಂಧಿಸಿದಂತೆ ವಿಧಿವಿಜ್ಞಾನ ಲೆಕ್ಕಪರಿಶೋಧನೆ ನಡೆಸುವಂತೆ ಕೆಪಿಎಂಜಿ ಸಂಸ್ಥೆಯನ್ನು ಕೋರಲಾಗಿದೆ, ಲೆಕ್ಕಪರಿಶೋಧನೆಯು ನಾಲ್ಕರಿಂದ ಐದು ವಾರಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಅವರು ವಿವರಿಸಿದ್ದಾರೆ.

ನಕಲಿ ಚೆಕ್‌ಗಳನ್ನು ಬಳಸಿ ನಡೆಸಿದ ವಹಿವಾಟಿನ ಮೂಲಕ ವಂಚನೆ ಎಸಗಲಾಗಿದೆ, ವಂಚನೆಯು ಒಂದು ಶಾಖೆಗೆ ಸೀಮಿತವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಆರ್‌ಬಿಐ ನಿಗಾ: ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನಲ್ಲಿನ ಬೆಳವಣಿಗೆಗಳನ್ನು ಆರ್‌ಬಿಐ ಗಮನಿಸುತ್ತಿದೆ ಎಂದು ಗವರ್ನರ್ ಸಂಜಯ್ ಮಲ್ಹೋತ್ರಾ ಸುದ್ದಿಗಾರರ ಬಳಿ ಹೇಳಿದ್ದಾರೆ.

ಕುಸಿದ ಷೇರು: ವಂಚನೆ ಪ್ರಕರಣ ಬಯಲಾದ ನಂತರದಲ್ಲಿ ಐಡಿಎಫ್‌ಸಿ ಫಸ್ಟ್ ಬ್ಯಾಂಕ್‌ನ ಷೇರು ಮೌಲ್ಯವು ಶೇ 19.99ರವರೆಗೆ ಕುಸಿದಿದೆ.

ಆಂಧ್ರ: ಕಲಬೆರಕೆ ಹಾಲು ಕುಡಿದು ನಾಲ್ವರ ಸಾವು

ರಾಜಮಹೇಂದ್ರವರಂ (ಪಿಟಿಐ): ಆಂಧ್ರ ಪ್ರದೇಶದ ಪೂರ್ವ ಗೋದಾವರಿ ಜಿಲ್ಲೆಯ ರಾಜಮಹೇಂದ್ರವರಂನಲ್ಲಿ ಅನಧಿಕೃತ ಮಾರಾಟಗಾರರಿಂದ ಪೂರೈಕೆಯಾದ ಕಲಬೆರಕೆ ಹಾಲು ಕುಡಿದು ಎರಡು ದಿನಗಳಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ಭಾನುವಾರ ಇಬ್ಬರು ಮತ್ತು ಸೋಮವಾರ ಇಬ್ಬರು ಮೃತಪಟ್ಟಿದ್ದಾರೆ. ಅಲ್ಲದೆ 12 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಕೀರ್ತಿ ಚೇಕುರಿ ಸೋಮವಾರ ಮಾಹಿತಿ ನೀಡಿದರು.

ಕಲಬೆರಕೆ ಹಾಲು ಸೇವನೆಯಿಂದ ಮೂತ್ರಪಿಂಡ ವೈಫಲ್ಯ ಆಗಿ, ಮೂತ್ರ ವಿಸರ್ಜನೆ ಕಷ್ಟವಾಗಿ ಸಾವು ಸಂಭವಿಸಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಇಲ್ಲಿನ ಉತ್ತರ ವಲಯದ ಡಿಎಸ್‌ಪಿ ವೈ. ಶ್ರೀಕಾಂತ್ ಮಾಹಿತಿ ನೀಡಿದರು.

▶11

ಮಕ್ಕಳಿಗೆ ಮೊಬೈಲ್ ನಿರ್ಬಂಧ ನೀತಿ ರಚನೆಗಾಗಿ ಶೀಘ್ರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲಾ ಹಂತದವರೆಗಿನ (16 ವರ್ಷ) ಮಕ್ಕಳು ಮೊಬೈಲ್ ಬಳಸುವುದರ ಮೇಲೆ ನಿರ್ಬಂಧ ವಿಧಿಸುವ ಕುರಿತು ಅಧ್ಯಯನ ನಡೆಸಿ ವರದಿ ನೀಡಲು ಶಿಕ್ಷಣ, ವೈದ್ಯಕೀಯ ಹಾಗೂ ತಾಂತ್ರಿಕ ತಜ್ಞರನ್ನು ಒಳಗೊಂಡ ಉನ್ನತ ಸಮಿತಿ ರಚಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಅಧಿಕಾರಿಗಳು, ಶಿಕ್ಷಣ ಕ್ಷೇತ್ರದ ಪ್ರಗತಿಗೆ ಶ್ರಮಿಸುತ್ತಿರುವ ತಜ್ಞರು, ಮನೋವೈದ್ಯರು ಹಾಗೂ ತಾಂತ್ರಿಕ ತಜ್ಞರು ಸಮಿತಿಯಲ್ಲಿ ಇರಲಿದ್ದು, ಮಕ್ಕಳ ಮೊಬೈಲ್ ಗೀಳಿನ ಪ್ರಮಾಣ, ಮೊಬೈಲ್ ಬಳಕೆಯಿಂದ ಶಿಕ್ಷಣದ ಮೇಲೆ ಬೀರುತ್ತಿರುವ ಪರಿಣಾಮ, ಅನುಕೂಲ, ಆರೋಗ್ಯ ಸಮಸ್ಯೆಗಳನ್ನು ಅಧ್ಯಯನ ಮಾಡಲಿದ್ದಾರೆ.

> **ಹಲವು ರಾಷ್ಟ್ರಗಳು ಮೊಬೈಲ್ ಬಳಕೆ ನಿಷೇಧ ಮಾಡಿದ್ದರೂ ದೀರ್ಘಕಾಲದ ಪರಿಹಾರ ಸಿಕ್ಕಿಲ್ಲ. ಹಾಗಾಗಿ, ಮಕ್ಕಳ ವಯಸ್ಸು ಸೇರಿದಂತೆ ಹಲವು ಅಂಶಗಳನ್ನು ಪರಿಗಣಿಸಿ ನೀತಿ ರೂಪಿಸಬೇಕು**
> **ಡಿ.ಶಶಿಕುಮಾರ್,** ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರಾಥಮಿಕ, ಪ್ರೌಢಶಾಲಾ ಆಡಳಿತ ಮಂಡಳಿಗಳ ಒಕ್ಕೂಟ

▶6

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಗಸ ಇರಲಿದೆ.

ದ್ವೈವಾರ್ಷಿಕ ಕಾರ್ಯಕ್ರಮ

ಬೆಂಗಳೂರು: ಭಾರತೀಯ ಕಾಂಕ್ರೀಟ್ ಸಂಸ್ಥೆಯಿಂದ (ಐಸಿಐ) ಫೆ.25 ಹಾಗೂ 26ರಂದು ಬೆಂಗಳೂರಿನ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ದ್ವೈವಾರ್ಷಿಕ ಕಾರ್ಯಕ್ರಮ ಡೆಮಿನಾರ್–2026 ಹಮ್ಮಿಕೊಳ್ಳಲಾಗಿದೆ.

'ವಿಬಿ ಜಿ ರಾಮ್‌ಜಿ ಕಾಯ್ದೆ ಜಾರಿ ತಡೆಯಲಾಗದು'

ಬೆಂಗಳೂರು: ಕಾಂಗ್ರೆಸ್‌ನವರು ಎಷ್ಟೇ ಪ್ರತಿಭಟನೆ ಮಾಡಿದರೂ 'ವಿಬಿ ಜಿ ರಾಮ್‌ಜಿ' ಕಾಯ್ದೆ ಜಾರಿಗೆ ತಡೆಯಲು ಸಾಧ್ಯವಿಲ್ಲ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ವಿಬಿ ಜಿ ರಾಮ್‌ಜಿ ಕಾಯ್ದೆ ವಿರುದ್ಧ ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ನಡೆಸಿದ ಪ್ರತಿಭಟನೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಈ ಕಾಯ್ದೆಗೆ ದೇಶ ವ್ಯಾಪಿ ಜನರ ಬೆಂಬಲ ಸಿಕ್ಕಿದೆ. ಅದನ್ನು ವಾಪಸ್ ಪಡೆಯುವ ಸಂದರ್ಭ ಒದಗಿ ಬರುವುದಿಲ್ಲ' ಎಂದು ತಿಳಿಸಿದರು.

ಎಐ ಶೃಂಗಸಭೆ ವಿರೋಧಿಸಲು ಎಷ್ಟು ಬಟ್ಟೆ ಬಿಚ್ಚಿಕೊಂಡಿದ್ದಾರೊ ಅದಕ್ಕಿಂತ ಹೆಚ್ಚು ಬಟ್ಟೆ ಬಿಚ್ಚಿ ಕೊಂಡರೂ ಸರಿ ವಿಬಿ ಜಿ ರಾಮ್‌ಜಿ ಕಾಯ್ದೆ ಜಾರಿ ಆಗಿಯೇ ಆಗುತ್ತದೆ ಎಂದರು.

ಮಾರ್ಚ್ 1ರಂದು ಪೊಲೀಸ್ ಓಟ

5 ಕಿ.ಮೀ, 10 ಕಿ.ಮೀ. ಓಟದ ಸ್ಪರ್ಧೆ
ಎಲ್ಲಾ ವಯೋಮಾನದವರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಯೋಗದಲ್ಲಿ ಮೂರನೇ ಆವೃತ್ತಿಯ ಪೊಲೀಸ್ ಓಟವನ್ನು (ಕೆಎಸ್‌ಪಿ ರನ್) ಮಾರ್ಚ್ 1ರಂದು ನಗರದಲ್ಲಿ ಆಯೋಜಿಸಲಾಗಿದೆ.

ಪೊಲೀಸ್ ಪ್ರಧಾನ ಕಚೇರಿಯಲ್ಲಿ ಸೋಮವಾರ ಮೂರನೇ ಆವೃತ್ತಿಯ ಓಟದ ಸ್ಪರ್ಧಿಗಳಿಗೆ ನೀಡುವ ಟೀ ಶರ್ಟ್ ಹಾಗೂ ವಿಜೇತರಿಗೆ ನೀಡುವ ಪದಕಗಳನ್ನು ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿ-ಐಜಿಪಿ) ಎಂ.ಎ.ಸಲೀಂ, ನಗರ ಪೊಲೀಸ್ ಕಮಿಷನರ್ ಸೀಮಂತ ಕುಮಾರ್ ಸಿಂಗ್, ಎಸ್‌ಬಿಐ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಅನಾವರಣಗೊಳಿಸಿದರು.

'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಎಂಬ ಘೋಷವಾಕ್ಯದಡಿ ಈ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. 'ಹಸಿರು ಬೆಂಗಳೂರು', 'ಡ್ರಗ್ ಮುಕ್ತ ಕರ್ನಾಟಕ', 'ಸೈಬರ್ ಅಪರಾಧ' ಕುರಿತು ಜಾಗೃತಿ ಮೂಡಿಸಲಾಗುವುದು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಂ.ಎ.ಸಲೀಂ, 'ಸ್ಪರ್ಧೆಗೆ 9 ಸಾವಿರ ಮಂದಿ ಹೆಸರು ನೋಂದಾಯಿಸಿ ಕೊಂಡಿದ್ದಾರೆ. ನೋಂದಣಿಗೆ ಇನ್ನೂ ಅವಕಾಶ ಇದೆ. ಹಾಗಾಗಿ ಈ ಬಾರಿ 12 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಲು ಎಲ್ಲಾ ವಯೋಮಾನದವರಿಗೂ ಅವಕಾಶ ಕಲ್ಪಿಸಲಾಗಿದೆ' ಎಂದರು.

ವಿಧಾನಸೌಧದ ಮೆಟ್ಟಿಲುಗಳ ಮುಂದೆ ಅಂದು ಬೆಳಿಗ್ಗೆ 6 ಗಂಟೆಗೆ ಗೃಹ ಸಚಿವ ಜಿ.ಪರಮೇಶ್ವರ ಸ್ಪರ್ಧೆಗೆ ಚಾಲನೆ ನೀಡುವರು. ವಿಧಾನ ಸೌಧದಿಂದ ಆರಂಭಗೊಳ್ಳುವ ಓಟ, ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ, ವಿಧಾನಸೌಧದ ಮುಂಭಾಗ ಮುಕ್ತಾಯಗೊಳ್ಳಲಿದೆ. 10 ಕಿ.ಮೀ. ಓಟದ ಸ್ಪರ್ಧೆ ಅನುಭವಿ ಓಟಗಾರರಿಗೆ ಹಾಗೂ 5 ಕಿ.ಮೀ. ಸ್ಪರ್ಧೆಯಲ್ಲಿ ಎಲ್ಲರೂ ಭಾಗವಹಿಸಬಹುದು. ಎರಡು ವಿಭಾಗದ ವಿಜೇತರಿಗೆ ₹18 ಲಕ್ಷ ನಗದು ಬಹುಮಾನ ಕೊಡಲಾಗುವುದು. ಪೊಲೀಸರಿಗೆ 'ಫಿಟ್‌ನೆಸ್' ಮುಖ್ಯ. ಈ ಬಾರಿ ಓಟದಲ್ಲಿ 3,000 ಪೊಲೀಸ್ ಸಿಬ್ಬಂದಿ ಭಾಗವಹಿಸುತ್ತಿರುವುದು ವಿಶೇಷ. 90 ವರ್ಷ ಮೇಲ್ಪಟ್ಟವರು ಹಾಗೂ ಅಂಗವಿಕಲರು ಕೂಡ ಭಾಗವಹಿಸುತ್ತಿದ್ದಾರೆ. ಮಾರ್ಚ್ 1ರಂದು ಏಕಕಾಲಕ್ಕೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪೊಲೀಸ್ ಓಟ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಐಜಿಪಿ ಸಂದೀಪ್ ಪಾಟೀಲ್, ಡಿಸಿಪಿ ಅಕ್ಷಯ್ ಹಾಕೆ, ಎಸ್‌ಬಿಐ ಸಂಸ್ಥೆ ಅಧ್ಯಕ್ಷ ನಾಗರಾಜ ಅಡಿಗ ಹಾಜರಿದ್ದರು.



ಪೊಲೀಸ್ ಓಟದಲ್ಲಿ ಪಾಲ್ಗೊಳ್ಳುವವರಿಗೆ ನೀಡುವ ಟೀ ಶರ್ಟ್ ಅನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ (ಎಡದಿಂದ ಮೂರನೇಯವರು) ಅನಾವರಣ ಮಾಡಿದರು. ಸಂದೀಪ್ ಪಾಟೀಲ್, ಸೀಮಂತ್ ಕುಮಾರ್ ಸಿಂಗ್, ಜೂಹಿ ಸ್ಮಿತಾ ಸಿನ್ಹಾ, ನಾಗರಾಜ ಅಡಿಗ, ಅಕ್ಷಯ್ ಹಾಕೆ ಉಪಸ್ಥಿತರಿದ್ದರು

'ಟ್ಯಾಂಕರ್ ಮಾಫಿಯಾಕ್ಕೆ ಸರ್ಕಾರ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟ್ಯಾಂಕರ್ ಮಾಫಿಯಾಕ್ಕೆ ಅನುಕೂಲ ಮಾಡಿಕೊಡಬೇಕೆಂಬ ಕಾರಣಕ್ಕೆ ಕೊಳವೆ ಬಾವಿಗಳ ದುರಸ್ತಿ ಮಾಡಿಸಲು ಸಿದ್ದರಾಮಯ್ಯ ಸರ್ಕಾರ ಆಸಕ್ತಿ ತೋರುತ್ತಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

'ಪ್ರಜಾವಾಣಿ' ವರದಿ ಉಲ್ಲೇಖಿಸಿ 'ಎಕ್ಸ್' ಮಾಡಿರುವ ಅವರು, 'ಕೊಳವೆ ಬಾವಿಗಳ ದುರಸ್ತಿ ಮಾಡದೆ, ಜನರನ್ನು ಸಂಕಷ್ಟಕ್ಕೆ ತಳ್ಳಿದೆ. ಜನರಿಗೆ ತೊಂದರೆ ಕೊಟ್ಟು ದುಡ್ಡು ಮಾಡುವ ಕೀಳುಮಟ್ಟಕ್ಕೆ ಇಳಿದಿದ್ದು ನಾಚಿಕೆಗೇಡು' ಎಂದಿದ್ದಾರೆ.

'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಶೇ 50ರಷ್ಟು ಜನ ಪ್ರಾಮಾಣಿಕರಲ್ಲ, ಕಾನೂನು ಪಾಲನೆ ಮಾಡುವುದಿಲ್ಲ ಎಂದು ಆರೋಪಿಸಿದ್ದಾರೆ. ಮೊದಲಿಗೆ ತಾವು ಎಷ್ಟು ಪ್ರಾಮಾಣಿಕರು ಎಂದು ಆತ್ಮಸಾಕ್ಷಿಯನ್ನು ಒಮ್ಮೆ ಕೇಳಿಕೊಳ್ಳಲಿ. ಎರಡು ವರ್ಷಗಳಿಂದ ಏಕೆ ಕೊಳವೆ ಬಾವಿ ದುರಸ್ತಿ ಆಗುತ್ತಿಲ್ಲ? ಟ್ಯಾಂಕರ್ ಮಾಫಿಯಾದಿಂದ ಎಷ್ಟು ಕಮಿಷನ್ ಬರುತ್ತಿದೆ? ಇದರಲ್ಲಿ ಹೈಕಮಾಂಡ್‌ಗೆ ಎಷ್ಟು ಪಾಲು' ಎಂದು ಪ್ರಶ್ನಿಸಿದ್ದಾರೆ.

ನಿಧನ ವಾರ್ತೆ

ದೇವಶೆಟ್ಟಿ ಗೌಡ



ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಆಪ್ತ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ, ನಿವೃತ್ತ ಅಧಿಕಾರಿ ಎಂ.ವಿ.ದೇವಶೆಟ್ಟಿ ಗೌಡ (84) ಅವರು ಸೋಮವಾರ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಒಬ್ಬ ಮಗ ಹಾಗೂ ಮೂವರು ಹೆಣ್ಣು ಮಕ್ಕಳು ಇದ್ದಾರೆ.

ದೇವಶೆಟ್ಟಿಗೌಡ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಫೆ.24ರಂದು ಬೆಳಿಗ್ಗೆ 8ರವರೆಗೆ ನಾಗರಬಾವಿಯಲ್ಲಿರುವ ನಿವಾಸದಲ್ಲಿ(ನಂ.183, 2ನೇ ಜೆ ಮೇನ್, 11ನೇ ಬ್ಲಾಕ್, 2ನೇ ಹಂತ, ನಾಗರಬಾವಿ ಕ್ಲಬ್ ಹತ್ತಿರ) ವ್ಯವಸ್ಥೆ ಮಾಡಲಾಗಿದೆ.

ಮಂಡ್ಯ ತಾಲ್ಲೂಕು ಕೆರಗೋಡು ಹೋಬಳಿ ಹಂಚಲಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 11ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.



₹24 ಲಕ್ಷ ಸುಲಿಗೆ: 12 ಮಂದಿ ಸೆರೆ

ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಭ್ರಷ್ಟಾಚಾರ ನಿಗ್ರಹ ದಳದ ಸಿಬ್ಬಂದಿಯ ಸೋಗಿನಲ್ಲಿ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಭ್ರಷ್ಟಾಚಾರ ನಿಗ್ರಹ ದಳದ ಸಿಬ್ಬಂದಿ ಎಂಬುದಾಗಿ ಬೆದರಿಸಿ ವ್ಯಕ್ತಿಯೊಬ್ಬರಿಂದ ₹24 ಲಕ್ಷ ಸುಲಿಗೆ ಮಾಡಿದ್ದ 12 ಆರೋಪಿಗಳನ್ನು ದೇವನಹಳ್ಳಿ ಠಾಣೆಯ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಖಾಸಗಿ ಬ್ಯಾಂಕ್ ಉದ್ಯೋಗಿ ಸಿ.ಕೃಷ್ಣಕುಮಾರ್ ರೆಡ್ಡಿ (50), ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೂಲಿಬೆಲೆಯ ನಿವಾಸಿ, ರಿಯಲ್ ಎಸ್ಟೇಟ್ ಏಜೆಂಟ್ ಎಸ್.ಅಹಮ್ಮದ್ ಷರೀಫ್ (48), ಬಾಗೇಪಲ್ಲಿಯ ಹೌಸಿಂಗ್ ಬೋರ್ಡ್ ಕಾಲೊನಿಯ ನಿವಾಸಿ, ಚಿಲ್ಲರೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ವೇಣುಗೋಪಾಲ(49), ಆನೇಕಲ್ ತಾಲ್ಲೂಕಿನ ಮುನಿನಂಜಪ್ಪನ ದೊಡ್ಡಿಯ ನಿವಾಸಿ, ಸಂಪಂಗಿರಾಮ ಅಲಿಯಾಸ್ ಸುರೇಶ್ ಕುಮಾರ್ (47), ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಪಟ್ಟಣದ ನಾರಾಯಣಸ್ವಾಮಿ (52), ಚಿಂತಾಮಣಿ ತಾಲ್ಲೂಕಿನ ಕೆ.ವಿ.ಶಿವ (42), ಮದನಪಲ್ಲಿಯ ನಿವಾಸಿ, ಮೇಸ್ತ್ರಿ ಕೆಲಸ ಮಾಡುವ ಟಿ.ವಿ. ಮುರುಗೇಶ್ (65), ಆಂಧ್ರಪ್ರದೇಶದ ಅನಂತಪುರ ನಿವಾಸಿ ಲತೀಫ್ (53), ಕೋಲಾರ ತಾಲ್ಲೂಕಿನ ಭಟ್ಟರಹಳ್ಳಿಯ ನಿವಾಸಿ ವೆಂಕಟೇಶ್ ಬಂಧಿತರು.

ಬಂಧಿತರಿಂದ ₹14.60 ಲಕ್ಷ ನಗದು, ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಭ್ರಷ್ಟಾಚಾರ ನಿಗ್ರಹ ದಳ ಎಂಬ ನಾಮಫಲಕ ಅಳವಡಿಸಿಕೊಂಡಿದ್ದ ಕಾರು, 13 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ನಗರದ ಸಾಯಿಲೇಔಟ್ ನಿವಾಸಿ ಕೆ.ಶಂಕರಪ್ಪ ಅವರು ನೀಡಿದ ದೂರಿನ ಮೇಲೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ತಿಳಿಸಿದರು.

ದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಆಕಾಶ್ ಆಸ್ಪತ್ರೆಯ ಎದುರು ಫೆ.13ರಂದು ಕೆ.ಶಂಕರಪ್ಪ ಅವರು ನಿಂತಿದ್ದರು. ಅವರ ಬಳಿಗೆ ಬಂದಿದ್ದ ಆರೋಪಿಗಳು, ₹30 ಲಕ್ಷ ಹಣದ ಅಗತ್ಯವಿದೆ ಎಂದು ಹೇಳಿಕೊಂಡಿದ್ದರು. ₹30 ಲಕ್ಷ ಹಣ ನೀಡಿದರೆ, ₹90 ಲಕ್ಷ ನೀಡುವುದಾಗಿ ಆಮಿಷವೊಡ್ಡಿದ್ದರು. ಆರೋಪಿಗಳ ಆಮಿಷವನ್ನು ನಂಬಿದ್ದ ಕೆ.ಶಂಕರಪ್ಪ ಅವರು, ಮನೆಯಲ್ಲಿದ್ದ ಚಿನ್ನಾಭರಣ ಅಡಮಾನ ಇಟ್ಟು ಸಾಲ ಪಡೆದುಕೊಂಡಿದ್ದರು. ಜತೆಗೆ, ತಮ್ಮ ಬ್ಯಾಂಕ್ ಖಾತೆಯಲ್ಲಿದ್ದ ಹಣ ಡ್ರಾ ಮಾಡಿಕೊಂಡಿದ್ದರು. ಒಟ್ಟು ₹24 ಲಕ್ಷವನ್ನು ಹೊಂದಿಸಿಕೊಂಡು, ಆರೋಪಿಗಳು ಸೂಚಿಸಿದ್ದ ಸ್ಥಳಕ್ಕೆ ಹೋಗಿದ್ದರು. ಅಲ್ಲಿಗೆ ಮಾನವ ಹಕ್ಕುಗಳ ಸಂರಕ್ಷಣೆ ಮತ್ತು ಭ್ರಷ್ಟಾಚಾರ ನಿಗ್ರಹ ದಳ ಎಂಬ ಬೋರ್ಡ್ ಅನ್ನು ಕಾರಿನಲ್ಲಿ ಅಳವಡಿಸಿಕೊಂಡು ಆರೋಪಿಗಳು ಸ್ಥಳಕ್ಕೆ ಬಂದಿದ್ದರು. 'ಇಷ್ಟೊಂದು ಹಣ ಎಲ್ಲಿಂದ ಬಂತು' ಎಂದು ಬೆದರಿಸಿ ₹24 ಲಕ್ಷ ಸುಲಿಗೆ ಮಾಡಿಕೊಂಡು ಪರಾರಿ ಆಗಿದ್ದರು ಎಂದು ಹೇಳಿದರು.

ಶಂಕರಪ್ಪ ಅವರು ನೀಡಿದ ದೂರು ಆಧರಿಸಿ, ಕೃತ್ಯ ನಡೆದ ಸ್ಥಳದಲ್ಲಿದ್ದ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಸಂಗ್ರಹಿಸಲಾಯಿತು. ಅಲ್ಲದೇ ದೂರವಾಣಿ ಕರೆಗಳ ವಿವರ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಯಿತು. ಎಲ್ಲರನ್ನೂ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಹಾಗೂ ಆಂಧ್ರಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಹಣ ಕೇಳಿದ್ದಕ್ಕೆ ಪಾನ್ ಶಾಪ್ ಮಾಲೀಕನ ಮೇಲೆ ಹಲ್ಲೆ

ಆವಲಹಳ್ಳಿಯ ಗ್ಯಾಲಕ್ಸಿ ಬಾರ್ ಆ್ಯಂಡ್ ರೆಸ್ಟೋರೆಂಟ್ ಪಕ್ಕದ ಪಾನ್ ಶಾಪ್ ಮಾಲೀಕ ರಾಜು ಅವರ ಮೇಲೆ ಹಲ್ಲೆ ನಡೆಸಿದ ಆರೋಪದ ಅಡಿ ಇಬ್ಬರನ್ನು ಬ್ಯಾಟರಾಯನಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆವಲಹಳ್ಳಿಯ ವಿನೋಬ ಕಾಲೊನಿಯ ಮಂಜೇಶ್ ಅಲಿಯಾಸ್ 'ಬೆಣ್ಣೆ' ಮಂಜೇಶ್ (32) ಹಾಗೂ ಆವಲಹಳ್ಳಿ ಮುನೇಶ್ವರ ಬ್ಲಾಕ್‌ನ ಮೂರನೇ ಕ್ರಾಸ್‌ನ ನಿವಾಸಿ ಕೆ.ಶ್ರೀನಿವಾಸ್ (33) ಬಂಧಿತರು.

ಪಾನ್ ಶಾಪ್ ಮಾಲೀಕ ರಾಜು ಅವರು ನೀಡಿದ ದೂರಿನ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಭಾನುವಾರ ರಾತ್ರಿ 9.30ರ ಸುಮಾರಿಗೆ ಪಾನ್ ಶಾಪ್‌ಗೆ ಬಂದಿದ್ದ ಮಂಜೇಶ್ ಹಾಗೂ ಕೆ.ಶ್ರೀನಿವಾಸ್ ಅವರು ಸಿಗರೇಟ್ ತೆಗೆದುಕೊಂಡಿದ್ದರು. ಸಿಗರೇಟ್‌ಗೆ ಹಣ ನೀಡಿರಲಿಲ್ಲ. ಹಣ ಕೇಳಿದ್ದಕ್ಕೆ ಸಿಟ್ಟಿಗೆದ್ದ ಆರೋಪಿಗಳು, ರಾಜು ಅವರ ಮೇಲೆ ಮಾರಕಾಸ್ತ್ರ ಹಾಗೂ ಗಾಜಿನ ಬಾಟಲಿಯಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದರು' ಎಂದು ಪೊಲೀಸರು ಹೇಳಿದರು.

ಹಲ್ಲೆ ನಡೆಸಿದ ಬಳಿಕ ಆರೋಪಿಗಳು ತಲೆಮರೆಸಿಕೊಂಡಿದ್ದರು. ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ದರ್ಶನ್: ಶಸ್ತ್ರಾಸ್ತ್ರ ಪರವಾನಗಿ ಅಮಾನತು ಆದೇಶಕ್ಕೆ ತಡೆ

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಜೈಲಿನಲ್ಲಿರುವ ನಟ ದರ್ಶನ್ ಅವರ ಶಸ್ತ್ರಾಸ್ತ್ರ ಪರವಾನಗಿ ಅಮಾನತು ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ದರ್ಶನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರ ಮತ್ತು ಆಡಳಿತ ವಿಭಾಗದ ಡಿಸಿಪಿ ಅವರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿದೆ.

ದರ್ಶನ್ 2008ರಿಂದ ಶಸ್ತ್ರಾಸ್ತ್ರ ಹೊಂದಲು ಪರವಾನಿಗೆ ಪಡೆದುಕೊಂಡಿದ್ದರು. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದ ಸಂದರ್ಭದಲ್ಲಿ, 'ಶಸ್ತ್ರಾಸ್ತ್ರ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯಿದೆ' ಎಂಬ ಕಾರಣಕ್ಕಾಗಿ 2025ರ ಜನವರಿ 20ರಂದು ಪರವಾನಗಿ ಅಮಾನತುಪಡಿಸಿ ಆದೇಶಿಸಲಾಗಿತ್ತು.

ಗಾಂಜಾ: ಮೂವರ ಸೆರೆ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಮೂವರನ್ನು ಬಾಗಲೂರು ಠಾಣೆಯ ಪೊಲೀಸರು ಬಂಧಿಸಿ, 2 ಕೆ.ಜಿ 370 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ.

ಬಿ.ಎಂ.ಆಶಿಕ್, ಹೇಮಂತ್ ವೇಣು, ಅಭಿರಾಮ್ ಎಸ್. ಪಿಳ್ಳೈ ಬಂಧಿತರು. ಮೂವರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಕಾಡುಸೊಣ್ಣಪ್ಪನಹಳ್ಳಿ ಗ್ರಾಮದ ರೆಸಾರ್ಟ್‌ವೊಂದರ ಬಳಿ ಮೂವರು ಆರೋಪಿಗಳು ಗಾಂಜಾ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಯುವತಿ ವಿರುದ್ಧ 'ಹನಿಟ್ರ್ಯಾಪ್' ಆರೋಪದಡಿ ಪ್ರಕರಣ ದಾಖಲು

ಅತ್ಯಾಚಾರ: ಇಬ್ಬರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಯೂಸ್‌ನಲ್ಲಿ ಮತ್ತುಬರುವ ಮಾತ್ರೆ ಹಾಕಿ ಯುವತಿಯ ಪ್ರಜ್ಞೆತಪ್ಪಿಸಿ ಅತ್ಯಾಚಾರ ಎಸಗಿರುವ ಆರೋಪದ ಅಡಿ ಇಬ್ಬರ ವಿರುದ್ಧ ಅಮೃತಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಡಿಕ್ಸನ್ ಸಂದ್ರ ಹಾಗೂ ನಿಖಿಲ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ತಮಿಳುನಾಡಿನ 19 ವರ್ಷದ ಯುವತಿ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಾಗಿದೆ. ಫೆ.14ರಂದು ಜಕ್ಕೂರಿನ ವಿಲ್ಲಾಕ್ಕೆ ಕರೆದೊಯ್ದು ಸ್ನೇಹಿತರು ಕೃತ್ಯ ಎಸಗಿದ್ದಾರೆಂದು ಯುವತಿ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ಇಬ್ಬರ ವಿರುದ್ಧ ಫೆ.22ರಂದು ಎಫ್‌ಐಆರ್ ದಾಖಲಾಗಿದೆ. ಇದಕ್ಕೂ ಮುನ್ನ ಅಂದರೆ ಫೆ.21ರಂದು ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ಯುವತಿ ವಿರುದ್ಧ 'ಹನಿಟ್ರ್ಯಾಪ್' ಆರೋಪದಡಿ ಪ್ರಕರಣ ದಾಖಲಾಗಿದೆ. ಎರಡು ದೂರು ಆಧರಿಸಿ ಅಮೃತಹಳ್ಳಿ ಹಾಗೂ ಮಲ್ಲೇಶ್ವರ ಠಾಣೆಯ ಪೊಲೀಸರು, ಪ್ರತ್ಯೇಕವಾಗಿ ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

'ನಗರದ ಖಾಸಗಿ ಕಾಲೇಜಿನಲ್ಲಿ ವಿದ್ಯಾರ್ಥಿನಿಯು ಓದುತ್ತಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ ಡಿಕ್ಸನ್ ಸಂದ್ರ ಅವರು ಯುವತಿಗೆ ಪರಿಚಯವಾಗಿದ್ದರು. ಬಳಿಕ, ಕೋರಮಂಗಲದ ಕೆಫೆಯಲ್ಲಿ ಇಬ್ಬರೂ ಭೇಟಿಯಾಗಿದ್ದರು. ಈ ವೇಳೆ ಆರೋಪಿ ಪ್ರೇಮ ನಿವೇದನೆ ಮಾಡಿಕೊಂಡಿದ್ದರು. ಯುವತಿ ಸಹ ಒಪ್ಪಿದ್ದರು. ಫೆ.14ರಂದು ಡಿಕ್ಸನ್ ಸಂದ್ರ ಜಕ್ಕೂರಿನಲ್ಲಿರುವ ವಿಲ್ಲಾವೊಂದಕ್ಕೆ ಬರುವಂತೆ ಕರೆ ಮಾಡಿದ್ದರು. ಸ್ನೇಹಿತೆಯಾದ ಸಂತ್ರಸ್ತೆ ವಿಲ್ಲಾಗೆ ಹೋಗಿದ್ದರು. ಈ ವೇಳೆ ಡಿಕ್ಸನ್ ಹಾಗೂ ನಿಖಿಲ್ ಬಲವಂತವಾಗಿ ಮತ್ತುಬರುವ ಮಾತ್ರೆ ತಿನ್ನಿಸಿ ಅತ್ಯಾಚಾರ ಎಸಗಿದ್ದಾರೆಂದು ಯುವತಿ ದೂರು ನೀಡಿದ್ದು, ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಅರೆ ಪ್ರಜ್ಞಾವಸ್ಥೆಯಲ್ಲಿದ್ದಾಗ ಡಿಕ್ಸನ್ ಹಾಗೂ ನಿಖಿಲ್ ಲೈಂಗಿಕವಾಗಿ ಪ್ರಚೋದನೆ ಮಾಡಿ, ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ. ಬಳಿಕ ನಡೆದ ಘಟನೆಯ ಕುರಿತು ಯಾರಿಗೂ ಹೇಳದಂತೆ ಜೀವ ಬೆದರಿಕೆ ಹಾಕಿದ್ದಾರೆ. ನಡೆದಿರುವ ಘಟನೆಯಿಂದ ಆಘಾತಕ್ಕೊಳಗಾಗಿದ್ದೆ. ನಂತರ, ಸಹೋದರನ ಸೂಚನೆಯಂತೆ ದೂರು ನೀಡುತ್ತಿರುವುದಾಗಿ ಸಂತ್ರಸ್ತೆ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಯುವತಿ ವಿರುದ್ಧವೂ ಎಫ್‌ಐಆರ್, ಒಬ್ಬನ ಬಂಧನ

'ಹನಿಟ್ರ್ಯಾಪ್' ಮಾಡಿ ಹಣಕ್ಕೆ ಬೇಡಿಕೆಯಿಟ್ಟ ಆರೋಪದಡಿ ಮಲ್ಲೇಶ್ವರ ಠಾಣೆಗೆ ನಿಖಿಲ್ ಅವರು ದೂರು ನೀಡಿದ್ದು, ಯುವತಿಯ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

ನಿಖಿಲ್ ನೀಡಿದ ದೂರಿನ ಮೇಲೆ ಯುವತಿ ಮತ್ತು ಖಾಸಗಿ ಸುದ್ದಿವಾಹಿನಿಯ ಇಮ್ರಾನ್ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಇಮ್ರಾನ್ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಮಂಗಳವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು' ಎಂದು ಪೊಲೀಸರು ಹೇಳಿದರು.

ಸ್ನೇಹಿತ ಡಿಕ್ಸನ್ ಸಂದ್ರನ ಮೂಲಕ ಪರಿಚಯವಾದ ಯುವತಿ ಹಾಗೂ ಖಾಸಗಿ ವಾಹಿನಿಯ ಸಿಬ್ಬಂದಿ ಹೆಸರಿನಲ್ಲಿ ಕರೆ ಮಾಡಿಸಿ, ಬೆದರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಫೆ.14ರಂದು ಜಕ್ಕೂರಿನಲ್ಲಿ ಇರುವ ವಿಲ್ಲಾದಲ್ಲಿ ಪಾರ್ಟಿ ಮಾಡುವಾಗ ಯುವತಿ ಸಲುಗೆಯಿಂದ ವರ್ತಿಸುತ್ತಿದ್ದರು. ಅದೇ ದಿನ ಆಕೆಯನ್ನು ಕಾರಿನಲ್ಲಿ ಕರೆತಂದು ಸುರಕ್ಷಿತವಾಗಿ ರಾಜಾಜಿನಗರದ ವಾರಿಯರ್ ಬೇಕರಿ ಬಳಿ ಬಿಟ್ಟು ಹೋಗಿದ್ದೆ.

ನಂತರ, ಇನ್‌ಸ್ಟಾಗ್ರಾಂನಲ್ಲಿ ವಿಡಿಯೊವೊಂದನ್ನು ಹಾಕಿ ಸುಳ್ಳು ಆರೋಪ ಮಾಡಿದ್ದಾರೆ. ನಂತರ, ಖಾಸಗಿ ವಾಹಿನಿಯ ಪ್ರತಿನಿಧಿಯ ಹೆಸರಿನಲ್ಲಿ ಇಮ್ರಾನ್ ಅವರ ಮೂಲಕ ಕರೆ ಮಾಡಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ನಿಖಿಲ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ವಿದ್ಯುತ್ ಕಂಬಕ್ಕೆ ಶಾಲಾ ಬಸ್ ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಪಬ್ಲಿಕ್ ಸ್ಕೂಲ್ ಬಸ್‌ನ ಬ್ರೇಕ್ ವಿಫಲಗೊಂಡು ಅಪಘಾತಕ್ಕೀಡಾಗಿದ್ದು, ಬಸ್‌ನಲ್ಲಿದ್ದ ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ. ಮಹಾಲಕ್ಷ್ಮಿ ಲೇಔಟ್ ಬಳಿ ಸೋಮವಾರ ಬೆಳಿಗ್ಗೆ ಈ ಘಟನೆ ನಡೆದಿದೆ.

ಬಸ್‌ನಲ್ಲಿ 10 ವಿದ್ಯಾರ್ಥಿಗಳಿದ್ದರು. ರಸ್ತೆಯಲ್ಲಿ ಸಾಗುವಾಗ ಬಸ್‌ನ ಬ್ರೇಕ್ ವಿಫಲಗೊಂಡು ಹಿಮ್ಮುಖವಾಗಿ ಚಲಿಸಿದೆ. ಚಾಲಕ ಎಷ್ಟೇ ಪ್ರಯತ್ನಪಟ್ಟರೂ ಬಸ್ ನಿಲ್ಲಿಸಲು ಸಾಧ್ಯವಾಗಿಲ್ಲ. ರಸ್ತೆ ಪಕ್ಕದ ವಿದ್ಯುತ್ ಕಂಬಕ್ಕೆ ಬಸ್ ಡಿಕ್ಕಿ ಹೊಡೆದು ಜಖಂಗೊಂಡಿದೆ.

ಮಲ್ಲೇಶ್ವರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಾಸಕ ಗೋಪಾಲಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

'ದೊಡ್ಡ ಅನಾಹುತವೊಂದು ತಪ್ಪಿದೆ. ಈ ರೀತಿಯ ಘಟನೆ ಎಲ್ಲ ಶಾಲೆಗಳಿಗೂ ಎಚ್ಚರಿಕೆಯಾಗಿದ್ದು, ಆಡಳಿತ ಮಂಡಳಿಗಳು ಶಾಲಾ ಬಸ್‌ಗಳು ಉತ್ತಮ ಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಲು ಸೂಚನೆ ನೀಡಲಾಗುವುದು' ಎಂದು ಗೋಪಾಲಯ್ಯ ಹೇಳಿದರು.

ಘಟನೆಯಿಂದ ಸ್ಥಳದಲ್ಲಿ ಸ್ವಲ್ಪ ಹೊತ್ತು ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿತ್ತು. ನಂತರ ಪೊಲೀಸರು ಕ್ರೇನ್ ಸಹಾಯದಿಂದ ಶಾಲಾ ಬಸ್ ತೆರವುಗೊಳಿಸಿ ವಾಹನ ಸಂಚಾರ ಸುಗಮಗೊಳಿಸಿದರು. ಬೆಸ್ಕಾಂ ಸಿಬ್ಬಂದಿ, ಹಾನಿಗೊಳಗಾದ ವಿದ್ಯುತ್ ಕಂಬವನ್ನು ಬದಲಿಸಿ ಹೊಸ ಕಂಬ ಅಳವಡಿಸಿದರು.



ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದ ಬಸ್

ದರೋಡೆಗೆ ಯತ್ನ

ಬೆಂಗಳೂರು: ಶೇಷಾದ್ರಿಪುರದ ಕೆನರಾ ಬ್ಯಾಂಕ್ ಶಾಖೆಯಲ್ಲಿ ದರೋಡೆಗೆ ಯತ್ನಿಸಲಾಗಿದ್ದು, ಸೈರನ್ ಮೊಳಗುತ್ತಿದ್ದಂತೆಯೇ ಕಳ್ಳರು ಸ್ಥಳದಿಂದ ಪರಾರಿ ಆಗಿದ್ದಾರೆ.

ಸೋಮವಾರ ನಸುಕಿನ ವೇಳೆ ಕೃತ್ಯ ಎಸಗಲು ಆರೋಪಿಗಳು ಸಂಚು ರೂಪಿಸಿ, ಗ್ರಿಲ್ ಕತ್ತರಿಸಿ ಒಳಕ್ಕೆ ನುಗ್ಗಿದ್ದರು. ದರೋಡೆಕೋರರು ಒಳಕ್ಕೆ ನುಗ್ಗುತ್ತಿದ್ದಂತೆಯೇ ಬ್ಯಾಂಕ್ ಸೈರನ್ ಮೊಳಗಿದೆ. ಆಗ ದರೋಡೆಕೋರರು ಅಲ್ಲಿಂದ ಪರಾರಿ ಆಗಿದ್ದಾರೆ.

'ಬ್ಯಾಂಕ್ ಸಿಬ್ಬಂದಿ ಬಂದಾಗ ಕಳ್ಳರು ಒಳಕ್ಕೆ ನುಗ್ಗಿರುವುದು ಗೊತ್ತಾಗಿ, ಶೇಷಾದ್ರಿಪುರ ಠಾಣೆಗೆ ಮಾಹಿತಿ ನೀಡಿದ್ದರು. ಸೀನ್ ಆಫ್ ಕ್ರೈಂ (ಸೋಕೊ) ತಂಡವು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದೆ. ಬೆರಳಚ್ಚು ತಂಡವೂ ಭೇಟಿ ನೀಡಿತ್ತು. ದರೋಡೆಕೋರರ ಬಂಧನಕ್ಕೆ ತಂಡ ರಚಿಸಲಾಗಿದೆ' ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಹಾಕೆ ತಿಳಿಸಿದರು.

ನಕಲಿ ನೋಂದಣಿ: ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣಗಳ ನಿಯಂತ್ರಣ ಹಾಗೂ ಆರೋಪಿಗಳ ಪತ್ತೆಯ ಉದ್ದೇಶದಿಂದ ನಗರ ಪೊಲೀಸರು ರಾತ್ರಿ ವೇಳೆ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಇದುವರೆಗೆ ನಡೆದ ಕಾರ್ಯಾಚರಣೆಯಲ್ಲಿ ನಕಲಿ ನೋಂದಣಿ ಸಂಖ್ಯೆ ಅಳವಡಿಸಿಕೊಂಡಿದ್ದ 19 ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ನಾಲ್ಕು ಚಕ್ರದ 929 ವಾಹನಗಳು, 671 ತ್ರಿಚಕ್ರ ವಾಹನಗಳು, 3,644 ದ್ವಿಚಕ್ರ ವಾಹನಗಳನ್ನು ತಡೆದು ಪರಿಶೀಲನೆ ನಡೆಸಲಾಗಿದೆ. 2,737 ವ್ಯಕ್ತಿಗಳ ವಿಚಾರಣೆ ನಡೆಸಲಾಗಿದೆ. ನಕಲಿ ನೋಂದಣಿ ಸಂಖ್ಯೆ ಅಳವಡಿಸಿಕೊಂಡಿದ್ದ 19 ವಾಹನ ವಶಕ್ಕೆ ಪಡೆಯಲಾಗಿದೆ. ಮದ್ಯ ಕುಡಿದು ವಾಹನ ಚಾಲನೆ ಮಾಡುತ್ತಿದ್ದ 46 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.



ವಾಹನ ತಡೆದು ಪರಿಶೀಲನೆ ನಡೆಸಿದ ಪೊಲೀಸರು

ಮಾದಕ ವಸ್ತುಗಳ ಸೇವನೆ ಮತ್ತು ಸಾಗಣೆ, ಸರಗಳ್ಳತನ, ಮೊಬೈಲ್ ಕಳ್ಳತನ, ದರೋಡೆ, ಸಂಚಾರ ನಿಯಮ ಉಲ್ಲಂಘನೆ ಹಾಗೂ ಸಮಾಜಘಾತುಕ ಕೃತ್ಯಗಳನ್ನು ತಡೆಗಟ್ಟಲು ಈ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ಹಿಂದೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಆರೋಪಿಗಳಿಗೆ ಕಾರ್ಯಾಚರಣೆ ವೇಳೆ ಎಚ್ಚರಿಕೆ ನೀಡಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿ ಸೇರಿ ಇಬ್ಬರ ಸಾವು

ಬೆಂಗಳೂರು: ಬೊಲೆರೊ ವಾಹನ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನದಲ್ಲಿದ್ದ ವಿದ್ಯಾರ್ಥಿ ಸೇರಿ ಇಬ್ಬರು ಸವಾರರು ಮೃತಪಟ್ಟಿರುವ ಘಟನೆ ಕೆ.ಆರ್.ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೆ.ಆರ್.ಪುರ ನಿವಾಸಿಗಳಾದ ನಿತಿನ್ (21) ಮತ್ತು ಪುನೀತ್ (25) ಮೃತರು. ಸೋಮವಾರ ಮುಂಜಾನೆ 2 ಗಂಟೆ ಸುಮಾರಿಗೆ ಕೆ.ಆರ್.ಪುರದ ಹಳೇ ಮದ್ರಾಸ್ ರಸ್ತೆಯ ಬೂದಿಗೆರೆ ಸೇತುವೆ ಬಳಿ ದುರ್ಘಟನೆ ನಡೆದಿದೆ. ಮೃತರ ಪೈಕಿ ನಿತಿನ್ ಖಾಸಗಿ ಕಾಲೇಜಿನಲ್ಲಿ ಅಂತಿಮ ವರ್ಷದ ಪದವಿ ವಿದ್ಯಾರ್ಥಿ, ಪುನೀತ್ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಕೆ.ಆರ್.ಪುರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ವಾಹನ ಚಾಲಕ ಮಂಜುನಾಥ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜೈಲಿನ ವಿವಿಧ ಬ್ಯಾರಕ್‌ಗಳಲ್ಲಿ ನಿಷೇಧಿತ ವಸ್ತುಗಳು ಪತ್ತೆ

ಪರಪ್ಪನ ಅಗ್ರಹಾರ ಜೈಲಿನ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ಸೋಮವಾರ ದಾಳಿ ನಡೆಸಿ, ವಿವಿಧ ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದರು.

ತಪಾಸಣೆ ವೇಳೆ ಚೂಪಾದ ಲೋಹದ ವಸ್ತುಗಳು, ತಂಬಾಕು ಉತ್ಪನ್ನಗಳು, ಬೆಳ್ಳಿಯ ಬಳೆ-ಚೈನ್, ಮೊಬೈಲ್ ಚಾರ್ಜರ್ ಹಾಗೂ ಮೊಬೈಲ್ ಬ್ಯಾಟರಿ, ₹9,340 ನಗದು ಜಪ್ತಿ ಮಾಡಲಾಗಿದೆ ಎಂದು ಸಿಸಿಬಿ ಮೂಲಗಳು ಹೇಳಿವೆ.

ಸಿಸಿಬಿ ಡಿಸಿಪಿ(ಕ್ರೈಂ -1) ನೇತೃತ್ವದಲ್ಲಿ ನಾಲ್ವರು ಎಸಿಪಿ, 13 ಇನ್‌ಸ್ಪೆಕ್ಟರ್, 100ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

'ವಿಚಾರಣಾಧೀನ ಕೈದಿಗಳು, ಗಣ್ಯ ಆರೋಪಿಗಳಿದ್ದ ಬ್ಯಾರಕ್ ಹಾಗೂ ಮಹಿಳಾ ವಿಚಾರಣಾಧೀನ ಕೈದಿಗಳು, ಸಜಾ ಬಂದಿಗಳನ್ನು ಇರಿಸಲಾಗಿದ್ದ ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಲಾಯಿತು. ಕೆಲವು ಬ್ಯಾರಕ್‌ಗಳಲ್ಲಿ ನಿಷೇಧಿತ ವಸ್ತುಗಳು ಪತ್ತೆಯಾಗಿದ್ದು, ಅವುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಹಿಂದೆಯೂ ನಡೆದಿತ್ತು ದಾಳಿ: ಕಳೆದ ವರ್ಷದ ಜೂನ್‌ನಲ್ಲೂ ಸಿಸಿಬಿ ಪೊಲೀಸರು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿದ್ದರು. ಆಗಲೂ, ತಂಬಾಕು ಉತ್ಪನ್ನಗಳಾದ ಚೈನಿ, ಸ್ವಾಗತ್ ಗೋಲ್ಡ್, ಗಾಂಜಾ ಸೇದಲು ಕೈದಿಗಳು ಬಳಸುತ್ತಿದ್ದ ಕೊಳವೆಗಳು, ಚಾಕು, ಟ್ರಿಮ್ಮರ್, ಕತ್ತರಿ, ಮೊಬೈಲ್ ಚಾರ್ಜರ್, ಬೆಂಕಿ ಪೊಟ್ಟಣ, ಲೈಟರ್, ಪ್ಲೇ ಕಾರ್ಡ್ಸ್, ಪ್ಲೇ ಕಾರ್ಡ್‌ನ ಆಟದ ಬಳಿಕ ಸಂಖ್ಯೆ ಬರೆದುಕೊಳ್ಳಲು ಕೈದಿಗಳು ಉಪಯೋಗಿಸಿದ್ದ ಪುಸ್ತಕ, ಬಿಸಿ ನೀರು ಕಾಯಿಸುವ ಕಾಯಿಲ್, ಆಯುಧ, ರಾಡು ಪತ್ತೆ ಆಗಿದ್ದವು ಎಂದು ಮೂಲಗಳು ಹೇಳಿವೆ.


ಜೈಲಿನಲ್ಲಿ ವಶಕ್ಕೆ ಪಡೆದ ವಸ್ತುಗಳು

ಕೈದಿಗಳ ಮೇಲೆ ಹಲ್ಲೆ: ಎನ್‌ಸಿಆರ್ ದಾಖಲು

ರೌಡಿ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿ ಪ್ರದೀಪ್ ಅವರು ಪರಪ್ಪನ ಅಗ್ರಹಾರ ಜೈಲಿನಲ್ಲಿ ಸಹ ಕೈದಿಗಳ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಎನ್‌ಸಿಆರ್ ದಾಖಲಾಗಿದೆ.

'ಫೆ.18ರಂದು ಸುರೇಶ್ ಹಾಗೂ ಆದಿತ್ ಮಧುಕಿರಣ್ ಎಂಬುವವರ ಮೇಲೆ ಪ್ರದೀಪ್ ಹಲ್ಲೆ ಮಾಡಿರುವ ಆರೋಪವಿದೆ. ಹಳೇ ದ್ವೇಷದಿಂದ ಈ ಘಟನೆ ನಡೆದಿದೆ ಎಂದು ಗೊತ್ತಾಗಿದೆ. ಸುರೇಶ್ ಮತ್ತು ಆದಿತ್ ಮಧುಕಿರಣ್ ಅವರ ಮೂಗು ಮತ್ತು ಕಪಾಳಕ್ಕೆ ಪ್ರದೀಪ್ ಹೊಡೆದಿದ್ದಾರೆ. ಈ ಸಂಬಂಧ ಗಂಭೀರವಲ್ಲದ ಪ್ರಕರಣ (ಎನ್‌ಸಿಆರ್) ದಾಖಲು ಮಾಡಲಾಗಿದೆ. ತನಿಖೆ ಪೂರ್ಣವಾಗಿ ಸತ್ಯಾಂಶ ಕಂಡುಬಂದರೆ ಎಫ್‌ಐಆರ್ ದಾಖಲು ಮಾಡಿಕೊಂಡು ಮುಂದಿನ ತನಿಖೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.



ಕಿವಿಯ ಮಾತು ಕೇಳಿ

ಹೊಸ ಪೀಳಿಗೆಯ ಅಚಾತುರ್ಯ ಮತ್ತು ಹೊಸ ಹೊಸ ಕಾರಣಗಳ ಸರಮಾಲೆ ಇದೀಗ ಏರುಮುಖ. ಅತಿ ಎಳವೆಯಲ್ಲಿಯೇ ಕಿವುಡು ಉಂಟಾಗುವ ಸಾಧ್ಯತೆ ಹೆಚ್ಚುತ್ತಿದೆ. ಇಯರ್ ಫೋನ್ ಅತಿ ಬಳಕೆ ಖಂಡಿತ ಸಾಧುವಲ್ಲ. ಇಂತಹ ಕಾರಣಗಳೇ ಹಿಯರ್ ಏಡ್ ಬಳಕೆಯ ಹೆದ್ದಾರಿ. ಶಾಶ್ವತ ಕಿವುಡಿಗೆ ನಾಂದಿ ಹಾಡುವ ಮೊದಲು ಎಚ್ಚತ್ತುಕೊಳ್ಳುವಾ. ಆಯುರ್ವೇದದ ಪ್ರಕಾರ ಕಿವಿಯ ರಚನೆ, ಸಮಸ್ಯೆಗಳ ಮೂಲ ಕಾರಣ ಮತ್ತು ಕಿವಿರೋಗಗಳ ತಡೆಯ ಮಾರ್ಗೋಪಾಯಗಳನ್ನು ತಿಳಿಯೋಣ.



• ಡಾ.ಸತ್ಯನಾರಾಯಣ ಭಟ್ ಪಿ.

ಕವಿತಾಳಿಗೆ ಹದಿನೆಂಟರ ಏರು ಯೌವನದ ಹರೆಯ. ಹಾದಿ ಬದಿಯ ಹಾಲು ಮಾರುವ ಕಾಯಕ. ನಸುಕಿನ ಜಾವವೇ ಅಮ್ಮನ ಸಂಗಡ ಪಾದಚಾರಿ ರಸ್ತೆಯಲ್ಲ ಹಾಲಿನ ಪೊಟ್ಟಣ ಗುಡ್ಡೆಹಾಕಿ ಮಾರುವ ಜೀವನೋಪಾಯ. ಶೀತವಿರಲಿ, ಬಿಸಿಲುಗಾಲವಿರಲಿ, ಮಳೆಯಿರಲಿ ಕವಿತಾಳ ಸಂಸಾರದ ದಿನಚರಿ ಅನೂಚಾನ. ಮೊಬೈಲ್‌ಗೆ ಇಯರ್ ಫೋನ್ ಸಿಕ್ಕಿಸಿ ಸಂಗೀತ, ಹಾಡು ಕೇಳುವ ಚಾಳಿ ಬೆಳೆಸಿಕೊಂಡಳು. ಅನುದಿನದ ಏಕತಾನತೆಯ ಬದುಕಿಗೆ ಇದು ಕಡಿವಾಣವೇನೋ ನಿಜ. ಆದರೆ ಕಿವಿಯಾಲಿಕೆಗೆ ಸಜಾವಣೆಗೊಳ್ಳುವ ಇಯರ್ ಫೋನ್, ಹೆಡ್ ಫೋನ್ ಹೊಸ ಸಮಸ್ಯೆಗಳ ಮೂಲ ಎಂಬುದು ಕವಿತಾಳಿಗೆ ಮಾತ್ರವಲ್ಲ. ದೊಡ್ಡ ಹುದ್ದೆಯ ಟೆಕಿಗಳಿಗೆ ಸಹ ತಿಳಿಯದು. ಯೋಚಿಸಿ ನೋಡಿ. ಹೊರಗಣ ಸದ್ದು ಕೇಳದೆ ನೇರವಾಗಿ ಕಿವಿಗೊಳವೆಗೆ ಅದು ಸದ್ದು, ಸಪ್ಪಳ, ಸಂಗೀತ, ಸಂಭಾಷಣೆ ರವಾನಿಸಲು ಖಂಡಿತ ಸಹಕಾರಿ. ಆದರೆ ಅದು ಉಂಟುಮಾಡುವ ದನಿತರಂಗಗಳ ಕಂಪನವಂತೂ ಎಡ–ಬಲದ ಮಿದುಳಿನವರೆಗೆ ನಿರಂತರ ಪ್ರವಹಿಸುವ ರೇಡಿಯೇಷನ್ ಬಗೆಬಗೆ ಊಹಿಸಿ ನೋಡಿರಿ. ಅದರ ದುಷ್ಪರಿಣಾಮದಿಂದ ಕೆಡುಕು ಕಟ್ಟಿಟ್ಟ ಬುತ್ತಿ.

ಆಯುರ್ವೇದದ ಮೂಲ ಸಂಹಿತೆಕಾರ ಸುಶ್ರುತರ ಪ್ರಕಾರ ಕಿವಿಯ ರೋಗಗಳು ಇಪ್ಪತ್ತೆಂಟು ಬಗೆಯವು. ಚರ್ಮ ಸಹ ಒಂದು ಇಂದ್ರಿಯ. ಇಡಿಯ ದೇಹದ ಹೊರ ಕವಚ. ಉಳಿದಂತೆ ಪಂಚ ಇಂದ್ರಿಯಗಳ ಪೈಕಿ ನಾಲ್ಕು ಇರುವುದು ಕುತ್ತಿಗೆಯ ಮೇಲಣ ಇರುವ ಮುಂಡ(ಮಂಡೆ) ಭಾಗದಲ್ಲಿ. ಇದು ಕಫದೋಷದ ಪ್ರಧಾನ ಸ್ಥಾನ. ಇದನ್ನು ಕೆಡಿಸಲು ಸದಾ ಕಾಲ ವಾತ ಮತ್ತು ಪಿತ್ತ ದೋಷಗಳು ಕಾಯುತ್ತಲೇ ಇರುತ್ತವೆ. ಅವು ಮೂರರ ಸಮಸ್ಥಿತಿಯಿದ್ದರೆ ಆರೋಗ್ಯ. ವಿಷಮತ್ವದಿಂದ ಸದಾ ಕಾಲ ಕಾಯಿಲೆಗಳ ಸರಮಾಲೆ.

ಹಾಲುಮಾರುವ ಕವಿತಾಳು ಅನುದಿನವೂ ನಸುಕಿನ ಗಾಳಿ, ಚಳಿಗೆ ಒಡ್ಡಿಕೊಳ್ಳುತ್ತಾಳೆ. ಇದು ಕಫದ ಉಲ್ಬಣತೆಗೆ ಕಾರಣ. ಕೈಬೆರಳುಗಳು ಅತಿ ಥಂಡಿಯ ಹಾಲು ಪೊಟ್ಟಣದ ತೇವ ಮತ್ತು ಶೀತಕ್ಕೆ ಒಡ್ಡಿಕೊಳ್ಳುವ ಸಂದರ್ಭ. ಇದು ಅವಳ ಶರೀರದ ವಾತವೃದ್ಧಿಗೆ ಕಾರಣ. ಈಗ ಅವಳಿಗೆ ಅಂತಹ ತೊಂದರೆ ಕಾಣದು. ಏಕೆಂದರೆ ಅವಳ ಯೌವನದ ವಯಸ್ಸು ಪಿತ್ತ, ವಾತಗಳ ಕೆಡುವಿಕೆಗೆ ಕಡಿವಾಣ ಹಾಕೀತು. ಆದರೆ ನಿರಂತರತೆಯ ಅವಳ ಉದ್ಯೋಗ ಪರ್ವದ ದೆಸೆಯಿಂದ ಕ್ರಮೇಣ ಕಿವಿಯ ತೊಂದರೆಗೆ ಹೆಬ್ಬಾಗಿಲು. ಇದೇನು, ನಮ್ಮ ದೇಹ ಇಷ್ಟು ನಾಜೂಕಿನದೇ? ಈ ಪ್ರಶ್ನೆ ಓದುಗರಿಗೆ ಖಂಡಿತ ಚಿತ್ತದಲ್ಲಿ ಮೂಡಬಹುದು. ನಿಜ. ದೇಹ ಗೇಹ ಎನ್ನುತ್ತದೆ ಆಯುರ್ವೇದ. ಗೇಹ ಎಂದರೆ ಮನೆ. ಮನೆಯ ಮರದ ಜಂತಿ, ತೊಲೆಯೋ, ಗೋಡೆಯ ಪುಟ್ಟ ಬಿರುಕೋ ಕ್ರಮೇಣ ಹಿರಿದಾಗಿ ಮನೆ ಶಿಥಿಲವಾಗಿ ತೊಂದರೆಗೀಡಾಗುವುದಲ್ಲ. ಹಾಗೆಯೇ ಕಾಯಿಲೆಯ ಅವಕಾಶಗಳು ಸಹ ಕ್ರಮೇಣ ಹಾದಿಗಾಯುತ್ತವೆ. ಬೆಂಕಿಯ ಕಿಡಿಯೊಂದು ಹುಲ್ಲು ಬಣವೆ ಸುಡಬಹುದಲ್ಲ. ಅಂತೆಯೇ ದೇಹದ ಕುಪಿತ ತ್ರಿದೋಷಗಳೂ ಹೊಸ ಕಾಯಿಲೆಗಳಿಗೆ ಹೆದ್ದಾರಿ.

ಕಿವಿ ಕಡಿತ, ಒಳಗೆ ಕೇಳುವ ಸಮುದ್ರ ಅಲೆಯ ಭೋರ್ಗರೆತ, ಕುರ, ಅದು ಒಡೆದು ಕೀವು ಸುರಿತ ಅಥವಾ ನೀರು ಮಾತ್ರ ಸೋರುವಿಕೆ, ದೊಡ್ಡ ನಗಾರಿಯ ಸದ್ದಿನ ಸಪ್ಪಳ, ಒಳದ್ರವ ಏರುಪೇರಿನಿಂದ ನಡಿಗೆಯಲ್ಲಿ ತಲೆ ತಿರುಗು, ಅತಿಯಾದ ಮಲ(ಗುಗ್ಗೆ) ಸಂಗ್ರಹ, ಪರದೆಯ ಛಿದ್ರದ ಮೂಲಕ ನಿರಂತರ ಸ್ರಾವ ಇಂತಹ ಸಾಮಾನ್ಯ ಕಿವಿ ತೊಂದರೆಗಳು ಎಳವೆಯಿಂದ ಹಿರಿ ಹರೆಯದ ತನಕ ಸಹಜ. ಕ್ರಮೇಣ ಹಿರಿ ಹರೆಯದ ಕಿವುಡುತನ ವಯೋಸಹಜ ಜಾಯಮಾನ. ಶೈಶವದ ನಡುರಾತ್ರಿಯ ಕಿವಿನೋವು ಮುಗಿಲು ಮುಟ್ಟುವ ಹಸುಗೂಸಿನ ಆಕ್ರಂದನ ಬಗ್ಗೆ ಹೆತ್ತವರ ಆತಂಕ ಇಂದು ಅತಿ ಸಾಮಾನ್ಯದ ವಿದ್ಯಮಾನ.

ಬಿಲ್ವಪತ್ರೆಯ ತೈಲ, ಬೆಳ್ಳುಳ್ಳಿ ಕಾಸಿದ ತೆಂಗಿನೆಣ್ಣೆಯ ಹದ ಬಿಸಿ ಬಿಂದು ಕಿವಿಗೆ ಬಿಡುವ ಚಿಕಿತ್ಸೆಗೆ ಆಯುರ್ವೇದ ಮನ್ನಣೆಯಿದೆ. ವಾರಕ್ಕೆರಡು ಬಾರಿ ಸೌಟಿನಲ್ಲಿ ಹದ ಬಿಸಿಮಾಡಿದ ಎಳ್ಳೆಣ್ಣೆ ಮತ್ತು ತುಪ್ಪವನ್ನು ನೆತ್ತಿಗೆ ಹಚ್ಚಿರಿ. ಐದು ನಿಮಿಷ ಬಿಟ್ಟು ಹದ ಬಿಸಿ ನೀರಿನ ಸ್ನಾನದಿಂದ ದೇಹಕ್ಕೆ ಉಲ್ಲಾಸ. ಇಂದ್ರಿಯಗಳಿಗೆ ಹೊಸ ಹುರುಪು. ತ್ರಿಫಲೆ ಎಂದರೆ ಅಳಲೆಕಾಯಿ, ನೆಲ್ಲಿ ಕಾಯಿ ಮತ್ತು ತಾರೆಕಾಯಿಯ ಮಿಶ್ರಣ. ಅದನ್ನು ತುಸು ಬಿಸಿ ಮಾಡಿರಿ. ನೆತ್ತಿಗೆ ಕಟ್ಟಿರಿ. ಮಿದುಳೊಳಗೆ ಅದರ ಮದ್ದಿನ ಗುಣ ಇಳಿದು ದೋಷಗಳ ವಿಷಮತೆಗೆ ಕಡಿವಾಣ. ನುಗ್ಗೆ ಎಲೆ, ಕಾಯಿಯ ಬಳಕೆಯಿಂದ ಕಿವಿಯ ತೊಂದರೆಗೆ ಕಡಿವಾಣ. ಹುರುಳಿ ಮತ್ತು ಹೆಸರು ಬಳಕೆಯಿಂದ ಕಿವಿಯ ಆರೋಗ್ಯಪಾಲನೆ ಸಾಧ್ಯ. ದಶಮೂಲದ ಕಷಾಯ, ಅರಿಷ್ಟಗಳನ್ನು ಬಾಣಂತಿಯ ಆರೋಗ್ಯಕ್ಕೆ ಮಾತ್ರ ಅಲ್ಲ. ಚಳಿ ಮತ್ತು ಮಳೆಗಾಲದಲ್ಲಿ ಅನುದಿನವೂ ಬಳಸುವ ವಿಧಾನ ಮರೆಯದಿರಿ. ಮೂಗು, ಗಂಟಲು ಮತ್ತು ಕಿವಿಯ ಪರಸ್ಪರ ಸಂಬಂಧಗಳು ಅವಿನಾಭಾವದವು. ಹಾಗಾಗಿ ಇವುಗಳ ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಉಣ್ಣುವ ಆಹಾರ ಮೇಕೆಯಂತೆ ಚೆನ್ನಾಗಿ ಅಗಿದು ತಿನ್ನುವಾ. ಎಲ್ಲ ಅವಯವಗಳಿಗೆ ರಕ್ತ ಪರಿಚಲನೆ ಹೆಚ್ಚಿ ತೊಂದರೆಗಳಿಗೆ ವಿದಾಯ ಹೇಳುವಾ.

ಯೋಚನೆಗೂ ಮಿತಿ ಇರಲಿ

• ರಮ್ಯಾ ಶ್ರೀಹರಿ

ಬದುಕಿನಲ್ಲಿ ಎಲ್ಲವೂ ಅಸ್ಥಿರ, ಕ್ಷಣಿಕ, ಅಭದ್ರ; ಯಾವುದನ್ನೂ ದೀರ್ಘಕಾಲ ಆಶ್ರಯಿಸಿ ಬದುಕುವುದು ಕಷ್ಟಸಾಧ್ಯ. ನಂಬಿಕೆಗಳು, ಭಾವನೆಗಳು, ನಿಲುವು, ದೃಷ್ಟಿಕೋನಗಳು - ಎಲ್ಲವೂ ಬದಲಾಗುವುದು ಖಂಡಿತ. ಯಾವ ಬಾಂಧವ್ಯವೂ ಶಾಶ್ವತವಲ್ಲ, ಯಾವ ಸಾಧನೆ, ಯಶಸ್ಸು ಕೊಡುವ ಸಂತೋಷವೂ ನಿರಂತರವಲ್ಲ. ಯಾವಾಗ ನಾವು ಕಟ್ಟಿಕೊಂಡಿರುವ 'ನಮ್ಮ ಬದುಕು' ಎಂಬ ಸೌಧ ಕುಸಿಯುವುದೋ ಗೊತ್ತಾಗುವುದಿಲ್ಲ.

ಭೌತಿಕ, ಭಾವನಾತ್ಮಕ ಅಪಾಯಗಳಂತೂ ಯಾವ ಕ್ಷಣದಲ್ಲಿ, ಯಾವ ದಿಕ್ಕಿನಿಂದಾದರೂ ಎದುರಾಗಬಲ್ಲದು; ಪ್ರತಿಕ್ಷಣವೂ ಎಚ್ಚರವಾಗಿದ್ದು ನಮ್ಮ ಬದುಕನ್ನು ಸಾಧ್ಯವಿದ್ದಷ್ಟು ಎಲ್ಲ ಹೊಡೆತಗಳಿಂದ ರಕ್ಷಿಸಿಕೊಂಡು ಸುಸ್ಥಿರ, ಸುಂದರ, ಸುಖಮಯಗೊಳಿಸಿಕೊಳ್ಳಬೇಕೆಂಬುದು ಪ್ರತಿ ಮನುಷ್ಯನ ಬಯಕೆ. ಬದುಕಿನ ಏನೊಂದರ ಮೇಲೂ ನಮ್ಮ ನಿಯಂತ್ರಣ ಸ್ಥಿರವಲ್ಲ. 'ನಮ್ಮ ದೇಹವೇ ನಮ್ಮ ಆಜ್ಞೆಯನ್ನು ಪಾಲಿಸುವುದಿಲ್ಲ, ಇನ್ನು ಮಿಕ್ಕಿದುದರ ಗತಿಯೇನು?' ಎನಿಸುವಂತಹ ಪರಿಸ್ಥಿತಿಯಲ್ಲಿ ನಮಗೆ ನಮ್ಮ ನಿಯಂತ್ರಣದಲ್ಲಿರುವ ವಸ್ತು ಯಾವುದು ಎನ್ನುವುದರ ಹುಡುಕಾಟ ಶುರುವಾಗಿ, ಕೊನೆಗೆ ಯಾವುದೂ ನಮ್ಮ ನಿಯಂತ್ರಣದಲ್ಲಿಲ್ಲ ಎನ್ನುವುದರ ಅರಿವು ಭಯವಾಗಿ, ಆತಂಕವಾಗಿ ರೂಪಾಂತರ ಹೊಂದುತ್ತದೆ.

ಯಾವುದೂ ನಮ್ಮ ನಿಯಂತ್ರಣದಲ್ಲಿಲ್ಲ ಎಂದರೆ ಯಾವಾಗ ಏನು ಬೇಕಾದರೂ ಆಗಬಹುದು, ಅಪಾಯ ಹೇಗೆ ಬೇಕಾದರೂ ಬಂದೊದಗಬಹುದಾದರೆ, ಧುತ್ತೆಂದು ಬಂದು ನಿಲ್ಲುವ ಅನಿರೀಕ್ಷಿತಗಳಿಗಾಗಿ, ಅವುಗಳು ತರುವ ತಾಪ ನಿವಾರಣೆಗಾಗಿ ಸಿದ್ಧತೆ ಬೇಡವೇ? ಹಾಗಾಗಿ ಮನಸ್ಸು ಅನಿರೀಕ್ಷಿತಗಳಿಗೆ ಸಿದ್ಧತೆ ಮಾಡಿಕೊಳ್ಳುವ ಕೆಲಸದಲ್ಲಿ ತೊಡಗಿ, ಅತಿಯಾಗಿ, ವಿಪರೀತವಾಗಿ ದುಡಿಯತೊಡಗುತ್ತದೆ; ದುಡಿದು ಬಳಲಿ, ಆ ಬಳಲಿಕೆ ಅನಿರೀಕ್ಷಿತಗಳ ಭಯವನ್ನು ಮತ್ತೂ ತೀವ್ರಗೊಳಿಸಿ ಕೊನೆಗೆ ಎಲ್ಲದರ ಮೇಲಿನ ಹಿಡಿತ ಸಾಧಿಸುವ ಮಹತ್ವಾಕಾಂಕ್ಷೆಯಲ್ಲಿ ನಮ್ಮ ಯೋಚನೆಗಳು ಮಿತಿಮೀರಿ ತಾನೇ ತಾನಾಗಿ ಹುಟ್ಟಿಕೊಳ್ಳುತ್ತಾ ನಮ್ಮನ್ನು ದಣಿಸುತ್ತವೆ.

ಸಾಧಾರಣವಾಗಿ ಬಾಲ್ಯವೇ ನಮ್ಮೆಲ್ಲಾ ಭಾವನೆಗಳು, ವರ್ತನೆಗಳು ರೂಪುಗೊಳ್ಳುವ ಕಾಲ. ಬಾಲ್ಯದಲ್ಲಿ ನಾವು ಪೋಷಕರ ಆಸರೆಯಲ್ಲಿ ಸುರಕ್ಷಿತವಾಗಿದ್ದೇವೆಂಬ ಬಲವಾದ ನಂಬಿಕೆ ಬದುಕಿನ ಅನಿರೀಕ್ಷಿತಗಳನ್ನು ಸಮತೋಲನದಿಂದ ನಿರ್ವಹಿಸಲು ಸಹಕಾರಿ. ನಾವು ಬಾಲ್ಯದಲ್ಲಿ, ಯೌವನದ ಪ್ರಾರಂಭದ ದಿನಗಳಲ್ಲಿ ಬದುಕಿನ ಏರುಪೇರುಗಳನ್ನು, ಅಶಾಶ್ವತತೆ, ಅನಿಶ್ಚಿತತೆಯನ್ನು ಅನುಭವಿಸುತ್ತಿರುವಾಗ ನಮ್ಮೊಂದಿಗೆ ಭಾವನಾತ್ಮಕವಾಗಿ ಪ್ರಬುದ್ಧರಾಗಿರುವ, ನಮ್ಮನ್ನು ಪ್ರೀತಿಸುವ ಹಿರಿಯರೊಬ್ಬರು / ಪ್ರೌಢವಯಸ್ಕರೊಬ್ಬರು ನಮಗೆ ಬೆನ್ನೆಲುಬಾಗಿ ನಿಂತಿದ್ದಾಗ ಬದುಕಿನ ಅಸ್ಥಿರತೆಯನ್ನು ನಾವು ಸಹಜವಾಗಿ ಸ್ವೀಕರಿಸಬಹುದು; ಆದರೆ ಸಣ್ಣವಯಸ್ಸಿನಲ್ಲಿ ಅನಿರೀಕ್ಷಿತ ಆಘಾತಗಳನ್ನು ಯಾರ ಆಸರೆಯಿಲ್ಲದೆ ಒಬ್ಬಂಟಿಯಾಗಿ ಎದುರಿಸಬೇಕಾದಾಗ, ನಮ್ಮ ಬಳಿ ಇರುವ ಏಕೈಕ ಸಂಪನ್ಮೂಲ ನಮ್ಮ ಬುದ್ಧಿಯೊಂದೇ ಆಗಿರುವಾಗ ಅದನ್ನೇ ಅತಿಯಾಗಿ ಬಳಸದೇ ಇರುವುದು ಹೇಗೆ?

ಹಾಗಾಗಿ ಬುದ್ಧಿಯನ್ನು ಧಾರಾಳವಾಗಿ ಖರ್ಚುಮಾಡಿ 'ಅದು ಹೀಗಾದರೆ ಹೇಗೆ? ಅವರು ಹಾಗೆಂದುಬಿಟ್ಟರೆ? ಅಲ್ಲಿ ಏನಾದರೆ ಏನು ಮಾಡಬೇಕು?' ಹೀಗೆ ಮನಸ್ಸು ಮುಂದಾಗಬಹುದಾದ್ದನ್ನು ಹತ್ತಾರು ದೃಷ್ಟಿಕೋನಗಳಿಂದ ಊಹಿಸಿ, ವಿಶ್ಲೇಷಿಸಿ ಅನಿರೀಕ್ಷಿತಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಾ, ಅದೇ ಪ್ರಕ್ರಿಯೆಯಲ್ಲಿ ವಾಸ್ತವದಲ್ಲಿ ಎದುರಾಗಬಹುದಾದ ಕಷ್ಟ-ನಷ್ಟಗಳೆಷ್ಟು, ಕಲ್ಪನೆಯಲ್ಲಿ ನಾವು ಎದುರಿಸುತ್ತಿರುವ ಕಷ್ಟ-ನಷ್ಟಗಳೆಷ್ಟು ಎಂಬುದರ ನಡುವಿನ ಗೆರೆ ಮಾಸಿಹೋಗಿ ಎಲ್ಲ ಕಾಲದಲ್ಲೂ ಯುದ್ಧಕ್ಕೆ ಸನ್ನದ್ಧನಾಗಿರುವ ಸೈನಿಕನಂತೆ, ತುರ್ತು ಪರಿಸ್ಥಿತಿಗಳಿಗೆ ಮನಸ್ಸು ಸಜ್ಜಾಗಿ ನಿಂತಿರುತ್ತದೆ. ಸದಾ ಯಾವುದೋ ಗಹನ ಗಂಭೀರ ಸಮಸ್ಯೆ ಎದುರಿಸಲು ಸಜ್ಜಾದ ಮನಸ್ಸು ವಿರಮಿಸುವುದು, ಆನಂದವಾಗಿ ವಿಹಾರ ಮಾಡುವುದು, ನಿರ್ಭಯವಾಗಿ ವಿಚಾರಗಳನ್ನು ಗ್ರಹಿಸುವುದು ಸಾಧ್ಯವೇ?

ತುರ್ತುಪರಿಸ್ಥಿತಿಗಳನ್ನಷ್ಟೇ ಎದುರಿಸಲು ತರಬೇತಿ ಹೊಂದಿದ ಮನಸ್ಸಿಗೆ ಸಂತೋಷ ಸ್ವೀಕರಿಸುವುದು ಹೇಗೆ ಎನ್ನುವುದರ ಅರಿವಾಗುವುದು ತುಸು ಕಷ್ಟವೇ ಹೌದು. ಬದುಕಿನ ಎಲ್ಲ ಸಂತೋಷವನ್ನೂ ಯಾವುದೋ ಭಯ, ಸಂಶಯದ ನೆರಳಲ್ಲೇ ಕಾಣುವುದು ಬದುಕಿನ ಪರಿಪೂರ್ಣತೆಗೆ, ಸೌಂದರ್ಯಕ್ಕೆ ವಿಮುಖರಾದಂತೆಯೇ ಸರಿ. ನಾವು ಎಲ್ಲ ರೀತಿಯ ಕಷ್ಟ, ನೋವು, ಅವಮಾನವನ್ನು ಎದುರಿಸುವ, ಅದನ್ನು ಜೀರ್ಣಿಸಿಕೊಳ್ಳುವ ಪ್ರಕ್ರಿಯೆಯನ್ನು ಕರಗತ ಮಾಡಿಕೊಂಡಿದ್ದು ಬದುಕಿನ ಭಾರ ಹೊರಲು ಸಿದ್ಧರಾಗುತ್ತೇವೆ; ಆದರೆ ಯಾವ ಭಾರಗಳನ್ನೂ ನಮ್ಮ ರೆಕ್ಕೆಗಳಿಗೆ ನಾವೇ ಕಟ್ಟಿಕೊಳ್ಳದೇ ಸ್ವಚ್ಛಂದವಾಗಿ, ಹಗುರವಾಗಿ, ಹಾರಾಡುವ ಹಕ್ಕಿಯಂತೆ ಸಂತೋಷ, ಸಂಭ್ರಮ, ಸುಖಗಳನ್ನು ಅನುಭವಿಸುವುದಕ್ಕೆ ನಮ್ಮ ಹೃದಯವನ್ನು ಸಿದ್ಧಮಾಡಿಕೊಂಡಿದ್ದೇವೆಯೇ? ಹೌದು, ಸಂತೋಷವನ್ನು ಸ್ವೀಕರಿಸಲೂ ನಾವು ನಮ್ಮ ದೇಹ, ಮನಸ್ಸು, ಹೃದಯವನ್ನು ಒಂದು ಹದಕ್ಕೆ ತಂದುಕೊಳ್ಳಬೇಕು, ಇಲ್ಲವಾದರೆ ಸಂತೋಷವೂ ಒಂದು ಹೊತ್ತು ಸಾಗಬೇಕಾದ ಹೊರೆಯಂತೆ ಅನಿಸುತ್ತದೆ. ವಿಪರೀತ ಆಲೋಚನೆಗಳಲ್ಲಿ ಬಸವಳಿಯದೇ ಕ್ಷಣಿಕ ಬದುಕಿನಲ್ಲಿ ಸಂತೋಷವನ್ನು ಸ್ವೀಕರಿಸುವುದು ಹೇಗೆ ಎಂಬುದರ ಬಗೆಗೆ ಕೆಲವು ವಿಚಾರಗಳು ಇಲ್ಲಿವೆ:

- ಅತಿಯಾಗಿ ಯೋಚನೆಮಾಡುವುದು ದುಃಖ, ನೋವುಗಳನ್ನು ಅನುಭವಿಸುವುದರಿಂದ ತಪ್ಪಿಸಿಕೊಳ್ಳಲು ನಾವೇ ಕಂಡುಕೊಂಡಿರುವ ಮಾರ್ಗ. ಮೇಲ್ನೋಟಕ್ಕೆ ನಾವು ಸದಾ ತರ್ಕಬದ್ಧವಾಗಿ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಿರುವಂತೆ ಆತಂಕಿತರಾಗಿರುತ್ತೇವೆ, ಆದರೆ ಒಳಗೆ ಅಸ್ಥಿರತೆ, ಅಭದ್ರತೆ ತರುವ ಅಪಾರ ನೋವು ಸ್ಫೋಟಗೊಳ್ಳದಂತೆ ತಡೆಹಿಡಿಯುತ್ತಿರುತ್ತೇವೆ. ಅನಿಶ್ಚಿತತೆ, ಅನಿರೀಕ್ಷಿತತೆ ತರುವ ಸಂಕಟವನ್ನು ಮನಸಾರೆ ಅನುಭವಿಸಿ, ನೋವು ತಿನ್ನುತ್ತಿರುವ ಆ ಒಳಗಿನ ಮೃದು, ಮುಗ್ಧ ಮಗು ಮನಸ್ಸನ್ನು ಪ್ರೀತಿಯಿಂದ ಕಂಡಾಗ ಅತಿಯಾದ ಆಲೋಚನೆಗಳು ನಮ್ಮ ಅಸಹಾಯಕತೆಯ ಸೃಷ್ಟಿ ಎನ್ನುವುದು ಮನದಟ್ಟಾಗುತ್ತದೆ.
- ಕೆಲವೊಮ್ಮೆ ಮನದಲ್ಲಿ ಒಂದೇ ವಿಷಯವನ್ನು ಮೆಲುಕುಹಾಕುತ್ತಿರುತ್ತೇವೆ; ಅದನ್ನು ಬಿಟ್ಟು ಬೇರೇನೂ ಯೋಚಿಸಲು ಸಾಧ್ಯವೇ ಆಗುತ್ತಿರುವುದಿಲ್ಲ. ಅದು ಯಾವುದಾದರೂ ಸಮಸ್ಯೆ, ಸಂಘರ್ಷ, ಸವಾಲಿನ ಕುರಿತಾಗಿದ್ದರೆ ಆ ಆಲೋಚನೆಗಳನ್ನು, ಅದರ ಹಿಂದಿರುವ ಭಾವಗಳನ್ನು ಸಂಸ್ಕರಿಸಿ (processing) ಆ ಆಲೋಚನೆ ಏನನ್ನು ಸೂಚಿಸುತ್ತಿದೆ ಎಂದು ಅರ್ಥಮಾಡಿಕೊಳ್ಳಬಹುದು. ಆ ಆಲೋಚನೆ ನಮಗೀಗ ಅವಶ್ಯವಾಗಿ ಬೇಕಾದ ಯಾವುದರ ಕಡೆಗೆ ನಮ್ಮ ಗಮನ ಸೆಳೆಯುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಂಡರೆ ಮುಂದಿನ ದಾರಿ ಸುಲಭ. ಉದಾಹರಣೆಗೆ ಯಾರ ಬಗೆಗಾದರೂ ಅತಿಯಾದ ಸಿಟ್ಟಿನಿಂದ ಕೂಡಿದ ಆಲೋಚನೆಗಳು ಪದೇ ಪದೇ ಬರುತ್ತಿದ್ದರೆ ಅಥವಾ ಹತ್ತಿರದವರು ನಮ್ಮನ್ನು ದೂರವಿಡುತ್ತಿದ್ದಾರೆ ಎನ್ನುವ ಆತಂಕವಾಗುತ್ತಿದ್ದರೆ ಅಂತಹ ಆಲೋಚನೆಗಳನ್ನು ಸುಮ್ಮನೆ ಕತ್ತರಿಸಿ ಬಿಸಾಕಿಬಿಡುವುದು ಸಾಧ್ಯವಿಲ್ಲ. ಇಂತಹ ಭಾವಗಳ ಹಿಂದೆ ನಮ್ಮ ಭಾವನಾತ್ಮಕ ಅವಶ್ಯಕತೆಗಳು ಕೆಲಸ ಮಾಡುತ್ತಿರುತ್ತವೆ. ಅವುಗಳನ್ನು ಅರಿಯುವುದರಿಂದ ಆಲೋಚನೆಗಳ ದಾಳಿ ತಗ್ಗುತ್ತದೆ.
- 'ನಾವು ನಮ್ಮ ಆತ್ಮಸಾಕ್ಷಿಗೆ ನಿಷ್ಠರಾಗಿ ನಡೆದುಕೊಂಡರೆ ಸಾಕು, ಎಲ್ಲರಿಗೂ ನಮ್ಮ ಬದುಕಿನ ಎಲ್ಲದರ ಬಗ್ಗೆ ಮಾಹಿತಿ, ಸಮಜಾಯಿಷಿ ಕೊಡುವ ಅಗತ್ಯವಿಲ್ಲ' ಎನ್ನುವ ನಿಲುವು ನಮ್ಮನ್ನು ಅನಗತ್ಯ ಯೋಚನೆಗಳಿಂದ ಪಾರುಮಾಡುತ್ತದೆ. 'ಅವರು ಹಾಗೆಂದಾಗ ನಾನು ಯಾವ ರೀತಿ ಉತ್ತರ ಕೊಟ್ಟಿದ್ದರೆ ಸರಿಹೋಗುತ್ತಿತ್ತು, ಮುಂದೆ ಅವರು ಟೀಕಿಸಿದಾಗ ನಾನು ಏನು ಹೇಳಬಹುದು?' ಹೀಗೆಲ್ಲಾ ಮನಸ್ಸಿನಲ್ಲೇ ಒಂದು ಕಲ್ಪನೆಯ ವಾದ-ವಿವಾದದ ಸರಣಿ ಹೆಣೆಯುವ ತ್ರಾಸದಾಯಕ ಕೆಲಸದಿಂದ ಬಿಡುಗಡೆ ಹೊಂದಬೇಕಾದರೆ 'ನಾನು ನನ್ನ ಬದುಕನ್ನು ಬೇರೆಯವರಿಗೆ ಅರ್ಥಮಾಡಿಸುವ ಜವಾಬ್ದಾರಿ ಹೊರಬೇಕಾಗಿಲ್ಲ' ಎಂಬ ಅರಿವಾಗಬೇಕು.
- ಬೇರೆಯವರ ಮನಸ್ಸಿನಲ್ಲೇನಿದೆ ಎನ್ನುವ ಊಹೆಗಳನ್ನು ಅತಿಯಾಗಿ ಮಾಡುವುದು ವ್ಯರ್ಥ. ಸಾಧಾರಣವಾಗಿ ಬೇರೆಯವರು ನಮ್ಮನ್ನು 'ಹೀಗೆ ನೋಡುತ್ತಿದ್ದಾರೆ' ಎಂದುಕೊಳ್ಳುವುದೆಲ್ಲಾ ನಮ್ಮ ಬಗ್ಗೆ ನಮಗೇನೆನಿಸುತ್ತಿದೆ ಎನ್ನುವುದರ ಪ್ರತಿಬಿಂಬವಷ್ಟೇ. ಉದಾಹರಣೆಗೆ 'ಬೇರೆಯವರು ನನ್ನನ್ನು ಅಗೌರವದಿಂದ ಕಾಣುತ್ತಿದ್ದಾರೆ' ಎನಿಸುವುದಾದರೆ, 'ನನ್ನನ್ನು ನಾನೆಷ್ಟು ಗೌರವದಿಂದ ಕಂಡುಕೊಳ್ಳುತ್ತಿದ್ದೇನೆ' ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುವುದು ಕ್ಷೇಮ. ಬೇರೆಯವರು ನಮ್ಮ ಬಗೆಗೆ ಏನಂದುಕೊಳ್ಳುತ್ತಿದ್ದಾರೆ ಎನ್ನುವುದನ್ನು ಯೋಚಿಸುವುದು ಸಮಯ ಮತ್ತು ಮಾನಸಿಕ ಶಕ್ತಿಯ ಸಂಪೂರ್ಣ ವ್ಯರ್ಥವಷ್ಟೇ ಎನ್ನುವುದರ ಅರಿವಾಗಬೇಕು.
- ಭೌತಿಕ ವಿಪತ್ತುಗಳಿಗಿಂತ ಭಾವನಾತ್ಮಕ ವಿಪತ್ತುಗಳಿಗೆ ನಾವು ಹೆದರಿ ಅದಕ್ಕೆ ತಯಾರಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ಮಿತಿಮೀರಿದ ಆಲೋಚನೆಗಳ ಸುಳಿಯಲ್ಲಿ ಸಿಲುಕುವುದು ಸಹಜ. ಯಾರನ್ನಾದರೂ 'ಅತಿ' ಎನಿಸುವಷ್ಟು ಹಚ್ಚಿಕೊಳ್ಳುವುದು, 'ಅವರಿಲ್ಲದೆ ಬದುಕಿಲ್ಲ' ಎಂದುಕೊಳ್ಳುವುದು, 'ಅವರು ನನ್ನನ್ನು ದೂರಮಾಡಿದರೆ, ಪ್ರೀತಿಸದಿದ್ದರೆ, ನನಗೆ ಮೋಸ ಮಾಡಿದರೆ' ಎಂಬೆಲ್ಲಾ ಆಲೋಚನೆಗಳು ಪದೇ ಪದೇ ಬರುತ್ತಿರುವಾಗ ಅದನ್ನು ನಿರ್ಲಕ್ಷಿಸುವುದು ಅಸಾಧ್ಯವಷ್ಟೇ ಅಲ್ಲ, ಅಂತಹ ಆಲೋಚನೆಗಳು ಬಾಂಧವ್ಯದ ಸಹಜ ವಿಕಾಸಕ್ಕೆ ಅಡ್ಡಿಯಾಗುವುದೂ ಹೌದು. ಪ್ರೀತಿಗಾಗಿ ಹಂಬಲಿಸಿ, ಅದನ್ನು ಪಡೆದುಕೊಂಡೂ ಅದರ ಕ್ಷಣಿಕತೆಗೆ ಹೆದರದೆ ಪ್ರೀತಿಯ, ಬಾಂಧವ್ಯದ ಸಿಹಿಯನ್ನು ಸಂಪೂರ್ಣವಾಗಿ ಸವಿಯಬೇಕಾದರೆ ಆತ್ಮವಿಕಸನದ, ಭಾವವಿಕಸನದ ಸುದೀರ್ಘ ಸಂಕೀರ್ಣ ಪ್ರಯಾಣವನ್ನು ಬಲು ತಾಳ್ಮೆಯಿಂದ ಕೈಗೊಳ್ಳಬೇಕು.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

9) ಈ ಕೆಳಗಿನವುಗಳಲ್ಲಿ ಯಾವುದು ಸಮಾಂತರ ಶ್ರೇಢಿಯಾಗಿದೆ?

(A) 1, – 1, – 2, ...
(B) 1, 5, 9, ...
(C) 2, – 2, 2, – 2, ...
(D) 1, 2, 4, 8, ...

ಉತ್ತರ:– (ಬಿ) 1, 5, 9

10) $2x^2 + ax + 6 = 0$ ವರ್ಗ ಸಮೀಕರಣದ ಒಂದು ಮೂಲವು 2 ಆದಾಗ a ಯ ಬೆಲೆ

(A) 7 (B) 2 7
(C) – 7 (D) 2

ಉತ್ತರ:– (ಸಿ) – 7

11) ಈ ಕೆಳಗಿನ ದತ್ತಾಂಶಗಳ ಸರಾಸರಿಯು..........

ಅಂಕಗಳು	1	3	5	7

A) 16 B) 5
C) 1.6 D) 4


ಉತ್ತರ:– (ಡಿ)4

12) ΔABC ಮತ್ತು ΔBDEಗಳು ಎರಡು ಸಮಬಾಹು ತ್ರಿಭುಜಗಳು D ಯು BC ಯ ಮಧ್ಯಬಿಂದು ಆದರೆ ΔABC ಮತ್ತು ΔBDE ಗಳ ವಿಸ್ತೀರ್ಣಗಳ ಅನುಪಾತ

(A) 2 : 1 (B) 1 : 2
(C) 4 : 1 (D) 1 : 4

ಉತ್ತರ:–ಸಿ

ಪರಿಹಾರ:– . ΔABC ಮತ್ತು ΔBDE ಗಳು ಎರಡು ಸಮಬಾಹು ತ್ರಿಭುಜಗಳು D ಯು BC ಯ ಮಧ್ಯಬಿಂದು:



∴ BD = DC = 1/2BC

ತ್ರಿಭುಜದ ಪ್ರತಿಯೊಂದು ಬಾಹುವು 2a.ಆಗಿರಲಿ


, $\Delta ABC \sim \Delta BDE$

∴ವಿಸ್ತೀರ್ಣ(ΔABC)/ವಿಸ್ತೀರ್ಣ (ΔBDE) = AB^2/BD^2

$= (2a)^2/(a)^2$

$= 4a^2/a^2 = 4/1 = 4:1$

13) ಚಿತ್ರದಲ್ಲಿ ತೋರಿಸಿರುವ ನಕ್ಷೆಯಲ್ಲಿನ ರೇಖಾತ್ಮಕ ಸಮೀಕರಣಗಳ ಜೋಡಿಗಳು (ಮಾರ್ಚ್ 2021)




ಎ) $x + y = 1$ ಮತ್ತು $2x - y = 1$
ಬಿ) $2x + y = 2$ ಮತ್ತು $x + y = 2$
ಸಿ) $2x - y = 2$ ಮತ್ತು $4x - y = 4$
ಡಿ) $y - x = 0$ ಮತ್ತು $x - y = 1$

ಉತ್ತರ:– (ಸಿ) $2x - y = 2$ ಮತ್ತು $4x - y = 4$


ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :

14) ಕೊಟ್ಟಿರುವ ನಕ್ಷೆಯು $y = p(x)$ ಬಹುಪದೋಕ್ತಿಯನ್ನು ಸೂಚಿಸುತ್ತದೆ. p(x) ಹೊಂದಿರುವ ಶೂನ್ಯತೆಗಳ ಸಂಖ್ಯೆ ಬರೆಯಿರಿ



ಉತ್ತರ:– p(x) ಹೊಂದಿರುವ ಶೂನ್ಯತೆಗಳ ಸಂಖ್ಯೆ= 3


15)ತ್ರಿಭುಜ Δ ABCಯಲ್ಲಿ $XY \parallel BC$, $\frac{AY}{CY} = \frac{1}{2}$ ಮತ್ತು AX=4. ಆದರೆ BX ಬೆಲೆಯನ್ನು ಕಂಡುಹಿಡಿಯಿರಿ.



Ans : In Δ ABC, $\frac{AY}{CY} = \frac{AX}{BX} \Rightarrow \frac{1}{2} = \frac{4}{BX}$

$\therefore BX = 8$.

16) ಕೊಟ್ಟಿರುವ ಚಿತ್ರದಲ್ಲಿ, BCಯು ವ್ಯಾಸವಾದರೆ, Xನ ಬೆಲೆಯನ್ನು ಕಂಡುಹಿಡಿಯಿರಿ.



ಉತ್ತರ:– $x = 90^0$

17) $x^2 + 2x + 1$. ಬಹುಪದೋಕ್ತಿಯ ಶೂನ್ಯವನ್ನು ಕಂಡು ಹಿಡಿಯಿರಿ.

ಉತ್ತರ : $f(x) = x^2 + 2x + 1$.

$= X^2 + 1x + 1x + 1$
$= X(x+1) + 1(x + 1)$
$= (x + 1)(x + 1)$
$= (x + 1)^2$

f(x) = 0 ಆದಾಗ

$(x + 1)^2 = 0$
$X + 1 = \sqrt{0}$
$X = 1 = 0$
$X = -1$

$x^2 + 2x + 1$. ಬಹುಪದೋಕ್ತಿಯ ಶೂನ್ಯವು –1 ಆಗಿದೆ.

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS

REVISION: MODEL QUESTIONS

PART– A

I. Pick the correct option among the four given options for ALL of the following questions:

1. A glass rod is rubbed with silk cloth. The charge acquired by glass rod is ___________ .

(A) negative (B) positive
(C) zero
(D) positive on one end and negative on the opposite end

Ans:- (B) positive

2. A spherical conductor of radius R is carrying a charge of +Q. The ratio of the electric potentials corresponding to a point on the surface of the conductor and a point at a distance $\frac{R}{2}$ from the centre of the conductor are in the ratio

(A) 1: 2 (B) 2: 1
(C) 1:1 (D) 4:1

Ans:- (C) 1:1

3. The resistivity of a metallic conductor _______________ with decrease in temperature.

(A) increases (B) decreases
(C) first increases and then decreases
(D) first decreases and then increases

Ans:- (B) decreases

4. The Lorentz force is the force on a charged particle moving in a region containing _______________ .

(A) only electric field
(B) only magnetic field
(C) both electric and magnetic fields
(D) only crossed electric and magnetic fields

Ans:- (C) both electric and magnetic fields

5. Below are the two statements related to magnetic field lines:

Statement-I : The magnetic field lines do not intersect.

Statement-II: The direction of magnetic field at a point is unique.

(A) Both the statements I and II are correct and II is the correct explanation for I
(B) Both the statements I and II are correct and II is not the correct explanation for I
(C) Statement I is wrong but the statement II is correct
(D) Statement I is correct but the statement II is wrong

Ans:- (A) Both the statements I and II are correct and II is the correct explanation for I

6. A straight conductor of length 'l' is moving with a velocity 'v' in the direction of uniform magnetic field of strength 'B'. The magnitude of emf induced between the ends of the conductor is

(A) Blv (B) $\frac{B/v}{2}$
(C) 0 (D) 2Blv

Ans:- (C) 0

7. The SI unit of magnetic flux is:

(A) Wb m^{-1} (B) T m^{-2}
(C) weber (D) Wb m^{-2}

Ans:- (C) weber

8. The average power dissipated in an ac circuit is maximum if the ac source is connected :

(A) only to pure resistor
(B) only to pure inductor
(C) only to pure capacitor
(D) to a series combination of capacitor and Inductor

Ans:- (A) only to pure resistor

9. The electromagnetic waves with lowest frequency among the following are :

(A) gamma rays (B) UV rays
(C) microwaves (D) radio waves

Ans:- (D) radio waves

10. A ray of light coming from an object which is incident parallel to the principal axis of a convex lens placed in air after refraction ___________.

(A) appears to diverge from first principal focus
(B) emerges without any deviation
(C) appears to diverge from second principal focus
(D) passes through second principal focus

Ans:- (D) passes through second principal focus

11. If unpolarised light of intensity 'I0' is passed through a polaroid, the intensity of emergent light is

(A) $\frac{I_0}{4}$ (B) $\frac{2I_0}{3}$
(C) $\frac{I_0}{3}$ (D) $\frac{I_0}{2}$

Ans:- (D) $\frac{I_0}{2}$

12. The following are the statements related to photo emission:

(i) Photoelectric current is independent of intensity of incident radiation.
(ii) Stopping potential is different for different photosensitive metal surfaces for a radiation of particular frequency ($\nu > \nu o$).
(iii) Maximum speed of photoelectrons is independent of frequency of incident radiation.
(iv) Saturation current is different for radiations of different intensities having same frequency.

(A) Only (i) and (iii) are correct
(B) Only (i) and (ii) are correct
(C) Only (iii) and (iv) are correct
(D) Only (ii) and (iv) are correct

Ans:- (D) Only (ii) and (iv) are correct

ಮಾರ್ಚ್ 11ರಿಂದ ಒಪಿಡಿ ಬಂದ್

ಆರೋಗ್ಯ, ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿ, ನೌಕರರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾರ್ಚ್ 11ರಿಂದ ರಾಜ್ಯದಾದ್ಯಂತ ಸರ್ಕಾರಿ ಆಸ್ಪತ್ರೆಗಳ ಒಪಿಡಿ ಬಂದ್ ಮಾಡಿ ಮುಷ್ಕರ ನಡೆಸಲು ಆರೋಗ್ಯ, ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿ, ನೌಕರರು ನಿರ್ಧರಿಸಿದ್ದಾರೆ.

ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ, ವೃಂದ ಸಂಘಗಳು ಘೋಷಿಸಿವೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವೂ ಇದಕ್ಕೆ ಬೆಂಬಲ ನೀಡಿದೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ.ರವೀಂದ್ರನಾಥ ಎಂ. ಮೇಟಿ ಈ ವಿಷಯ ತಿಳಿಸಿದರು.

'ಸರ್ಕಾರದಿಂದ ಲಿಖಿತವಾಗಿ ಸ್ಪಂದನೆ ಸಿಗದೇ ಇದ್ದರೆ ಮಾರ್ಚ್ 15ರವರೆಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಆಸ್ಪತ್ರೆ, ಸಮುದಾಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಡಿಸ್ಪೆನ್ಸರಿಗಳಲ್ಲಿ ಒಪಿಡಿ ಸ್ಥಗಿತಗೊಳಿಸುತ್ತೇವೆ. ಕಪ್ಪುಪಟ್ಟಿ ಧರಿಸಿ ಬರೀ ತುರ್ತು ಸೇವೆ ಮಾತ್ರ ನಿರ್ವಹಿಸುತ್ತೇವೆ. 2ನೇ ಹಂತದಲ್ಲಿ ಮಾರ್ಚ್ 16ರಿಂದ ಗೈರು ಹಾಜರಾಗಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತೇವೆ. ಎಸ್ಮಾ ಜಾರಿ ಮಾಡಿದರೂ ಮುಷ್ಕರ ನಿಲ್ಲಿಸುವುದಿಲ್ಲ' ಎಂದು ಎಚ್ಚರಿಸಿದರು.

'ಈಗಾಗಲೇ ಹಲವು ಬಾರಿ ಸಭೆ ನಡೆಸಿ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದರೂ ಒಂದೇ ಒಂದು ಬೇಡಿಕೆಯೂ ಈಡೇರಿಲ್ಲ. ನಮ್ಮ ಬೇಡಿಕೆಗಳನ್ನು ಈಡೇರಿಸಲು ಇಲಾಖೆ ಮುಖ್ಯಸ್ಥರಿಂದ ಆಗುತ್ತಿಲ್ಲ. ಮುಖ್ಯಮಂತ್ರಿ ಅವರೇ ಮಧ್ಯಪ್ರವೇಶ ಮಾಡಬೇಕು' ಎಂದು ಒತ್ತಾಯಿಸಿದರು.

'ಇಲಾಖೆಯಲ್ಲಿ ಎ, ಬಿ, ಸಿ ವೃಂದದ ಜ್ಯೇಷ್ಠತಾ ಪಟ್ಟಿಯನ್ನೂ ಪ್ರಕಟಿಸಿಲ್ಲ. ವರ್ಗಾವಣೆಯ ಕೌನ್ಸೆಲಿಂಗ್ ಕೂಡ ಸರಿಯಾಗಿ ನಡೆಸದೇ ಪತಿ– ಪತ್ನಿಯನ್ನು ಬೇರೆ ಕಡೆ, ಅಂಗವಿಕಲರನ್ನು ದೂರಕ್ಕೆ ವರ್ಗಾವಣೆ ಮಾಡಲಾಗಿದೆ. ಮನವಿ ನೀಡಿದರೂ ಯಾವುದೇ ಬದಲಾವಣೆ ಆಗಿಲ್ಲ' ಎಂದು ಹೇಳಿದರು.

ಎಲ್ಲ ಕಡೆ ಐಎಎಸ್ ಏಕೆ?: 'ಇಲಾಖೆಯ ಪ್ರಮುಖ ಹುದ್ದೆಗಳಿಗೆ ಐಎಎಸ್ ಅಧಿಕಾರಿಗಳನ್ನು ನೇಮಿಸಲಾಗುತ್ತಿದ್ದು, ಆರು ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಔಷಧ ಖರೀದಿ ವಿಭಾಗದಲ್ಲೂ ನಮ್ಮವರಿಗೆ ಅವಕಾಶವಿಲ್ಲ. ಒಂಬುಡ್ಸ್‌ಮನ್ ಕೂಡ ಐಎಎಸ್ ಅಧಿಕಾರಿಯೇ. ನಿರ್ದೇಶಕರ ಹುದ್ದೆಗೂ ಐಎಎಸ್ ಅಧಿಕಾರಿಯನ್ನು ತರುವ ಹುನ್ನಾರ ನಡೆದಿದೆ. ಸಿಜೇರಿಯನ್ ಅನ್ನು ಐಎಎಸ್ ಅಧಿಕಾರಿಗಳೇ ಮಾಡಲಿ' ಎಂದು ಹೇಳಿದರು.

ವೈದ್ಯಾಧಿಕಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ಪಿ.ಆರ್. ತಿಮ್ಮರಾಜು, ನೌಕರರ ಕೇಂದ್ರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಬಳ್ಳಾರಿ, ಪ್ರಧಾನ ಕಾರ್ಯದರ್ಶಿ ಪುಟ್ಟರಾಜು, ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಗಿರಿಗೌಡ ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷೆ ಚಂದ್ರಿಕಾ ದಮ್ಮಳ್ಳಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- 5 ದಿನ ಕಪ್ಪುಪಟ್ಟಿ ಧರಿಸಿ ತುರ್ತು ಸೇವೆಗೆ ಲಭ್ಯ
- ಮಾರ್ಚ್ 16ರಿಂದ ಅನಿರ್ದಿಷ್ಟಾವಧಿ ಮುಷ್ಕರ
- ಮುಖ್ಯಮಂತ್ರಿ ಮಧ್ಯಪ್ರವೇಶಕ್ಕೆ ಒತ್ತಾಯ

ಬೇಡಿಕೆಗಳೇನು?

- ವೈದ್ಯರು, ಸಿಬ್ಬಂದಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಮಾದರಿಯಲ್ಲಿ ವೇತನ ನೀಡಿ
- ಗುತ್ತಿಗೆ ವೈದ್ಯ, ನೌಕರರು, ಎನ್‌ಎಚ್‌ಎಂ ಗುತ್ತಿಗೆ ನೌಕರರಿಗೆ ಭದ್ರತೆ ನೀಡಿ, ವೇತನ ಹೆಚ್ಚಿಸಿ
- ಕೇಂದ್ರ ಪುರಸ್ಕೃತ ಯೋಜನೆಯಡಿ ಅಡಿ 6,000 ನೌಕರರಿಗೆ ವೇತನ ಭತ್ಯೆ ನೀಡಿ
- ಖಾಲಿ ಇರುವ 39 ಸಾವಿರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿ
- ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಿ, ಜ್ಯೇಷ್ಠತಾ ಪಟ್ಟಿ ಪ್ರಕಟಿಸಿ
- 5 ವರ್ಷದಿಂದ ಮುಂಬಡ್ತಿ ಸ್ಥಗಿತವಾಗಿದ್ದು, ಅದನ್ನು ಕೊಡಿ
- ವರ್ಗಾವಣೆ ಕಾಯ್ದೆಯಲ್ಲಿನ ನ್ಯೂನತೆ, ಅವೈಜ್ಞಾನಿಕ ಕೌನ್ಸೆಲಿಂಗ್ ಸರಿಪಡಿಸಿ

'ಪ್ರಧಾನ ಕಾರ್ಯದರ್ಶಿ ಪ್ರತಿಷ್ಠೆಯಿಂದ ವಿಳಂಬ'

'ಬೇಡಿಕೆಗಳ ಈಡೇರಿಕೆಗೆ ಹಲವು ವರ್ಷಗಳಿಂದ ಪ್ರಯತ್ನಗಳು ನಡೆದಿವೆ. ಇಲಾಖೆಯ ಈಗಿನ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಅವರ ಪ್ರತಿಷ್ಠೆಯಿಂದ ಅನುಷ್ಠಾನ ವಿಳಂಬವಾಗುತ್ತಿದೆ' ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ದೂರಿದರು.

'42 ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮವಿದ್ದು, ಕಾಲಕಾಲಕ್ಕೆ ಪರಿಷ್ಕರಣೆ ಆಗಿ ಬಡ್ತಿಯೂ ಸಿಗುತ್ತಿದೆ. ಆದರೆ, ಆರೋಗ್ಯ ಇಲಾಖೆಯಲ್ಲಿ ಇದು ಜಾರಿಯಾಗುತ್ತಿಲ್ಲ. ಅವರ ಬೇಡಿಕೆಗಳಿಗೆ ನಮ್ಮ ಸಂಘದ ಸಂಪೂರ್ಣ ಬೆಂಬಲವಿದ್ದು, ಮುಷ್ಕರದಲ್ಲಿ ನಾವೂ ಭಾಗಿಯಾಗುತ್ತೇವೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವೈಭವದ 'ವೈಬ್ರೆನ್ಸ್26' ಸಾಂಸ್ಕೃತಿಕ ಹಬ್ಬಕ್ಕೆ ತೆರೆ



ಬೆಂಗಳೂರು: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಚೆನ್ನೈ ಕ್ಯಾಂಪಸ್‌ನ ನಾಲ್ಕು ದಿನಗಳ ಅಂತರರಾಷ್ಟ್ರೀಯ ಬೃಹತ್ ಸಾಂಸ್ಕೃತಿಕ ಉತ್ಸವ 'ವೈಬ್ರೆನ್ಸ್-26' ಶನಿವಾರ ಅತ್ಯಂತ ಸಡಗರದಿಂದ ಮುಕ್ತಾಯಗೊಂಡಿತು. ಸಮಾರೋಪ ಸಮಾರಂಭದಲ್ಲಿ ಖ್ಯಾತ ಬಹುಭಾಷಾ ನಟಿ ಡಾ.ಶ್ರೀಲೀಲಾ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ವಿಐಟಿ ಸಂಸ್ಥಾಪಕರು ಮತ್ತು ಕುಲಪತಿಗಳಾದ ಡಾ.ಜಿ.ವಿಶ್ವನಾಥನ್ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಡಾ.ಜಿ.ವಿ.ಸೆಲ್ವಂ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ನಟಿ ಶ್ರೀಲೀಲಾ, 'ಕಾಲೇಜು ಜೀವನವು ಭವಿಷ್ಯವನ್ನು ರೂಪಿಸುವ ಅತ್ಯಂತ ಪ್ರಮುಖ ಹಂತ. ಈ ಅವಧಿಯನ್ನು ಆನಂದಿಸುವುದರ ಜೊತೆಗೆ ನಿಮ್ಮ ಗುರಿಗಳ ಬಗ್ಗೆ ಸ್ಪಷ್ಟತೆಯಿರಲಿ. ಪ್ರತಿಯೊಬ್ಬರಿಗೂ ಹೊರಜಗತ್ತಿನಲ್ಲಿ ಅನೇಕ ಮಾದರಿ ವ್ಯಕ್ತಿಗಳಿರಬಹುದು, ಆದರೆ ಸ್ಫೂರ್ತಿ ಎಂಬುದು ಮನೆಯಿಂದಲೇ ಆರಂಭವಾಗಬೇಕು. ನನಗೆ ನನ್ನ ತಾಯಿಯೇ ಮೊದಲ ರೋಲ್ ಮಾಡೆಲ್. ವಿದ್ಯಾರ್ಥಿಗಳಾದ ನಾವು ನಮ್ಮ ಪೋಷಕರ ಶ್ರಮವನ್ನು ಗುರುತಿಸಿ ಗೌರವಿಸುವುದು ಮುಖ್ಯ' ಎಂದು ಕಿವಿಮಾತು ಹೇಳಿದರು. ಕುಲಪತಿ ಡಾ. ಜಿ. ವಿಶ್ವನಾಥನ್ ಮಾತನಾಡಿ, ಯುವಜನರು ಕೇವಲ ಸ್ಥಳೀಯವಾಗಿ ಮಾತ್ರವಲ್ಲದೆ ಜಗತ್ತಿನ ಯಾವುದೇ ಮೂಲೆಯಲ್ಲಾದರೂ ಕೆಲಸ ಮಾಡಲು ಸಿದ್ಧರಿರಬೇಕು. ಉತ್ತಮ ಸಾಧನೆಯ ಮೂಲಕ ಪೋಷಕರಿಗೆ ಹೆಮ್ಮೆ ತರಬೇಕು ಎಂದು ಕರೆ ನೀಡಿದರು.

ಚಾಂಪಿಯನ್ ಶಿಪ್: ಚೆನ್ನೈನ ಎಸ್‌ಎಸ್‌ಎನ್ ಎಂಜಿನಿಯರಿಂಗ್ ಕಾಲೇಜು ವೈಬ್ರೆನ್ಸ್-2026ರ ಸಮಗ್ರ ಸಾಂಸ್ಕೃತಿಕ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಈ ವರ್ಷದ ಉತ್ಸವದಲ್ಲಿ ಭಾರತದಾದ್ಯಂತದ ಪ್ರತಿಷ್ಠಿತ ಸಂಸ್ಥೆಗಳ ಸುಮಾರು 30,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಶೇಷವಾಗಿ ಬ್ರೆಜಿಲ್, ಜಪಾನ್, ಸಿಂಗಾಪುರ ಸೇರಿದಂತೆ 11 ದೇಶಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಈ ಬಾರಿಯ ವಿಶೇಷವಾಗಿತ್ತು.

ಕಾರ್ಯಕ್ರಮಗಳು: 'ಲೈವ್ ದಿ ಬೀಟ್ಸ್' ಥೀಮ್ ಅಡಿಯಲ್ಲಿ ತಾಂತ್ರಿಕ ಸ್ಪರ್ಧೆಗಳು, ಸಾಹಿತ್ಯಿಕ ಸ್ಪರ್ಧೆಗಳು ಮತ್ತು ಕ್ರೀಡಾಕೂಟಗಳೂ ಸೇರಿದಂತೆ ಒಟ್ಟು 200ಕ್ಕೂ ಹೆಚ್ಚು ಕಾರ್ಯಕ್ರಮಗಳು ನಡೆದವು. ಈ ನಾಲ್ಕು ದಿನಗಳ ಸಂಭ್ರಮದಲ್ಲಿ ಕಾಮನ್‌ವೆಲ್ತ್ ಪವರ್‌ಲಿಫ್ಟರ್ ಡಾ. ಆರತಿ ಅರುಣ್, ಸಂಗೀತಗಾರರಾದ ಪ್ರೇಮ್‌ಗಿ ಅಮರನ್, ಸಂತೋಷ್ ನಾರಾಯಣನ್, ರಾಫ್ತಾರ್ ಮತ್ತು ಮೋಹನ್ ಸಿಸ್ಟರ್ಸ್ ಸೇರಿದಂತೆ ಹಲವು ಗಣ್ಯರು ಪ್ರದರ್ಶನ ನೀಡಿದರು. ಫೆಬ್ರವರಿ 21ರಂದು ಡಿಜೆ ನೈಟ್‌ನೊಂದಿಗೆ ಈ ಸಾಂಸ್ಕೃತಿಕ ಹಬ್ಬಕ್ಕೆ ತೆರೆ ಬಿತ್ತು. ಕಾರ್ಯಕ್ರಮದಲ್ಲಿ ವಿಐಟಿ ಚೆನ್ನೈ ಪ್ರೊ-ವೈಸ್ ಚಾನ್ಸಲರ್ ಡಾ.ಟಿ.ತ್ಯಾಗರಾಜನ್, ನಿರ್ದೇಶಕ ಡಾ.ಕೆ.ಸತ್ಯನಾರಾಯಣನ್ ಮತ್ತು ಅಡಿಷನಲ್ ರಿಜಿಸ್ಟ್ರಾರ್ ಡಾ.ಪಿ.ಕೆ.ಮನೋಹರನ್ ಉಪಸ್ಥಿತರಿದ್ದರು.

'ಕೈ'ನಿಂದ ಬಂಜಾರ ಸಮಾಜ ಟಾರ್ಗೆಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಬಂಜಾರ ಸಮಾಜವನ್ನೇ 'ಟಾರ್ಗೆಟ್' ಮಾಡುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ದೂರಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಬಂಜಾರ ಸಮಾಜವು ಬಿಜೆಪಿ ಜತೆ ಗಟ್ಟಿಯಾಗಿ ನಿಂತಿರುವ ಕಾರಣ ಕಾಂಗ್ರೆಸ್‌ಗೆ ಸಹಿಸಲು ಆಗುತ್ತಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ಬಳಿಕ ಬಂಜಾರ ಸಮಾಜಕ್ಕೆ ಅನ್ಯಾಯವಾಗಿದೆ ಮತ್ತು ಸಮುದಾಯವನ್ನು ನಿರ್ಲಕ್ಷಿಸಲಾಗುತ್ತಿದೆ' ಎಂದರು.

'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಂಜಾರ ಸಮುದಾಯದ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಆ ಸಮಾಜದ ಯುವಕರು ಘೇರಾವ್ ಮಾಡಿ ಪ್ರತಿಭಟನೆ ನಡೆಸಿದ್ದರು. ಇದನ್ನು ಸಹಿಸದ ಶಿವಕುಮಾರ್ ಘೋಷಣೆ ಕೂಗಿದ ಯುವಕರ ಮೇಲೆ ಎಫ್‌ಐಆರ್ ಹಾಕಿಸಿದ್ದಾರೆ' ಎಂದು ಅವರು ಹೇಳಿದರು.

'ಶಾಸಕ ಚಂದ್ರು ಲಮಾಣಿ ಅವರನ್ನೂ ಟಾರ್ಗೆಟ್ ಮಾಡಲಾಗಿದೆ. ಅವರು ಕೋರ್ಟ್‌ನಲ್ಲಿ ವಿಚಾರಣೆ ಎದುರಿಸುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅನೇಕ ಆಡಿಯೊಗಳು ಹೊರಬಂದಿವೆ. ಅದರ ಸತ್ಯಾಸತ್ಯತೆ ಹೊರಬರಬೇಕಿದೆ' ಎಂದರು.

'ಸಿದ್ದರಾಮಯ್ಯ ಅವರಿಗೆ ಬಿಜೆಪಿ ಮೇಲೆ ಸಿಟ್ಟು ಇಲ್ಲ. ಆದರೆ ಅವರಿಗೆ ತಮ್ಮ ಪಕ್ಷದಲ್ಲಿರುವವರ ಮೇಲೆಯೇ ಕೋಪವಿದೆ' ಎಂದು ಪ್ರತಿಕ್ರಿಯಿಸಿದರು.

'ಕುರಿ ಕಾಯುತ್ತಿದ್ದ ತಾವು ಮುಖ್ಯಮಂತ್ರಿ ಆಗಿದ್ದಕ್ಕೆ ಕೆಲವರಿಗೆ ಹೊಟ್ಟೆ ಕಿಚ್ಚು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಆ ಬಗ್ಗೆ ನಮಗೆ ಸಂತೋಷವಿದೆ. ಹೀಗಾಗಿ ಅವರು ಈ ಬಜೆಟ್‌ನಲ್ಲಾದರೂ ಹಿಂದುಳಿದ ವರ್ಗಗಳ ನಿಗಮಗಳಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರ ಭ್ರಷ್ಟಾಚಾರದ ಕುರಿತು ಮಾತನಾಡುವ ಧೈರ್ಯ ಇದೆಯಾ? ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ವಾಲ್ಮೀಕಿ ಹಗರಣ, ಮುಡಾ ಹಗರಣ ನಡೆದಿದೆ. ವಾಲ್ಮೀಕಿ ನಿಗಮದ ಹಣವನ್ನು ಚುನಾವಣೆಗೆ ಬಳಸಿಕೊಂಡಿಲ್ಲವೇ? ಭ್ರಷ್ಟಾಚಾರದ ಬಗ್ಗೆ ಪ್ರಿಯಾಂಕ್ ಮಾತನಾಡುವುದು ಭೂತದ ಬಾಯಲ್ಲಿ ಭಗವದ್ಗೀತೆ ಬಂದಂತೆ. ಭ್ರಷ್ಟಾಚಾರಕ್ಕೆ ಜಾತಿ ಲೇಪನ ಹಚ್ಚುವುದಿಲ್ಲ. ಸತ್ಯಾಸತ್ಯತೆ ಹೊರಗೆ ಬರಲಿ' ಎಂದು ಹೇಳಿದರು.

> **ಚಂದ್ರು ಲಮಾಣಿ ಪ್ರಕರಣದ ತನಿಖೆ ಆಗಬೇಕು. ಸ್ವಾಮೀಜಿ ಸಂಭಾಷಣೆಯ ಆಡಿಯೊಗಳು ಹೊರಬಂದಿವೆ. ಬೇಕಂತಲೇ ಯಾರೋ ಬಲೆಗೆ ಬೀಳಿಸಿದ್ದಾರೆಯೇ ಎಂಬ ಬಗ್ಗೆ ತನಿಖೆ ಆಗಬೇಕು**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

'ಲಂಚ ಪಡೆದಿರುವುದು ಸಮರ್ಥನೀಯ ಅಲ್ಲ'

ನವದೆಹಲಿ: 'ಗುತ್ತಿಗೆದಾರನಿಂದ ₹5 ಲಕ್ಷ ಲಂಚ ಪಡೆದ ಆರೋಪ ಎದುರಿಸುತ್ತಿರುವ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಡಾ. ಚಂದ್ರು ಲಮಾಣಿ ಅವರ ಕೃತ್ಯವನ್ನು ನಾನು ಯಾವುದೇ ಕಾರಣಕ್ಕೂ ಸಮರ್ಥಿಸಿಕೊಳ್ಳುವುದಿಲ್ಲ. ಲಂಚ ಪಡೆದಿರುವುದು ಸಮಂಜಸ ಅಲ್ಲ' ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಲಮಾಣಿ ವಿರುದ್ಧ ಪಿತೂರಿ ಹಾಗೂ ಷಡ್ಯಂತ್ರ ನಡೆದಿರಬಹುದು. ಅವರು ಉತ್ತಮ ಕೆಲಸ ಮಾಡುತ್ತಿದ್ದರು. ಈ ಘಟನೆ ನೋವು ತಂದಿದೆ' ಎಂದರು.

'ಕುರಿ ಕಾಯುತ್ತಿದ್ದವನು ಮುಖ್ಯಮಂತ್ರಿ ಆದದ್ದೇ ಪಟ್ಟಭದ್ರರ ಕಣ್ಣು ಕೆಂಪಾಗಲು ಕಾರಣ' ಎಂದು ಸಿದ್ದರಾಮಯ್ಯ ಮಾಡಿದ 'ಎಕ್ಸ್' ಪೋಸ್ಟ್‌ಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ದಾರಿ ತಪ್ಪಿದ ಮಗ. ಅವರು 17 ಬಜೆಟ್ ಮಂಡಿಸಿದ್ದಾರೆ. ಕಾಂಗ್ರೆಸ್‌ಗೆ ಸೇರಿದ ದಿನದಿಂದ ಒಂದಲ್ಲ ಒಂದು ಅಧಿಕಾರದ ಸುಖ ಅನುಭವಿಸಿದ್ದಾರೆ. ಅಧಿಕಾರ ಎಷ್ಟು ವರ್ಷ? ನೂರು ವರ್ಷ ಅಧಿಕಾರ ನಡೆಸಬೇಕು ಎಂದು ಬಯಸಿದ್ದಾರಾ. ಇಂತಹ ದುರ್ಬುದ್ಧಿ ಒಳ್ಳೆಯದಲ್ಲ' ಎಂದರು.

'ದಲಿತ ಸಿ.ಎಂ ಮಾಡುವ ಕಳಕಳಿ ಕಾಂಗ್ರೆಸ್ಸಿಗಿಲ್ಲ'

ಬೆಂಗಳೂರು: ದಲಿತ ಮುಖ್ಯಮಂತ್ರಿ ಮಾಡುವ ನೈಜ ಕಳಕಳಿ ಕಾಂಗ್ರೆಸ್ ನಾಯಕರಿಗಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಟೀಕಿಸಿದ್ದಾರೆ.



ಪ್ರಲ್ಹಾದ ಜೋಶಿ

'ಮುಖ್ಯಮಂತ್ರಿ ಕುರ್ಚಿ'ಗೆ ಮುಖ್ಯಮಂತ್ರಿ– ಉಪ ಮುಖ್ಯಮಂತ್ರಿ ಕಾದಾಟ ನಡೆಸಿರುವ ಕಾರಣ ಕಾಂಗ್ರೆಸ್ ಪಕ್ಷದಲ್ಲಿ ಈಗ ಅದಕ್ಕೆ 'ದಲಿತ ಸಿಎಂ' ಎಂಬ ಹೊಸ ಆಯಾಮ ಕೊಟ್ಟಿದ್ದಾರೆ ಎಂದು ಅವರು ತಿಳಿಸಿದರು.

'ರಾಜ್ಯ ಕಾಂಗ್ರೆಸ್ಸಿಗರಿಗೆ ಹೇಳೋರೂ– ಕೇಳೋರು ಯಾರೂ ಇಲ್ಲದಂತಾಗಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಶಿಷ್ಯಂದಿರು ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರೇ ಈಗಿನ ಮತ್ತು ಮುಂದಿನ ಬಜೆಟ್ ಮಂಡಿಸುತ್ತಾರೆ ಎನ್ನೋರು ಕೆಲವರು, ಇದೇ ಅವರ ಕೊನೆ ಬಜೆಟ್ ಅನ್ನೋರು ಮತ್ತೆ ಕೆಲವರು. ಇವರ ಜಂಜಾಟದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ' ಎಂದು ದೂರಿದರು.

ನೀರಿನ ಕ್ಷಾಮ: 'ರಾಜ್ಯದಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ನೀರಿನ ಬವಣೆ ಹೇಳ ತೀರದು. ರಸ್ತೆಗಳೂ ಅಧೋಗತಿ ಸ್ಥಿತಿ ತಲುಪಿವೆ' ಎಂದರು.

ತುಮಕೂರಿನಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ; ರಾರಾಜಿಸಿದ ನೀಲಿ ಬಾವುಟ

ಒಳಮೀಸಲಾತಿ ಪೂರ್ಣ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ತುಮಕೂರು: ಒಳ ಮೀಸಲಾತಿಯನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿ ಒಳ ಮೀಸಲಾತಿ ಹೋರಾಟ ಸಮಿತಿ, ಜಿಲ್ಲಾ ಮಾದಾರ ಮಹಾಸಭಾ ನೇತೃತ್ವದಲ್ಲಿ ನಗರದಲ್ಲಿ ಪರಿಶಿಷ್ಟ ಜಾತಿ ಸಮುದಾಯದವರು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಸರ್ಕಾರದ ಧೋರಣೆ ವಿರುದ್ಧ ಘೋಷಣೆಗಳು ಮೊಳಗಿದವು. ನೀಲಿ ಬಣ್ಣದ ಬಾವುಟ ಹಾಗೂ ಶಾಲುಗಳು ಮೆರವಣಿಗೆಯಲ್ಲಿ ರಾರಾಜಿಸಿದವು.

ಪ್ರಮುಖರಾದ ಕೆ.ದೊರೈರಾಜ್, ವೈ.ಎಚ್.ಹುಚ್ಚಯ್ಯ, ಕೆಂಚಮಾರಯ್ಯ, ಗಂಗಹನುಮಯ್ಯ, ವೈ.ಕೆ.ಬಾಲಕೃಷ್ಣಪ್ಪ, ಕುಂದೂರು ತಿಮ್ಮಯ್ಯ, ಕೊಟ್ಟಶಂಕರ್, ರಾಜಸಿಂಹ, ಪಾವಗಡ ಶ್ರೀರಾಮ್, ನರಸಿಂಹಮೂರ್ತಿ, ಗಂಗರಾಜು, ಡಿ.ಟಿ. ವೆಂಕಟೇಶ್, ಡಾ.ಅರುಂಧತಿ, ವೈ.ಕೆ. ತಿಪ್ಪೇಸ್ವಾಮಿ, ಕುಂದೂರು ಮುರುಳಿ ಇತರರು ಭಾಗವಹಿಸಿದ್ದರು.

ಒಳಮೀಸಲಾತಿ ಜಾರಿಗೆ ಆಗ್ರಹಿಸಿ ಮುಂದಿನ ಅಧಿವೇಶನದಲ್ಲಿ ಸಚಿವರು, ಶಾಸಕರು ಒತ್ತಡ ತರಬೇಕು ಎಂದು ಪ್ರತಿಭಟನೆಯಲ್ಲಿ ಮಾತನಾಡಿದ ಪ್ರಮುಖರು ಒತ್ತಾಯಿಸಿದರು.

ಒಳ ಮೀಸಲಾತಿಗೆ ಆಗ್ರಹಿಸಿ ಸತತವಾಗಿ ಹೋರಾಟ ಮಾಡಿಕೊಂಡು ಬಂದಿದ್ದರೂ ಜಾರಿ ಮಾಡದೆ ವಿಳಂಬ ಮಾಡಲಾಗುತ್ತಿದೆ. ಸರ್ಕಾರ ಒಳ ಮೀಸಲಾತಿ ವಿಚಾರದಲ್ಲಿ ಅಸ್ಪಷ್ಟ ತೀರ್ಮಾನ ಕೈಗೊಳ್ಳುತ್ತದೆ ಎಂದು ಯಾರು ಭಾವಿಸಿರಲಿಲ್ಲ. ಈಗಲಾದರೂ ಸರಿಪಡಿಸಿ ಜಾರಿ ಮಾಡಬೇಕೆಂದು ಮುಖಂಡರು ಮನವಿ ಮಾಡಿದರು.



ತುಮಕೂರಿನಲ್ಲಿ ಸಂಪೂರ್ಣ ಒಳಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು

ಪ್ರಮುಖ ಬೇಡಿಕೆಗಳು

- ನೇರ ನೇಮಕಾತಿ ಜತೆಗೆ ಪದೋನ್ನತಿ, ಬ್ಯಾಕ್‌ಲಾಗ್ ಹುದ್ದೆ ಭರ್ತಿ, ಕೆಐಎಡಿಬಿ, ಬಿಡಿಎ ಹಾಗೂ ಸರ್ಕಾರಿ ಗುತ್ತಿಗೆ ಸೇರಿ ಎಲ್ಲ ವಲಯಗಳಲ್ಲಿ ಒಳಮೀಸಲಾತಿ ಜಾರಿಗೊಳಿಸಬೇಕು
- ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ), ಪರಿಶಿಷ್ಟ ಪಂಗಡದ ಉಪಯೋಜನೆ (ಟಿಎಸ್‌ಪಿ) ಅನುದಾನ 6:6:5 ಅನುಪಾತದಲ್ಲಿ ಹಂಚಿಕೆ ಆಗಬೇಕು
- ಅಲೆಮಾರಿ ಸಮುದಾಯಗಳಿಗೆ ಪ್ರತ್ಯೇಕವಾಗಿ ಶೇ 1ರಷ್ಟು ಮೀಸಲಾತಿ ನೀಡಬೇಕು. ಈ ಸಮುದಾಯಕ್ಕೆ ಪ್ರತ್ಯೇಕ ನಿಗಮ ಹಾಗೂ ಪ್ರತ್ಯೇಕ ಪ್ಯಾಕೇಜ್ ಘೋಷಿಸಬೇಕು
- ಒಳಮೀಸಲಾತಿ ಮುಂದುವರಿಸಲು ಶಾಶ್ವತ ಆಯೋಗ ನೇಮಕ ಮಾಡಬೇಕು. ಮೀಸಲಾತಿ ಹೆಚ್ಚಳಕ್ಕೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು
- ಒಳಮೀಸಲಾತಿ ಹೋರಾಟಗಾರರ ಮೇಲೆ ದಾಖಲಿಸಿರುವ ಎಲ್ಲ ಪ್ರಕರಣಗಳನ್ನು ಹಿಂಪಡೆಯಬೇಕು
- ಆದಿ ಜಾಂಬವ ಅಭಿವೃದ್ಧಿ ನಿಗಮ, ಲಿಡ್ಕರ್, ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಿಗೆ ತಲಾ ₹2 ಸಾವಿರ ಕೋಟಿ ಅನುದಾನ ಒದಗಿಸಬೇಕು

ಜೀವ ಬೆದರಿಕೆ ಕರೆ: ಕುಮಾರ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಗದಗ: 'ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಕ್ರೂರಿ ಮನುಷ್ಯ. ತನ್ನದೇ ಸಮಾಜದ ಸ್ವಾಮೀಜಿಗೆ ನೋವು ಕೊಟ್ಟ. ನಾನು ಪಕ್ಷದ ಕಾರ್ಯಕರ್ತರೊಬ್ಬರ ಬಳಿ ಮಾತನಾಡಿದ ಆಡಿಯೊ ಜಾಲತಾಣದಲ್ಲಿ ಹರಿದಾಡಿದ ಬಳಿಕ ಜೀವ ಬೆದರಿಕೆ ಕರೆಗಳು ಬರುತ್ತಿವೆ' ಎಂದು ಆದರಹಳ್ಳಿ ಕುಮಾರ ಮಹಾರಾಜ ಸ್ವಾಮೀಜಿ ಹೇಳಿದರು.

'ಭಾನುವಾರ ರಾತ್ರಿ 1 ಗಂಟೆ ಸುಮಾರಿಗೆ ಕರೆ ಮಾಡಿ ಬೆದರಿಕೆ ಹಾಕಿದ್ದಾರೆ. ಅವರು ಯಾರು, ಎಲ್ಲಿಯವರು ಎಂಬುದು ಗೊತ್ತಿಲ್ಲ' ಎಂದು ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಶಿರಹಟ್ಟಿ ಕ್ಷೇತ್ರ ಬಂಜಾರ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷರನ್ನು ಬದಲಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕೆ ಶಾಸಕ ಚಂದ್ರು ಲಮಾಣಿ ನನ್ನ ವಿರುದ್ಧ ಸಿಟ್ಟಿಗೆದ್ದಿದ್ದ. ಆಗಿನಿಂದ ಆತನಿಂದ ನನಗೆ ತೊಂದರೆಯಾಗಿದೆ. ಆದರೆ, ಲೋಕಾಯುಕ್ತ ದಾಳಿಗೂ ಮತ್ತು ನನಗೂ ಸಂಬಂಧವಿಲ್ಲ' ಎಂದರು.

'ಗುತ್ತಿಗೆದಾರನಿಂದ ಲಂಚ ಪಡೆಯುವ ವೇಳೆ ಲೋಕಾಯುಕ್ತ ಬಲೆಗೆ ಬಿದ್ದ ಶಿರಹಟ್ಟಿ ಬಿಜೆಪಿ ಶಾಸಕ ಡಾ. ಚಂದ್ರು ಲಮಾಣಿ ಶಾಸಕ ಸ್ಥಾನ ಅಮಾನತು ಮಾಡಬೇಕು' ಎಂದು ಆಗ್ರಹಿಸಿ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಜನರ ದುಡ್ಡು ನುಂಗಿದವರಿಗೆ ಜೈಲೆ ಗತಿ' ಎಂದು ಘೋಷಣೆ ಕೂಗಿದರು. 'ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಅವರ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಗರಿಗೆ ಇಲ್ಲ' ಎಂದು ಎಚ್ಚರಿಕೆ ನೀಡಿದರು.

ಈ ಮಧ್ಯೆ ಬಿಜೆಪಿಯ ಕಾರ್ಯಕರ್ತರು, ಲೋಕಾಯುಕ್ತರಿಗೆ ದೂರು ನೀಡಿದ್ದ ವಿಜಯ ಪೂಜಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅವರ ಫೇಸ್‌ಬುಕ್ ಖಾತೆ ಮಾಹಿತಿ ಆಧರಿಸಿ, 'ಕಾಂಗ್ರೆಸ್ ನಾಯಕರೊಂದಿಗೆ ವಿಜಯ ಪೂಜಾರ ಗುರುತಿಸಿಕೊಂಡಿದ್ದಾರೆ. ಅವರದ್ದೇ ಷಡ್ಯಂತ್ರದಿಂದ ಶಾಸಕರಿಗೆ ಅನ್ಯಾಯವಾಗಿದೆ' ಎಂದರು.

> **ಬಿಜೆಪಿ ಶಾಸಕ ಚಂದ್ರು ಲಮಾಣಿ ಅವರ ವಿರುದ್ಧ ಷಡ್ಯಂತ್ರ ನಡೆದಿದೆ. ಒತ್ತಾಯದಿಂದ ಹಣ ನೀಡಲಾಗಿದೆ. ಲಂಚ ಪಡೆಯುವಂತೆ ಒತ್ತಾಯಿಸುವುದು ತಪ್ಪು. ಈ ಬಗ್ಗೆ ಎಲ್ಲ ಆಯಾಮಗಳಲ್ಲಿ ತನಿಖೆ ಆಗಬೇಕು**
> **ಬಸವರಾಜ ಬೊಮ್ಮಾಯಿ,** ಸಂಸದ

> **ಶಾಸಕ ಡಾ.ಚಂದ್ರು ಲಮಾಣಿ ವಿರುದ್ಧ ಪಿತೂರಿ ಮಾಡಿ, ಭ್ರಷ್ಟಾಚಾರ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಇದಕ್ಕೆ ಅದೇ ಸಮುದಾಯದ ವ್ಯಕ್ತಿ ಬಳಸಿಕೊಳ್ಳಲಾಗಿದೆ. ಇದರ ವಿರುದ್ಧ ಧ್ವನಿ ಎತ್ತುವೆ**
> **ರಮೇಶ ಜಾರಕಿಹೊಳಿ,** ಶಾಸಕ

'ಅಧಿಕಾರ ಹಂಚಿಕೆ: ಸಾರ್ವಜನಿಕ ಚರ್ಚೆ ಸಲ್ಲದು'

ಪ್ರಜಾವಾಣಿ ವಾರ್ತೆ

ಉಡುಪಿ: 'ಸುಭದ್ರ ಸರ್ಕಾರ ನೀಡಲು ಪ್ರಯತ್ನಿಸಬೇಕು. ಅಧಿಕಾರ ಹಂಚಿಕೆ ಸಾರ್ವಜನಿಕ ಚರ್ಚೆಯ ವಸ್ತು ಆಗಬಾರದು' ಎಂದು ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಸೋಮವಾರ ಇಲ್ಲಿ ಹೇಳಿದರು.



ವೀರಪ್ಪ ಮೊಯಿಲಿ

ಕಾರ್ಕಳದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅನಿವಾರ್ಯತೆ, ಅವಶ್ಯಕತೆ ಇದ್ದರೆ ಹೈಕಮಾಂಡ್ ತೀರ್ಮಾನಿಸಬೇಕೇ ಹೊರತು ಸಾರ್ವಜನಿಕವಾಗಿ ಚರ್ಚೆ ಸರಿಯಲ್ಲ' ಎಂದು ಹೇಳಿದರು.

'ಏನೇ ಕೋಪವಿದ್ದರೂ ಸಂಪುಟ ಸಭೆ ನಿರಾತಂಕವಾಗಿ ನಡೆಯುತ್ತಿದೆ. ಸರ್ಕಾರದ ಕಾರ್ಯಕ್ರಮಗಳು ಅನುಷ್ಠಾನ ಆಗುತ್ತಿವೆ. ನಮಗೆ ಬೇಕಾಗಿರುವುದು ಅಷ್ಟೇ. ಅವರು ಪರಸ್ಪರ ಅಪ್ಪಿಕೊಳ್ಳಲಿ ಅಥವಾ ಮುನಿಸಿಕೊಳ್ಳಲಿ ಜನರಿಗೆ ಬೇಕಾದದ್ದು ಉತ್ತಮ ಆಡಳಿತ' ಎಂದು ತಿಳಿಸಿದರು.

'ಸಚಿವರಾಗಬೇಕು ಎಂದು ಹಂಬಲಿಸುವವರು ಇರುತ್ತಾರೆ. ಮುಖ್ಯಮಂತ್ರಿ ಆಗಬೇಕು ಎಂದು ಹಂಬಲಿಸುವುದು ತಪ್ಪಲ್ಲ, ಆದರೆ ಅದು ಸಾರ್ವಜನಿಕ ಚರ್ಚೆಯ ವಸ್ತು ಆಗಲೇಬಾರದು' ಎಂದರು.

ಸಿ.ಎಂ ಹುದ್ದೆ ರೇಸ್‌ನಲ್ಲಿ ನಾನಿಲ್ಲ: ಜಾರಕಿಹೊಳಿ

ಕುಮಟಾ (ಉತ್ತರ ಕನ್ನಡ): 'ದಲಿತರನ್ನು ಸಿ.ಎಂ ಮಾಡಬೇಕು ಎಂದಾಕ್ಷಣ, ಮಾಡಲು ಆಗದು. ಸದ್ಯಕ್ಕೆ ಸಿ.ಎಂ ಸಿದ್ದರಾಮಯ್ಯ ಇದ್ದಾರೆ. ಅವರೇ ಮುಂದುವರಿಯುತ್ತಾರೆ. ನಾನು ಮುಖ್ಯಮಂತ್ರಿ ಹುದ್ದೆ ರೇಸ್‌ನಲ್ಲಿಲ್ಲ' ಎಂದು ಲೋಕೋಪಯೋಗಿ ಸಚಿವ ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಸತೀಶ ಜಾರಕಿಹೊಳಿ

'ಸಿದ್ದರಾಮಯ್ಯ ಅವರನ್ನು ಐದು ವರ್ಷಕ್ಕೆ ಆಯ್ಕೆ ಮಾಡಲಾಗಿದೆ. ಗೊಂದಲಗಳಿಗೆ ತೆರೆ ಬೀಳಬೇಕಿದೆ. ಪಕ್ಷದ ಹೈಕಮಾಂಡ್ ಸೂಕ್ತವಾಗಿ ನಿರ್ಧರಿಸುತ್ತದೆ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿಯವರು ಬೇರೆಯವರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದರು. ಈಗ ಅವರ ಪಕ್ಷದ ಶಾಸಕ ಲಂಚ ಸ್ವೀಕರಿಸುವ ವೇಳೆ ಸಿಕ್ಕಿಬಿದ್ದು, ಪಕ್ಷದ ಭ್ರಷ್ಟಾಚಾರಕ್ಕೆ ಸಾಕ್ಷಿ ಆಗಿದ್ದಾರೆ' ಎಂದರು.

'ಮಹದೇವಪ್ಪ ಮುಖ್ಯಮಂತ್ರಿಯಾದರೆ ಸಂತೋಷ'

ಮೈಸೂರು: 'ಡಾ. ಎಚ್.ಸಿ.ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ, ಅವರು ರಾಜ್ಯದ ಮುಖ್ಯಮಂತ್ರಿಯಾದರೆ ಸಂತೋಷ' ಎಂದು ರೇಷ್ಮೆ ಸಚಿವ ಕೆ. ವೆಂಕಟೇಶ್ ಸೋಮವಾರ ಇಲ್ಲಿ ಹೇಳಿದರು.




ಕೆ.ವೆಂಕಟೇಶ್

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, 'ಸದ್ಯ ರಾಜ್ಯದಲ್ಲಿ ಸಿ.ಎಂ ಕುರ್ಚಿ ಖಾಲಿ ಇಲ್ಲ. ಖಾಲಿಯಾದ ಮೇಲೆ ದಲಿತ, ಲಿಂಗಾಯತ, ಒಕ್ಕಲಿಗ, ಕುರುಬ.. ಹೀಗೆ ಯಾವುದಾದರೂ ಸಮುದಾಯದರು ಆಗುತ್ತಾರೆ' ಎಂದರು.

ರಾಜಕೀಯದಲ್ಲಿ ಕೊನೆಗಾಲದಲ್ಲಿದ್ದೇನೆ. ಸಿ.ಎಂ ಆಗುವ ಆಸೆ ಇಲ್ಲ. ಹೊಸಬರಿಗೆ ಸಚಿವ ಸ್ಥಾನ ನೀಡುವ ಕುರಿತು ಹೈಕಮಾಂಡ್ ನಿರ್ಧಾರಕ್ಕೆ ಬದ್ಧ' ಎಂದು ಅವರು ಹೇಳಿದರು.

'ಸಿದ್ದರಾಮಯ್ಯಗೆ ಅನ್ಯಾಯವೆಂದರೆ ಏನರ್ಥ?'

ಹಾವೇರಿ: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರ ದಾಖಲೆ ಮುರಿದಿದ್ದಾರೆ. ಏಳು ವರ್ಷ ಅಧಿಕಾರ ಅನುಭವಿಸಿದ್ದಾರೆ. ಅನ್ಯಾಯ ಆಗಿದೆ ಎಂದರೆ ಏನು ಅರ್ಥ' ಎಂದು ಸಂಸದ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.



ಬಸವರಾಜ ಬೊಮ್ಮಾಯಿ

'ರಾಜಕೀಯವಾಗಿ ನನಗೆ ಅನ್ಯಾಯ ಆಗುತ್ತಿದೆ' ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಷಯಕ್ಕೆ ಹೀಗೆ ಪ್ರತಿಕ್ರಿಯಿಸಿದರು.


'ಸಿದ್ದರಾಮಯ್ಯ ಅವರು ತಮ್ಮ ಅಧಿಕಾರ ಅವಧಿಯಲ್ಲಿ ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ವರ್ಗದವರಿಗೆ ಏನು ಮಾಡಿದ್ದಾರೆ ಎನ್ನುವುದನ್ನು ಲೆಕ್ಕ ಕೊಡಬೇಕು' ಎಂದು ಆಗ್ರಹಿಸಿದರು.

ಕಾಂತಾರ ಚಾಪ್ಟರ್–1 ಚಿತ್ರದ ದೈವಗಳ ಅವಹೇಳನ ಆರೋಪ

ರಣವೀರ್ ಸಿಂಗ್ ಅರ್ಜಿ ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂತಾರ ಚಾಪ್ಟರ್–1' ಚಿತ್ರದ ದೈವಪಾತ್ರಗಳ ಅವಹೇಳನ ಮಾಡಿದ ಆರೋಪದಡಿ ತಮ್ಮ ವಿರುದ್ಧ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಬಾಲಿವುಡ್ ನಟ ರಣವೀರ್ ಸಿಂಗ್ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.



ರಣವೀರ್ ಸಿಂಗ್

ಈ ಸಂಬಂಧ ರಣವೀರ್ ಸಿಂಗ್ (41) ಸಲ್ಲಿಸಿರುವ ಕ್ರಿಮಿನಲ್ ಅರ್ಜಿ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ಮಂಗಳವಾರ (ಫೆ.24) ವಿಚಾರಣೆಗೆ ನಿಗದಿಯಾಗಿದೆ. ಸೋಮವಾರವಷ್ಟೇ ರಣವೀರ್ ಸಿಂಗ್ ಪರ ವಕೀಲರು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಹಾಜರಾಗಿ ಅರ್ಜಿಯ ತುರ್ತು ವಿಚಾರಣೆ ಕೈಗೆತ್ತಿಕೊಳ್ಳುವಂತೆ ಕೋರಿದ್ದರು.

ಪ್ರಕರಣವೇನು?: ಗೋವಾದಲ್ಲಿ 2025ರ ನವೆಂಬರ್ 28ರಂದು 'ಭಾರತೀಯ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದ ಸಮಾರೋಪ ಸಮಾರಂಭ ಜರುಗಿತ್ತು. ಈ ಸಂದರ್ಭದಲ್ಲಿ ರಣವೀರ್ ಸಿಂಗ್, 'ಕಾಂತಾರ ಚಾಪ್ಟರ್–1' ಕುರಿತು ಮಾತನಾಡಿದ್ದರು.

ತಮ್ಮ ಮಾತುಗಳಲ್ಲಿ ಅವರು, 'ಕರಾವಳಿ ಕರ್ನಾಟಕದ ಪಂಜುರ್ಲಿ, ಗುಳಿಗ ದೈವಗಳ ದೈವೀಕ ಅಭಿವ್ಯಕ್ತಿಯನ್ನು ಒರಟು, ಹಾಸ್ಯಮಯ ಮತ್ತು ಅವಹೇಳನಕಾರಿ ರೀತಿಯಲ್ಲಿ ಅನುಕರಣೆ ಮಾಡಿ ತೋರಿಸಿದ್ದಾರೆ. ಚಾಮುಂಡಿ ದೈವವನ್ನು ಹೆಣ್ಣು ದೆವ್ವ ಎಂದು ಕರೆದು ಅಪಮಾನ ಮಾಡಿದ್ದಾರೆ. ಈ ಮೂಲಕ ಲಕ್ಷಾಂತರ ಭಕ್ತರ ಧಾರ್ಮಿಕ ಮನೋಭಾವನೆಗೆ ಧಕ್ಕೆ ತಂದಿದ್ದಾರೆ. ಸಮಾಜದಲ್ಲಿ ವಿಭಿನ್ನ ಧಾರ್ಮಿಕ ಗುಂಪುಗಳ ನಡುವೆ ದ್ವೇಷ ಪ್ರಚೋದಿಸಿದ್ದಾರೆ. ಹಾಗಾಗಿ, ರಣವೀರ್ ಸಿಂಗ್ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು' ಎಂದು ನಗರದ ವಕೀಲ ಪ್ರಶಾಂತ್ ಮೆಥಲ್ 1ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ದೂರಿನ ವಿಚಾರಣೆ ನಡೆಸಿದ್ದ ಸಿಜೆಎಂ ನ್ಯಾಯಾಲಯ ತನಿಖೆ ನಡೆಸುವಂತೆ 2026ರ ಜನವರಿ 23ರಂದು ಪೊಲೀಸರಿಗೆ ನಿರ್ದೇಶಿಸಿತ್ತು. ಇದರನ್ವಯ ಹೈಗ್ರೌಂಡ್ಸ್ ಠಾಣಾ ಪೊಲೀಸರು, ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್‌ಎಸ್) ಕಲಂ 196, 299 ಮತ್ತು 302ರ ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ವಿಚಾರಣೆಗೆ ಹಾಜರಾಗಲು ರಣವೀರ್ ಸಿಂಗ್ ಅವರಿಗೆ ನೋಟಿಸ್ ಜಾರಿಗೊಳಿಸಿದ್ದರು.

ಮುಖ್ಯಾಂಶಗಳು

- ಚಾಮುಂಡಿ ದೈವವನ್ನು ಹೆಣ್ಣು ದೆವ್ವವೆಂದು ಅಪಮಾನ: ಆರೋಪ
- ನ್ಯಾ.ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದಲ್ಲಿ ವಿಚಾರಣೆ

ಮಿಷನ್ ಪ್ರಕೃತಿ 10 ಶಾಲೆಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ಜಾಗೃತಿ ಮತ್ತು ಸುಸ್ಥಿರ ಅಭ್ಯಾಸಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಕ್ಕಾಗಿ ರಾಜ್ಯದ 10 ಶಾಲೆಗಳಿಗೆ 'ಮಿಷನ್ ಪ್ರಕೃತಿ' ಪ್ರಶಸ್ತಿ ಲಭಿಸಿದೆ.

ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಡಬ್ಲ್ಯುಡಬ್ಲ್ಯುಎಫ್ ಇಂಡಿಯಾ ಸಹಯೋಗದಲ್ಲಿ ಆಯೋಜಿಸಿದ್ದ 'ಮಿಷನ್ ಪ್ರಕೃತಿ: ತರಗತಿಯಿಂದ ಸಂರಕ್ಷಣೆಯತ್ತ ಕಾರ್ಯಕ್ರಮ'ದಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಶಸ್ತಿ ಪ್ರದಾನ ಮಾಡಿದರು.

ಬಳ್ಳಾರಿಯ ಎಮ್ಮಿಗನೂರು ಶಾಲೆ, ಬೆಳಗಾವಿಯ ಕಾತ್ರಾಳ, ಚಿಕ್ಕಬಳ್ಳಾಪುರದ ಅಲೀಪುರ, ದಾವಣಗೆರೆ ಜಿಲ್ಲೆಯ ಹಿರೇಗೋಣಿಗೆರೆ, ಕಲಘಟಗಿಯ ಜೋಡಳ್ಳಿ, ಉಡುಪಿಯ ಕೋಟೇಶ್ವರ, ದಕ್ಷಿಣ ಕನ್ನಡದ ಅಳಿಯೂರು, ಚಾಮರಾಜನಗರದ ಯಳಂದೂರು, ಉಡುಪಿಯ ಹಕ್ಲಾಡಿ, ಮಲ್ಲೂರು ಪ್ರಶಸ್ತಿ ಪುರಸ್ಕೃತ ಶಾಲೆಗಳು.

‘ನರೇಗಾ ಮರುಸ್ಥಾಪನೆವರೆಗೂ ಹೋರಾಟ’

ಚಿಕ್ಕಬಳ್ಳಾಪುರದಲ್ಲಿ ‘ಮನರೇಗಾ ಬಚಾವೋ’ ಸಮಾವೇಶ • ಮಣ್ಣು ಹೊತ್ತು ಚಾಲನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ವಿಬಿ–ಜಿ ರಾಮ್ ಜಿ’ ರದ್ದುಗೊಳಿಸಿ, ಮನರೇಗಾ ಮರುಸ್ಥಾಪಿಸಬೇಕು. ಮನರೇಗಾ ಮರು ಸ್ಥಾಪಿಸುವವರೆಗೆ ನಾವು ಹೋರಾಟ ನಿಲ್ಲಿಸುವುದಿಲ್ಲ’ ಎಂದು ಕಾಂಗ್ರೆಸ್ ಪಕ್ಷದ ನಾಯಕರು ಶಪಥ ಮಾಡಿದರು.

ನಗರದಲ್ಲಿ ಸೋಮವಾರ ಪಕ್ಷ ಏರ್ಪಡಿಸಿದ್ದ ‘ಮನರೇಗಾ ಬಚಾವೋ ಸಂಗ್ರಾಮ’ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರು, ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮುಂತಾದವರು ಗುದ್ದಲಿಯಿಂದ ಮಣ್ಣು ಅಗೆದು ಬುಟ್ಟಿಗೆ ತುಂಬಿ ತಲೆಮೇಲೆ ಹೊತ್ತುಕೊಳ್ಳುವ ಮೂಲಕ ‘ಸಂಗ್ರಾಮ’ಕ್ಕೆ ಚಾಲನೆ ನೀಡಿದರು.

‘ಮನರೇಗಾ ಹೆಸರು, ಸ್ವರೂಪ ಬದಲಿಸುವ ಮೂಲಕ ಕೂಲಿ ಕಾರ್ಮಿಕರು, ಪರಿಶಿಷ್ಟ ಜಾತಿ, ಪಂಗಡ ಹಾಗೂ ದುರ್ಬಲ ವರ್ಗಗಳ ಬದುಕನ್ನು ಬಿಜೆಪಿ ನಾಶಗೊಳಿಸುತ್ತಿದೆ’ ಎಂದು ಸಚಿವರು, ಮುಖಂಡರು ಟೀಕಿಸಿದರು.

ಸಿದ್ದರಾಮಯ್ಯ ಮಾತನಾಡಿ, ’ಮನರೇಗಾದಡಿ ದೇಶದಲ್ಲಿ ಪರಿಶಿಷ್ಟ ಜಾತಿಯ ಶೇ 17 ಮತ್ತು ಪಂಗಡದ ಶೇ 11ರಷ್ಟು ಸೇರಿ ಶೇ 53ರಷ್ಟು ಮಂದಿ ಉದ್ಯೋಗ ಪಡೆಯುತ್ತಿದ್ದರು. ಈಗ ಬಿಜೆಪಿ ಸರ್ಕಾರ ಈ ಜನರ ಉದ್ಯೋಗದ ಹಕ್ಕುಗಳನ್ನು ಕಸಿದುಕೊಂಡಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಜನರ ಉದ್ಯೋಗದ ಹಕ್ಕು ಮರುಸ್ಥಾಪಿಸಬೇಕು. ನರೇಗಾದ ಕೂಲಿಯನ್ನು ದಿನಕ್ಕೆ ₹400 ನೀಡಬೇಕು. ಈ ಬೇಡಿಕೆಗಳು ಈಡೇರದೇ ಆಂದೋಲನ ನಿಲ್ಲದು. ಹೋರಾಟದಿಂದಾಗಿಯೇ ರೈತ ವಿರೋಧಿ ಕಾಯ್ದೆಗಳನ್ನು ಕೇಂದ್ರ ರದ್ದುಗೊಳಿಸಿತು. ಅದೇ ರೀತಿಯ ಮನರೇಗಾ ಕುರಿತು ಹೋರಾಟ ನಡೆಯಲಿದೆ’ ಎಂದು ಹೇಳಿದರು.

ದೀಪ ಆರುವ ಮುನ್ನ ಜೋರಾಗಿ ಉರಿಯುತ್ತದೆ. ಅದೇ ರೀತಿಯಲ್ಲಿ ಬಿಜೆಪಿಯ ಅಂತಿಮ ದಿನಗಳು ಇವು ಎಂದು ಕಿಡಿಕಾರಿದರು.

ವಿಬಿ–ಜಿ ರಾಮ್ ಜಿ ಯೋಜನೆಯಡಿ ರಾಜ್ಯ ಸರ್ಕಾರ ಶೇ 40ರಷ್ಟು ಅನುದಾನ ಭರಿಸಬೇಕು ಎಂಬುದನ್ನು ಬಿಜೆಪಿ ಆಡಳಿತದ ರಾಜ್ಯಗಳೇ ಒಪ್ಪುತ್ತಿಲ್ಲ. ಚಂದ್ರಬಾಬು ನಾಯ್ಡು ಅವರೂ ಬೇಸರ ವ್ಯಕ್ತಪಡಿಸಿದ್ದಾರೆ’ ಎಂದರು.

ದೇಶದಲ್ಲಿ ಮಹಾತ್ಮ ಗಾಂಧಿ ಅವರ ಹೆಸರನ್ನು ಅಳಿಸಲು ಸಾಧ್ಯವೇ ಇಲ್ಲ. ಯಾವ ರೀತಿಯಲ್ಲಿ ಎಸ್‌ಐಆರ್ ಮೂಲಕ ಮತದಾರರ ಹಕ್ಕು ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆಯೊ ಅದೇ ರೀತಿಯಲ್ಲಿ ಬಡವರ ಉದ್ಯೋಗದ ಹಕ್ಕು ಕಿತ್ತುಕೊಳ್ಳಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಕಿಡಿಕಾರಿದರು.


ಚಿಕ್ಕಬಳ್ಳಾಪುರದಲ್ಲಿ ನಡೆದ ‘ಮನರೇಗಾ ಬಚಾವೋ ಸಂಗ್ರಾಮ’ದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರು

ಎಲ್ಲ ಗ್ರಾ.ಪಂ ಹೆಸರಿನ ಮುಂದೆ ‘ಮಹಾತ್ಮ ಗಾಂಧಿ’ ಹೆಸರು

ಮನರೇಗಾ ಹೆಸರು ಬದಲಾಯಿಸಿದ ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧ ರಾಜ್ಯ ಕಾಂಗ್ರೆಸ್ ಹೊಸ ತಂತ್ರ ರೂಪಿಸಿದೆ.‘ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳ ಹೆಸರಿನ ಮುಂದೆ ‘ಮಹಾತ್ಮ ಗಾಂಧಿ’ ಅವರ ಹೆಸರು ಸೇರಿಸಲು ತೀರ್ಮಾನಿಸಿದ್ದೇವೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

> **ಶ್ರಮಿಕರು, ಕೂಲಿ ಕಾರ್ಮಿಕರನ್ನು ಕೇಂದ್ರ ಸರ್ಕಾರ ಶ್ರೀಮಂತರಿಗೆ ಅಡವಿಟ್ಟಿದೆ. ಈಗ ಎಚ್ಚೆತ್ತುಕೊಳ್ಳದಿದ್ದರೆ ಮಾರುತ್ತಾರೆ. ಹಳ್ಳಿಗಳು, ಕೂಲಿ ಕಾರ್ಮಿಕರ ಉಳಿವಿಗೆ ಈ ಸಂಗ್ರಾಮ ಅನಿವಾರ್ಯ**
> **ರಣದೀಪ್‌ಸಿಂಗ್ ಸುರ್ಜೇವಾಲಾ**
> ರಾಜ್ಯ ಕಾಂಗ್ರೆಸ್ ಉಸ್ತುವಾರಿ

> **ನರೇಗಾದಿಂದ ಕೆಲಸ ಮಾಡಿ ಕೊಡುವರು ಎಂದು ಪಂಚಾಯಿತಿ ಸದಸ್ಯರಿಗೆ ಕಿಮ್ಮತ್ತು ಇತ್ತು. ಈಗ ಕೇಂದ್ರ ಸರ್ಕಾರ ಪಂಚಾಯಿತಿ ಸದಸ್ಯರಿಗೆ ಕಿಮ್ಮತ್ತು ದೊರೆಯದಂತೆ ಮಾಡಿದೆ**
> **ಕೃಷ್ಣಬೈರೇಗೌಡ,** ಸಚಿವ

ಸುದ್ದಿ 2 ನಿಮಿಷ

ಸಂಸದರ ಫ್ರೆಂಡ್‌ಶಿಪ್ ಗ್ರೂಪ್ ರಚನೆ

ನವದೆಹಲಿ: 60ಕ್ಕೂ ಹೆಚ್ಚು ದೇಶಗಳ 700 ಸಂಸದರನ್ನೊಳಗೊಂಡ ‘ಸಂಸದರ ಫ್ರೆಂಡ್‌ಶಿಫ್ ಗ್ರೂಪ್’ಗಳನ್ನು ಲೋಕಸಭಾ ಸ್ಪೀಕರ್ ಓಂಬಿರ್ಲಾ ಅವರು ಸೋಮವಾರ ರಚಿಸಿದ್ದಾರೆ. ವಿರೋಧ ಪಕ್ಷಗಳ ಸದಸ್ಯರು ಸಹ ಈ ಗ್ರೂಪ್‌ನಲ್ಲಿದ್ದಾರೆ.

ಸ್ವಜನಪಕ್ಷಪಾತ ಎಸಗುತ್ತಿದ್ದಾರೆ ಎಂದು ಆರೋಪಿಸಿ ಸ್ಪೀಕರ್ ಸ್ಥಾನದಿಂದ ಓಂ ಬಿರ್ಲಾ ಅವರನ್ನು ವಜಾಗೊಳಿಸುವ ನಿರ್ಣಯವನ್ನು ವಿರೋಧ ಪಕ್ಷಗಳು ಕೈಗೊಂಡಿರುವ ಹೊತ್ತಿನಲ್ಲೇ ಈ ನಿರ್ಧಾರ ಪ್ರಕಟಗೊಂಡಿದೆ.

64 ಗುಂಪುಗಳನ್ನು ರಚಿಸಲಾಗಿದ್ದು, ಪ್ರತಿಯೊಂದು ಗುಂಪಿನಲ್ಲಿಯೂ ಕನಿಷ್ಠ ಒಬ್ಬ ಸಂಸದೆ ಸೇರಿದಂತೆ ತಲಾ 11 ಸಂಸದರು ಇರಲಿದ್ದಾರೆ. ಬಜೆಟ್ ಅಧಿವೇಶನದಲ್ಲಿ ಅಮಾನತುಗೊಂಡ ಸಂಸದರು ಸಹ ಈ ಗ್ರೂಪ್‌ಗಳಲ್ಲಿ ಸ್ಥಾನ ಪಡೆದಿದ್ದಾರೆ.

ವಿವಿಧ ದೇಶಗಳ ಶಾಸಕಾಂಗಗಳೊಂದಿಗೆ ಸಂವಾದ ನಡೆಸಲು ಹಾಗೂ ರಾಜತಾಂತ್ರಿಕತೆಗೆ ನಿರಂತರ ಸಂಸದೀಯ ಸಂವಹನದೊಂದಿಗೆ ಪೂರಕ ವಾತಾವರಣ ಸೃಷ್ಟಿಸಲು ಈ ಗುಂಪುಗಳನ್ನು ರಚಿಸಲಾಗಿದೆ ಎನ್ನಲಾಗಿದೆ.

ಕೆ.ಸಿ. ವೇಣುಗೋಪಾಲ್, ಗೌರವ್ ಗೊಗೊಯ್, ಶಶಿ ತರೂರ್, ಪಿ. ಚಿದಂಬರಂ (ಕಾಂಗ್ರೆಸ್), ಅಭಿಷೇಕ್ ಬ್ಯಾನರ್ಜಿ, ಡೆರೆಕ್ ಒಬ್ರಿಯಾನ್ (ತೃಣಮೂಲ ಕಾಂಗ್ರೆಸ್), ಅಖಿಲೇಶ್ ಯಾದವ್ (ಸಮಾಜವಾದಿ ಪಕ್ಷ), ಅಸಾದುದ್ದೀನ್ ಓವೈಸಿ (ಎಐಎಂಐಎಂ), ಅರವಿಂದ್ ಸಾವಂತ್ (ಶಿವಸೇನಾ–ಯುಬಿಟಿ), ಸುಪ್ರಿಯಾ ಸುಳೆ (ಎನ್‌ಸಿಪಿ–ಎಸ್‌ಪಿ), ಬಿಜೆಪಿ ನಾಯಕರಾದ ರವಿಶಂಕರ್ ಪ್ರಸಾದ್, ಬೈಜಯಂತ್ ಪಾಂಡಾ, ನಿಶಿಕಾಂತ್ ದುಬೆ, ಅನುರಾಗ್ ಠಾಕೂರ್ ಅವರು ಈ ಗ್ರೂಪ್‌ಗಳ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ.



‘ದೇಶದ ಮಾನ ಹರಾಜು ಹಾಕಿದ್ದು ಮೋದಿ ಸರ್ಕಾರ’

ನವದೆಹಲಿ: ದೇಶದ ಮಾನ ಮರ್ಯಾದೆಯನ್ನು ಮೂರು ಕಾಸಿಗೆ ಹರಾಜು ಹಾಕಿದ್ದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೃತಕ ಬುದ್ಧಿಮತ್ತೆ ಇಂಪ್ಯಾಕ್ಟ್ ಶೃಂಗ ಸಭೆಯಲ್ಲಿ ಬಿಜೆಪಿ ಸರ್ಕಾರ ಅನೇಕ ಎಡವಟ್ಟುಗಳನ್ನು ಮಾಡಿತ್ತು. ಇದರ ವಿರುದ್ಧ ಯುವ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ’ ಎಂದರು.

‘ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಕೇಂದ್ರ ಸಚಿವ ಹರ್ದಿಪ್ ಸಿಂಗ್ ಪುರಿ ಅವರ ಹೆಸರು 62 ಸಲ ಬಂದಿದೆ. ಕೇಂದ್ರ ಸಚಿವರು ಎಪ್‌ಸ್ಟೈನ್ ಅವರನ್ನು ನಾಲ್ಕು ಸಲ ಭೇಟಿ ಮಾಡಿದ್ದಾರೆ. ಅತ್ಯಾಚಾರಿ ಜತೆಗೆ ನಂಟು ಹೊಂದಿದ್ದ ಪುರಿ ಅವರನ್ನು ಮೋದಿ ಅವರು ಸಂಪುಟದಲ್ಲಿ ಇಟ್ಟುಕೊಂಡಿದ್ದಾರೆ. ಇದರಿಂದಾಗಿ, ದೇಶದ ಮಾನ ಹರಾಜು ಆಗಿದೆ’ ಎಂದರು.

‘ಭ್ರಷ್ಟಾಚಾರಕ್ಕೆ ಮತ್ತೊಂದೇ ಹೆಸರೇ ಬಿಜೆಪಿ. ಪಿಎಂ ಕೇರ್ಸ್ ಫಂಡ್, ಚುನಾವಣಾ ಬಾಂಡ್, ನೋಟ್ ರದ್ದತಿ ಸೇರಿದಂತೆ ಎಲ್ಲ ಕಡೆ ಬಿಜೆಪಿ ಭ್ರಷ್ಟಾಚಾರ ನಡೆಸಿದೆ. ಈಗ ಶಾಸಕ ಚಂದ್ರು ಲಮಾಣಿ ಎಂಬ ಸಣ್ಣನೊಣ ಸಿಲುಕಿಕೊಂಡಿದೆ’ ಎಂದು ಅವರು ವ್ಯಂಗ್ಯವಾಡಿದರು.

ಚಿಟಿಕೆ ಸುದ್ದಿ

151 ಕೆ.ಜಿ ತೂಕದ ಗಂಟೆ: ಶ್ರೀಶೈಲಕ್ಕೆ ಅರ್ಪಣೆ



ಬಾಗಲಕೋಟೆ: ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಅರ್ಪಿಸಲು ಪಂಚ ಲೋಹಗಳ 151 ಕೆ.ಜಿ ತೂಕದ ಗಂಟೆಯನ್ನು ಸಿದ್ಧಪಡಿಸಲಾಗಿದ್ದು, ಮಾರ್ಚ್ 14ರಂದು ಅದು ಸಮರ್ಪಣೆ ಆಗಲಿದೆ.

‘ಅಖಿಲ ಕರ್ನಾಟಕ ಮರಗಾಲು ಮಲ್ಲಯ್ಯಗಳ ಸಂಘ ಮತ್ತು ಬೆಂಗಳೂರಿನ ಅಮ್ಮ ಫೌಂಡೇಶನ್ ವತಿಯಿಂದ ತಯಾರಿಸಲಾಗಿದೆ’ ಎಂದು ಸಂಘದ ಮುಖಂಡ ಮುಂಡಅನಗವಾಡಿಯ ಲಕ್ಷಣ ಇಂಗುನವರ ತಿಳಿಸಿದ್ದಾರೆ.

‘ಬಾಗಲಕೋಟೆ, ವಿಜಯಪುರ ಸೇರಿ ಉತ್ತರ ಕರ್ನಾಟಕದ ಹತ್ತಾರು ಜಿಲ್ಲೆಗಳ 150ಕ್ಕೂ ಹೆಚ್ಚು ಮರಗಾಲು ಮಲ್ಲಯ್ಯರ ಸ್ವಯಂ ಪ್ರೇರಣೆಯಿಂದ ಗಂಟೆ ನಿರ್ಮಿಸಲಾಗಿದೆ. ಅಮ್ಮ ಫೌಂಡೇಶನ್‌ನ ಸಂಸ್ಥಾಪಕ ರೋಹಿತ್ ಕೆಂಪೇಗೌಡ್ ತಂಡಕ್ಕೆ ಬೆಂಬಲ ನೀಡಿದರು’ ಎಂದು ಸಂಘದ ಮುಖಂಡ ಕೃಷ್ಣ ಗೌಡರ್ ತಿಳಿಸಿದ್ದಾರೆ.

ಮಾ.1ರಂದು ಚಿಕ್ಕೋಡಿ ತಾಲ್ಲೂಕಿನ ಯಡೂರಿನಲ್ಲಿ ಗಂಟೆ ಉತ್ಸವ ಯಾತ್ರೆಗೆ ಶ್ರೀಶೈಲ ಪೀಠದ ಚನ್ನಸಿದ್ದರಾಮ ಪಂಡಿತಾರಾಧ್ಯ ಸ್ವಾಮೀಜಿ ಚಾಲನೆ ನೀಡುವರು.

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಅತಿಥಿ ಶಿಕ್ಷಕನ ಬಂಧನ

ಕಂಪ್ಲಿ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೊಂದರ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಅತಿಥಿ ಶಿಕ್ಷಕನನ್ನು ಪೋಕ್ಸೊ ಕಾಯ್ದೆಯಡಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಫೆ.16ರಂದು ಕೃತ್ಯ ಎಸಗಿದ್ದು, ಆರೋಪಿ ವಿದ್ಯಾರ್ಥಿನಿಗೆ ಪ್ರಾಣ ಬೆದರಿಕೆ ಒಡ್ಡಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ. ಶಿಕ್ಷಕನ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪೋಷಕರು ಮತ್ತು ಗ್ರಾಮಸ್ಥರು ಪ್ರತಿಭಟಿಸಿದರು.

ಶಾಸಕರಿಂದ ದಲಿತ ದಂಪತಿ ಪಾದಪೂಜೆ



ಕುಂದಾಪುರ (ಉಡುಪಿ): ಹರ್ಕೂರು ಗ್ರಾಮದ ನಾರ್ಕಳಿ ಮದುಕೊಡ್ಲು ಪರಿಸರದ ಕೊರಗ ಸಮುದಾಯದ ಮನೆಯಲ್ಲಿ ಬಾಗಿನ ನೀಡಿ, ವಾಸ್ತವ್ಯ ಮಾಡಿದ್ದ ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ ಅವರು, ಈಗ ದಲಿತ ದಂಪತಿಯ ಪಾದಪೂಜೆ ನೆರವೇರಿಸಿದ್ದಾರೆ.

ಹಟ್ಟಿಯಂಗಡಿ ಗ್ರಾಮದ ಕನ್ಯಾನ ಗುಡ್ಡೆಯಂಗಡಿ ಎಸ್‌ಸಿ ಕಾಲೊನಿ ನಿವಾಸಿ ಶಶಿಕುಮಾರ್ ಅವರ ಮನೆಗೆ ಭಾನುವಾರ ರಾತ್ರಿ ಪತ್ನಿ ಅನುರಾಧಾ ಅವರೊಂದಿಗೆ ಭೇಟಿ ನೀಡಿದ ಶಾಸಕರು, ಪಾದಪೂಜೆ ಮಾಡಿ ಅವರೊಂದಿಗೆ ಸಹ ಭೋಜನ ಸವಿದರು.

ಈ ವೇಳೆ ಮಾತನಾಡಿ, ‘ಸಮಾಜದ ಸಾಮರಸ್ಯಕ್ಕೆ ಅಡ್ಡ ಗೋಡೆಯಾಗಿರುವ ಅಸ್ಪೃಶ್ಯತೆಯ ಪಿಡುಗು ದೂರವಾಗಬೇಕು. ಎಲ್ಲರೂ ಒಂದು ಎನ್ನುವ ಸಾಮರಸ್ಯದ ಭಾವನೆ ಸಾಮೂಹಿಕವಾಗಿ ಜಾಗೃತವಾಗಬೇಕು ಎನ್ನುವ ಸದುದ್ದೇಶದಿಂದ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ’ ಎಂದರು.

ದೌರ್ಜನ್ಯ ಖಂಡಿಸಿ ಬಂದ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆನೆ ಹಾವಳಿ ತಡೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿ ಮತ್ತು ಭಾನುವಾರ ನಡೆದ ಪ್ರತಿಭಟನೆ ವೇಳೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಮಲೆನಾಡಿನ ಹಲವೆಡೆ ಸೋಮವಾರ ಅಂಗಡಿ, ವಹಿವಾಟು ಮುಚ್ಚಿ ಸ್ಥಳೀಯರು ಬಂದ್ ನಡೆಸಿದರು.

ಬಾಳೆಹೊನ್ನೂರು, ಜಯಪುರ, ಕಡಬಗೆರೆ, ಕೊಪ್ಪ, ನರಸಿಂಹರಾಜಪುರದಲ್ಲಿ ಬೆಳಿಗ್ಗೆಯಿಂದ ಸಂಜೆ ತನಕ ವಹಿವಾಟು ಬಂದ್ ಆಗಿತ್ತು. ಶೃಂಗೇರಿಯಲ್ಲೂ ಬೆಳಿಗ್ಗೆ ಬಂದ್ ನಡೆಯಿತು.

ಬಾಳೆಹೊನ್ನೂರಿನಲ್ಲಿ ರೈತರು ಮೌನ ಮೆರವಣಿಗೆ ನಡೆಸಿದರು. ನಂತರ ಸಭೆ ನಡೆಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ವೃತ್ತದಲ್ಲಿ ನಿಂತಿದ್ದ ಪೊಲೀಸ್ ಇಲಾಖೆಯ ಬಸ್ಸಿಗೆ ಹೂವು ಚೆಲ್ಲಿ ವಿಶಿಷ್ಟವಾಗಿ ಪ್ರತಿಭಟನೆ ವ್ಯಕ್ತಪಡಿಸಿದರು.

ಕಾಡಾನೆ ದಾಳಿಯಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ ₹50 ಲಕ್ಷ ಪರಿಹಾರ ನೀಡಬೇಕು. ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಬೇಕು. ಭಾನುವಾರ ಅಮಾಯಕರ ಮೇಲೆ ಲಾಠಿ ಪ್ರಹಾರ ಮಾಡಿದವರ ಮೇಲೆ ಕ್ರಮ ಜರುಗಿಸಬೇಕು. ದಾಖಲಿಸಿರುವ ಸುಳ್ಳು ಮೊಕದ್ದಮೆ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ‘ಪ್ರತಿಭಟನಕಾರರ ಮೇಲೆ ಹಾಕಿರುವ ಎಫ್‌ಐಆರ್ ಸಂಬಂಧ ಕೋರ್ಟ್‌ಗೆ ಬಿ ವರದಿ ಸಲ್ಲಿಸಬೇಕು. ಸಿಕ್ಕ ಸಿಕ್ಕವರನ್ನು ಕರೆತಂದು ಹಿಂಸೆ ನೀಡಿದರೆ ಅನಿರ್ದಿಷ್ಟಾವಧಿ ಧರಣಿ ನಡೆಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ಬಿಜೆಪಿ ಮುಖಂಡ ಡಿ.ಎನ್. ಜೀವರಾಜ್, ಜೆಡಿಎಸ್ ರಾಜ್ಯ ಘಟಕದ ಉಪಾಧ್ಯಕ್ಷ ಸುಧಾಕರ ಶೆಟ್ಟಿ, ಕ್ಷೇತ್ರ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗದ್ದೆಮನೆ ವಿಶ್ವನಾಥ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.


ಬಾಳೆಹೊನ್ನೂರಿನಲ್ಲಿ ಪೊಲೀಸ್ ಬಸ್ಸಿಗೆ ಹೂ ಎರಚುವ ಮೂಲಕ ರೈತರು ವಿಭಿನ್ನವಾಗಿ ಪ್ರತಿಭಟನೆ ನಡೆಸಿದರು

29 ಜನರ ವಿರುದ್ಧ ಎಫ್‌ಐಆರ್

ಭಾನುವಾರ ಕಾಡಾನೆ ದಾಳಿಯಿಂದ ಮೃತಪಟ್ಟ ಮಹಿಳೆ ಶವದೊಂದಿಗೆ ನಡೆದ ಪ್ರತಿಭಟನೆಗೆ ಸಂಬಂಧಿಸಿ 29 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ರಸ್ತೆತಡೆ, ಕಲ್ಲು ತೂರಾಟ, ಪೊಲೀಸ್ ವಾಹನ ಉರುಳಿಸಲು ಯತ್ನ, ಕರ್ತವ್ಯಕ್ಕೆ ಅಡ್ಡಿ ಆರೋಪ ಹೊರಿಸಲಾಗಿದೆ.

ಸಬ್ ಇನ್‌ಸ್ಪೆಕ್ಟರ್ ಅಂಬರೀಶ್ ದೂರು ನೀಡಿದ್ದಾರೆ. ಹೊನ್ನೆಕೊಪ್ಪದ ಚಂದ್ರಶೇಖರ ರೈ, ಹೊಸಳ್ಳಿ ಅಭಿಷೇಕ್, ಕಡಬಗೆರೆ ಮಂಜಶೆಟ್ಟಿ, ಪ್ರವೀಣ್ ಖಾಂಡ್ಯ, ಕುಂಬರಗೋಡು ಆದರ್ಶ, ಹಳೆಹಳ್ಳಿ ಕಾರ್ತಿಕ್, ಕೂಸ್ಕಲ್ ಪುರುಷೋತ್ತಮ, ಮೂಡುಬಾಗಿಲು ಸಚಿನ್, ವರ್ಕಟ್ಟೆ ಧನಂಜಯ ಅವರ ಹೆಸರನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಕಲ್ಲುತೂರಾಟದ ಸಂದರ್ಭದಲ್ಲಿ ಡಿವೈಎಸ್‌ಪಿ, ಪಿಎಸ್‌ಐ ಮಧು, ಪೊಲೀಸ್ ಸಿಬ್ಬಂದಿ ರೇಖಾ, ಜಯರಾಮೇಗೌಡ, ಮಂಜುನಾಥ, ಭೀಮಸೇನ ಕಣಬೂರು, ಹನುಮಂತ ಗುಡದಿನ್ನಿ, ರಘುನಾಯ್ಕ, ಶಿವಾನಂದ ಇವರಿಗೆ ರಕ್ತ ಗಾಯಗಳಾಗಿವೆ’ ಎಂದು ನಮೂದಿಸಲಾಗಿದೆ. ಹ್ಯಾರಂಬಿಪುರದ ನಾಗೇಶಗೌಡ ತೋಟದಲ್ಲಿ ಕಾಡಾನೆ ತುಳಿತದಿಂದ ವಿಜಯನಗರ ಜಿಲ್ಲೆಯ ಕೂಡ್ಲಗಿ ತಾಲ್ಲೂಕಿನ ಗೆದ್ದಲಗಟ್ಟೆ ಕಾಮಯ್ಯನಟ್ಟಿ ಬೋರಮ್ಮ(45) ಮೃತಪಟ್ಟಿದ್ದರು.

ತೋಟಗಳ ಮಾಲೀಕರ ವಿರುದ್ಧವೂ ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆ ಮುನ್ನೆಚ್ಚರಿಕೆ ನೀಡಿದ ಬಳಿಕವೂ ಕಾಫಿ ತೋಟಗಳ ಮಾಲೀಕರು ಕಾರ್ಮಿಕರನ್ನು ತೋಟಕ್ಕೆ ಕಳುಹಿಸಿದರೆ ಅಂತಹವರಿಗೆ ಎಚ್ಚರಿಕೆ ನೀಡಿ, ನಿರ್ಲಕ್ಷ್ಯ ತೋರಿದರೆ ದೂರು ದಾಖಲಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಚಿಕ್ಕಮಗಳೂರು ತಾಲ್ಲೂಕು ಹುಣಸೆಹಳ್ಳಿ ಬಳಿಯ ತೋಟದಲ್ಲಿ ಆನೆ ದಾಳಿಯಿಂದ 7 ದಿನಗಳ ಅಂತರದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಚಿವರು ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರ ವಿಡಿಯೊ ಸಂವಾದದ ಮೂಲಕ ತುರ್ತು ಸಭೆ ನಡೆಸಿದರು.

‘ಕಳೆದ ವಾರ ಆನೆ ದಾಳಿಯಿಂದ ವ್ಯಕ್ತಿ ಮೃತಪಟ್ಟ ಬಳಿಕ, ಆನೆ ಸೆರೆಗೆ ಕ್ರಮ ಕೈಗೊಳ್ಳಲಾಗಿತ್ತು. ಸ್ಥಳೀಯರಿಗೆ ತೋಟಕ್ಕೆ ಹೋಗದಂತೆ ಮಾಹಿತಿ ನೀಡಲಾಗಿತ್ತು. ಆದಾಗ್ಯೂ ತೋಟಕ್ಕೆ ಹೋದ ಕಾರಣ ಈ ಸಾವು ಸಂಭವಿಸಿದೆ’ ಎಂದು ತಿಳಿಸಿದರು.

ಇಲಾಖೆ ಮಾಹಿತಿ ಪ್ರಕಾರ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯದ ಹೊರಗೆ 35 ಆನೆಗಳು 3 ಗುಂಪಿನಲ್ಲಿ ಸಂಚರಿಸುತ್ತಿದ್ದು, ಬೇಸಿಗೆಯಲ್ಲಿ ಅವುಗಳು ಕಾಡಿನಿಂದ ಹೊರಬರುವುದು ಸಾಮಾನ್ಯ. ಆದಾಗ್ಯೂ ಸಿಬ್ಬಂದಿ ಮತ್ತು ಅಧಿಕಾರಿಗಳು ವನ್ಯಜೀವಿ–ಮಾನವ ಸಂಘರ್ಷ ಆಗದಂತೆ ನಿಗಾ ಇಡಬೇಕು. ಪ್ರತಿ ವರ್ಷ ವನ್ಯಜೀವಿ–ಮಾನವ ದಾಳಿಯಲ್ಲಿ ಆಗುತ್ತಿರುವ ಸಾವಿನ ಸಂಖ್ಯೆ ಇಳಿಕೆಯಾಗಬೇಕೇ ಹೊರತು, ಹೆಚ್ಚಳ ಆಗಬಾರದು ಎಂದರು.

ಬೇಸಿಗೆಯ ಕಾರಣ ಮುಂದಿನ 2–3 ತಿಂಗಳು ಅತ್ಯಂತ ಕ್ಲಿಷ್ಟಕರವಾಗಿದ್ದು, ಹಿರಿಯ ಅಧಿಕಾರಿಗಳು ವನ್ಯಜೀವಿ–ಮಾನವ ಸಂಘರ್ಷ ಇರುವ ಪ್ರದೇಶಕ್ಕೆ ತೆರಳಿ, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾರ್ಗದರ್ಶನ ಮಾಡಬೇಕು ಎಂದು ಖಂಡ್ರೆ ಸೂಚಿಸಿದರು.

ಅರಣ್ಯದಂಚಿನ ಜಮೀನುಗಳಲ್ಲಿ ವನ್ಯಜೀವಿಗಳ ಸಂಚಾರದ ಬಗ್ಗೆ ಕಮಾಂಡ್ ಕೇಂದ್ರಕ್ಕೆ ಮಾಹಿತಿ ಬಂದ ಕೂಡಲೇ ಸ್ಥಳೀಯರಿಗೆ ಮಾಹಿತಿ ರವಾನಿಸಲು ಕ್ರಮ ವಹಿಸಬೇಕು. ವನ್ಯಜೀವಿ–ಮಾನವ ಸಂಘರ್ಷ ಇರುವ ಪ್ರದೇಶಗಳ ಸ್ಥಳೀಯ ಮುಖಂಡರ, ಗ್ರಾಮಗಳ ಜಮೀನು ಮಾಲೀಕರ ವಾಟ್ಸ್ ಆ್ಯಪ್ ಗ್ರೂಪ್ ಮಾಡಿ ಮಾಹಿತಿ ಪ್ರಸಾರ ಮಾಡಬೇಕು ಎಂದೂ ಸಲಹೆ ನೀಡಿದರು.

ಅಧಿಕಾರಿಗಳು ಮತ್ತು ಸಿಬ್ಬಂದಿ ಇಂತಹ ಘಟನೆ ಮರುಕಳಿಸದಂತೆ 24x7 ನಿಗಾ ಇಡಬೇಕು. ಕಡ್ಡಾಯವಾಗಿ ಸೆಕ್ಷನ್ 144 ಜಾರಿ ಮಾಡಿ ವನ್ಯಜೀವಿ ಸೆರೆ ಕಾರ್ಯಾಚರಣೆ ನಡೆಸಬೇಕು. ಅತ್ಯಾಧುನಿಕ ಸಲಕರಣೆಗಳಾದ ಥರ್ಮಲ್ ಡ್ರೋನ್ ಬಳಕೆ ಮಾಡಬೇಕು ಎಂದು ಖಂಡ್ರೆ ಸೂಚಿಸಿದರು.

‘ಕೈ’ ಹೈಕಮಾಂಡ್‌ಗೆ 31 ಶಾಸಕರ ಪತ್ರ

‘ಸಂಪುಟದಲ್ಲಿ ಯುವಕರಿಗೆ ಅವಕಾಶ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಚರ್ಚೆಯ ಬೆನ್ನಲ್ಲೇ, ಸಚಿವ ಸಂಪುಟ ಪುನರ್‌ರಚನೆ ಮಾಡಬೇಕೆಂದು ಆಗ್ರಹಿಸಿ ಮೊದಲ ಬಾರಿಗೆ ಆಯ್ಕೆಯಾಗಿರುವ 31 ಶಾಸಕರು ಹೈಕಮಾಂಡ್ ನಾಯಕರಿಗೆ ಬರೆದಿದ್ದಾರೆ.

ಈ ಪತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆಯಲಾಗಿದೆ.

31 ಶಾಸಕರ ಸಹಿ ಪತ್ರದಲ್ಲಿದೆ. ಆದರೆ, ಪತ್ರದಲ್ಲಿ ದಿನಾಂಕ ಉಲ್ಲೇಖಿಸಿಲ್ಲ. ಹೈಕಮಾಂಡ್ ನಾಯಕರಿಗೆ ಈ ಪತ್ರ ತಲುಪಿದೆಯೇ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

ಸಹಿ ಹಾಕಿದವರು: ಶಿವಗಂಗಾ ಬಸವರಾಜ್, ಪ್ರದೀಪ್ ಈಶ್ವರ್, ವಿಶ್ವಾಸ್ ವೈದ್ಯ, ಇಕ್ಬಾಲ್ ಹುಸೇನ್, ಅಶೋಕ್ ಕುಮಾರ್ ರೈ, ಎನ್. ಟಿ. ಶ್ರೀನಿವಾಸ್, ದರ್ಶನ್ ಧ್ರುವನಾರಾಯಣ್, ರವಿ ಕುಮಾರ್ ಗಣಿಗ, ಬಿ.ಬಿ. ಚಿಮ್ಮನಕಟ್ಟಿ, ಎ.ಎಸ್. ಪೊನ್ನಣ್ಣ, ಬಾಬಾ ಸಾಹೇಬ್ ಪಾಟೀಲ್, ನಾರಾ ಭರತ್ ರೆಡ್ಡಿ, ಎ.ಸಿ. ಶ್ರೀನಿವಾಸ್, ಮಹೇಂದ್ರ ತಮ್ಮಣ್ಣನವರ್, ಮಂಥರ್ ಗೌಡ, ದೇವೇಂದ್ರಪ್ಪ, ಎನ್. ಶ್ರೀನಿವಾಸ್, ಆಸಿಫ್ ಸೇಠ್, ರಾಜಾ ವೇಣುಗೋಪಾಲ್ ನಾಯಕ್, ಉದಯ್ ಕುಮಾರ್ ಕಡಲೂರು, ಎಚ್.ವಿ. ವೆಂಕಟೇಶ್, ಪ್ರಕಾಶ್ ಕೋಳಿವಾಡ, ಕೆ.ಎಸ್. ಆನಂದ್, ಕೆ.ಎಸ್. ಬಸವಂತಪ್ಪ, ಡಿ. ರವಿ ಶಂಕರ್, ಎಚ್.ಎಂ. ಗಣೇಶ್ ಪ್ರಸಾದ್, ಅಶೋಕ್ ಮನಗೂಳಿ, ನಯನಾ ಮೋಟಮ್ಮ, ಚನ್ನಾರೆಡ್ಡಿ ಪಾಟೀಲ್ ಸಹಿ ಹಾಕಿದವರು.

ಪತ್ರದಲ್ಲಿ ಏನಿದೆ?

‘ಕಾಂಗ್ರೆಸ್‌ನಲ್ಲಿ 38 ಶಾಸಕರು ಹೊಸದಾಗಿ ಗೆದ್ದಿದ್ದೇವೆ. ಬೇರೆ ರಾಜ್ಯಗಳಲ್ಲಿ ಮೊದಲ ಬಾರಿಗೆ ಗೆದ್ದವರು ಸಿ.ಎಂ ಆಗಿದ್ದಾರೆ. ಮೊದಲ ಬಾರಿ ಗೆದ್ದ ಶಾಸಕರ ಪೈಕಿ ಕನಿಷ್ಠ 8 ಶಾಸಕರಿಗೆ ಸಚಿವ ಸ್ಥಾನ ನೀಡಬೇಕು’ ಎಂದು ಪತ್ರದಲ್ಲಿ ಮನವಿ ಮಾಡಲಾಗಿದೆ.

‘ಮೊದಲ ಬಾರಿಗೆ ಶಾಸಕರಾದವರಿಗೆ ಸಂಪುಟದಲ್ಲಿ ಅವಕಾಶ ನೀಡುವುದರಿಂದ ಯುವ ಮುಖಗಳಿಗೆ ಅವಕಾಶ ಸಿಕ್ಕಂತಾಗುತ್ತದೆ. ನಾವು ಕಾಂಗ್ರೆಸ್ ಪಕ್ಷದ ತತ್ವ, ಸಿದ್ಧಾಂತಕ್ಕೆ ಬದ್ಧರಾಗಿದ್ದೇವೆ. 2028ರಲ್ಲಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಆಡಳಿತಕ್ಕೆ ಬರಬೇಕಾಗಿದೆ. ಹೀಗಾಗಿ, ಸಂಪುಟದಲ್ಲಿ ಯುವ ಮುಖಗಳಿಗೆ ಅವಕಾಶ ನೀಡಬೇಕು’ ಎಂದು ಪ್ರತಿಪಾದಿಸಲಾಗಿದೆ.

ಘಟಿಕೋತ್ಸವಕ್ಕೆ ಹೊಸ ಉಡುಪು: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ವಾರ್ಷಿಕ ಘಟಿಕೋತ್ಸವಗಳಲ್ಲಿ ಇನ್ನು ಮುಂದೆ ಪಾಶ್ಚಾತ್ಯ ಶೈಲಿಯ ಗೌನ್ ಮತ್ತು ಟೋಪಿ ಧರಿಸುವ ಪದ್ಧತಿ ರದ್ದಾಗಲಿದೆ.

ಘಟಿಕೋತ್ಸವಗಳಲ್ಲಿ ಭಾರತೀಯ ಪರಂಪರೆ ಬಿಂಬಿಸುವ ಉಡುಪು ಪರಿಚಯಿಸಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಖಾದಿ ಒಳಗೊಂಡಂತೆ ಏಕರೂಪದ ಉಡುಗೆಗಳನ್ನು ಆಯ್ಕೆ ಮಾಡಲು ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲು ಮುಂದಾಗಿದೆ.

ಸಮಿತಿ ವರದಿಯ ಆಧಾರದಲ್ಲಿ 2026–27ನೇ ಸಾಲಿನ ಘಟಿಕೋತ್ಸವಗಳಿಂದಲೇ ಹೊಸ ಉಡುಪುಗಳ ನೀತಿ ಜಾರಿಯಾಗಲಿದೆ. ಈ ನಿಯಮವು ಪದವಿ ಪ್ರಮಾಣಪತ್ರ ಸ್ವೀಕರಿಸುವ ವಿದ್ಯಾರ್ಥಿಗಳು, ಸಮಾರಂಭದಲ್ಲಿ ಭಾಗವಹಿಸುವ ಅಧ್ಯಾಪಕರು ಹಾಗೂ ಅತಿಥಿಗಳಿಗೂ ಅನ್ವಯವಾಗಲಿದೆ.

ಘಟಿಕೋತ್ಸವಗಳಲ್ಲಿ ಪ್ರಸ್ತುತ ಬ್ರಿಟಿಷ್ ಶೈಲಿಯ ಕಪ್ಪು ಅಥವಾ ಗಾಢ ಬಣ್ಣದ ಗೌನ್ ಹಾಗೂ ಸರಳವಾದ ಫಾರ್ಮಲ್ ಉಡುಪು ಧರಿಸಲಾಗುತ್ತಿದೆ. ಕುಲಾಧಿಪತಿ, ಕುಲಪತಿ, ಪ್ರಾಧ್ಯಾಪಕರು ವಿಶೇಷ ಬಣ್ಣದ ಮತ್ತು ಅಲಂಕಾರಿತ ಗೌನ್, ಚಿನ್ನದ ಅಥವಾ ಬಣ್ಣದ ಅಂಚುಗಳಿರುವ ಉಡುಪು, ಟೋಪಿ ಧರಿಸುತ್ತಾರೆ. ಪಿಎಚ್‌.ಡಿ ಪದವೀಧರರು ವಿಶೇಷ ಬಣ್ಣದ, ಅಂಚಿನಲ್ಲಿ ಅಲಂಕಾರ ಇರುವ ಡಾಕ್ಟರಲ್ ಗೌನ್ ಬಳಸುತ್ತಿದ್ದಾರೆ.

‘ಬ್ರಿಟಿಷ್ ಕಾಲದ ಗೌನ್ ಪದ್ಧತಿಯನ್ನು ರದ್ದುಮಾಡಿ, ಭಾರತೀಯ ಪರಂಪರೆಯ ಉಡುಪಿಗೆ ಬದಲಾವಣೆ ಮಾಡಲು ನಿರ್ಧರಿಸಲಾಗಿದೆ. ಸಮಿತಿಯ ಶಿಫಾರಸಿನ ನಂತರ ಅಧಿಕೃತ ಘೋಷಣೆ ಮಾಡಲಾಗುತ್ತದೆ. ಬಹುತೇಕ ಖಾದಿ ಉಡುಪು ನಿಗದಿ ಮಾಡುವ ಸಾಧ್ಯತೆ ಇದೆ. ಪಾಶ್ಚಾತ್ಯ ಮಾದರಿ ಟೋಪಿ ಬದಲು ಮೈಸೂರು ಪೇಟ ಬಳಸಲು ಒಲವು ವ್ಯಕ್ತವಾಗಿದೆ. ಎಲ್ಲರಿಗೂ ಬಿಳಿ ಬಣ್ಣದ ಅಂಗಿ ಕಡ್ಡಾಯವಾಗಲಿದೆ’ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕಲ್ಯಾಣ, ಕಿತ್ತೂರು ಕರ್ನಾಟಕದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಜಯಪುರ, ಬಾಗಲಕೋಟೆ ಮತ್ತು ಗದಗ ಜಿಲ್ಲೆಯಲ್ಲಿ ಸೋಮವಾರ ಬಿರುಗಾಳಿ ಸಹಿತ ಮಳೆಯಾಯಿತು. ವರ್ಷದ ಮೊದಲ ಮಳೆಯು, ವಾತಾವರಣವನ್ನು ತಂಪಾಗಿಸಿತು.

ವಿಜಯಪುರ ನಗರ, ತಿಕೋಟಾ ಮತ್ತು ಚಡಚಣ ತಾಲ್ಲೂಕು ವ್ಯಾಪ್ತಿ ಹಾಗೂ ಹೊರ್ತಿ, ನಿವರಗಿ, ಇಂಚಗೇರಿಯಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಯಿತು.

ಜಿಲ್ಲೆಯಾದ್ಯಂತ ದ್ರಾಕ್ಷಿ ಬೆಳೆ ಕಟಾವಿಗೆ ಬಂದಿದ್ದು, ಒಣ ದ್ರಾಕ್ಷಿ ತಯಾರಿಕೆಗೆ ಸಜ್ಜಾಗಿರುವ ಹೊತ್ತಿನಲ್ಲಿ ಮಳೆ ಆಗಿರುವುದು ತೊಂದರೆಯಾಗಿದೆ. ಚಡಚಣ ತಾಲ್ಲೂಕಿನ ನಿವರಗಿಯಲ್ಲಿ ಗಾಳಿಗೆ ದ್ರಾಕ್ಷಿ ಸಾಲು ನೆಲಕ್ಕುರುಳಿದೆ.

ಬಾಗಲಕೋಟೆ ಜಿಲ್ಲೆಯ ಅಮೀನಗಡ, ನೀರಲಕೇರಿ ಸೇರಿ ವಿವಿಧೆಡೆ 10 ನಿಮಿಷಕ್ಕೂ ಹೆಚ್ಚು ಸಮಯ ತುಂತುರು ಮಳೆಯಾಯಿತು., ಅಮೀನಗಡ, ಕಮತಗಿ, ಮಹಾಲಿಂಗಪುರ, ರಬಕವಿ, ಹುನಗುಂದದಲ್ಲೂ ಮಳೆಯಾಯಿತು.

ಗದಗ ಜಿಲ್ಲೆಯಲ್ಲಿ ಮುಂಡರಗಿ ಮತ್ತು ರೋಣ ತಾಲ್ಲೂಕಿನ ಕೆಲವೆಡೆ ಮಳೆಯಾಯಿತು. ಬೆಳೆಗಳ ಒಕ್ಕಣೆ ಪ್ರಕ್ರಿಯೆ ಇನ್ನೂ ನಡೆದಿಲ್ಲ. ಕಡಲೆ, ಜೋಳ, ಕುಸುಬೆ, ಗೋಧಿ ಬೆಳೆಯನ್ನು ರಕ್ಷಿಸಿಕೊಳ್ಳಲು ಹರಸಾಹಸಪಟ್ಟರು.

ಕಲಬುರಗಿ, ಬೀದರ್‌ನಲ್ಲಿ ತುಂತುರು ಮಳೆ: (ಕಲಬುರಗಿ ವರದಿ): ಕಲ್ಯಾಣದ ಕರ್ನಾಟಕದ ಕಲಬುರಗಿ, ಬೀದರ್, ಕೊಪ್ಪಳ ಸೇರಿದಂತೆ ವಿವಿಧೆಡೆ ಸೋಮವಾರ ತುಂತುರು ಮಳೆಯಾಗಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಹುಲೆಗುಡ್ಡ ಗ್ರಾಮದಲ್ಲಿ ಸೋಮವಾರ ಸಿಡಿಲು ಬಡಿದು ಎತ್ತೊಂದು ಮೃತಪಟ್ಟಿದೆ. ರೈತ ಅಜ್ಜಪ್ಪ ಬಂಡ್ಲಿ ಅವರಿಗೆ ಸೇರಿದ ತೋಟದಲ್ಲಿ ಎರಡು ಎತ್ತುಗಳನ್ನು ಕಟ್ಟಲಾಗಿತ್ತು. ಮಧ್ಯಾಹ್ನ ಗುಡುಗು ಮಿಂಚು ಸಹಿತ ಮಳೆಯ ವೇಳೆ ಸಿಡಿಲು ಬಡಿದು ಎತ್ತು ಮೃತಪಟ್ಟಿದೆ.

ಕಲಬುರಗಿ ನಗರದ, ಚಿಂಚೋಳಿ ಸೇರಿದಂತೆ ಕೆಲವೆಡೆ ಸಂಜೆ ತುಂತುರು ಮಳೆಯಾಗಿದೆ. ಬೀದರ್ ಜಿಲ್ಲೆಯ ಬೀದರ್, ಭಾಲ್ಕಿಯಲ್ಲಿ ಸೋಮವಾರ ಸಂಜೆ ಕೆಲ ಗಳಿಗೆ ಸಾಧಾರಣ ಮಳೆಯಾಗಿದೆ.


ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ನಿವರಗಿ ಗ್ರಾಮದಲ್ಲಿ ಬಿರುಗಾಳಿಗೆ ದ್ರಾಕ್ಷಿ ಬಳ್ಳಿಗಳ ಸಾಲು ನೆಲಕ್ಕುರುಳಿದೆ

...ನೀತಿ ರಚನೆಗಾಗಿ ಶೀಘ್ರ ಸಮಿತಿ

ಒಂದನೇ ಪುಟದಿಂದ...

ಈ ವರದಿ ಆಧಾರದಲ್ಲಿ ಮಕ್ಕಳಿಗೆ ಅನ್ವಯವಾಗುವಂತೆ ‘ಡಿಜಿಟಲ್ ನಿಯಂತ್ರಣ ನೀತಿ’ ರೂಪಿಸಲಾಗುತ್ತದೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸೇರಿದಂತೆ ವಿವಿಧ ಸಂಘಸಂಸ್ಥೆಗಳು, ಸಂಘಟನೆಗಳು, ಕೆಲ ಪೋಷಕರು ಈ ಕುರಿತು ಸರ್ಕಾರಕ್ಕೆ ಪತ್ರ ಬರೆದಿದ್ದರು. ಈಚೆಗೆ ನಡೆದ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮಾವೇಶದಲ್ಲೂ ಈ ಕುರಿತು ಚರ್ಚಿಸಲಾಗಿತ್ತು. 16 ವರ್ಷದ ಒಳಗಿನ ಮಕ್ಕಳ ಮೊಬೈಲ್ ಬಳಕೆಗೆ ನಿರ್ಬಂಧ ವಿಧಿಸುವಂತೆ ಕುಲಪತಿಗಳು ಸಲಹೆ ನೀಡಿದ್ದರು. ಈ ಎಲ್ಲ ಬೆಳವಣಿಗೆಗಳ ನಡುವೆ ರಾಜ್ಯ ಸರ್ಕಾರ ಸಮಿತಿ ರಚಿಸಿ, ನಂತರ ಸೂಕ್ತ ನೀತಿ ಜಾರಿಗೊಳಿಸಲು ನಿರ್ಧರಿಸಿದೆ.

ಆಸ್ಟ್ರೇಲಿಯಾ ಮಾದರಿಗೆ ಸಲಹೆ: ‘ಮಕ್ಕಳ ಪಾಲಿಗೆ ಸಾಮಾಜಿಕ ಜಾಲತಾಣಗಳು ಪಿಡುಗಾಗಿವೆ. ಆದರೆ, ಯಾವುದೇ ತಂತ್ರಜ್ಞಾನವನ್ನು ನಿರ್ಬಂಧಿಸಲು ಸರ್ಕಾರಗಳಿಗೆ ಅವಕಾಶ ಇಲ್ಲ. ಮೊಬೈಲ್ ನಿರ್ಬಂಧಿಸುವ ಬದಲು ಸಾಮಾಜಿಕ ಜಾಲತಾಣಗಳ ಬಳಕೆ ನಿರ್ಬಂಧಿಸಬೇಕು. ಮಕ್ಕಳ ಬೆಳವಣಿಗೆಗೆ ಮಾರಕವಾಗದಂತೆ ಎಚ್ಚರವಹಿಸಬೇಕು. ದುಷ್ಪರಿಣಾಮಗಳನ್ನು ತಡೆಗಟ್ಟಲು ಆಸ್ಟ್ರೇಲಿಯಾ ಮಾದರಿಯನ್ನು ಅಳವಡಿಸಿಕೊಳ್ಳಬೇಕು’ ಎನ್ನುತ್ತಾರೆ ಕರ್ನಾಟಕ ಖಾಸಗಿ ಶಾಲಾ ಕಾಲೇಜು ಪೋಷಕ ಸಂಘಟನೆಗಳ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಎನ್.ಯೋಗಾನಂದ.

ಸ್ಮಾರ್ಟ್‌ಕ್ಲಾಸ್‌ಗಳಿಗೆ ಆದ್ಯತೆ

ಪ್ರೌಢಶಾಲೆಗಳ ಶೇ 94.5ರಷ್ಟು ಮಕ್ಕಳು ಡಿಜಿಟಲ್ ಸಾಕ್ಷರತೆಗೆ ತೆರೆದುಕೊಂಡಿರುವ ಕಾರಣ ಡಿಜಿಟಲ್ ಕ್ಲಾಸ್ ರೂಂಗಳ ಸಂಖ್ಯೆ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ.

3,862 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್ ಅಳವಡಿಸಲು ₹91.54 ಕೋಟಿ ಮೊತ್ತಕ್ಕೆ ಟೆಂಡರ್ ಆಹ್ವಾನಿಸಲು ಶಾಲಾ ಶಿಕ್ಷಣ ಇಲಾಖೆ ಅನುಮೋದನೆ ನೀಡಿದೆ. 2022–23ನೇ ಸಾಲಿನಿಂದ 2025–26ನೇ ಸಾಲಿನವರೆಗೆ ಕರ್ನಾಟಕ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆ ಅಡಿ ಪಟ್ಟಿ ಮಾಡಲಾದ ಶಾಲೆಗಳಿಗೆ ಈ ಸೌಲಭ್ಯ ಸಿಗಲಿದೆ. 2026–26ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭದ ವೇಳೆಗೆ ಜಾರಿಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ಚರ್ಚೆಯಲ್ಲಿದೆ– ಡಿಕೆಶಿ

‘ಶಾಲೆಗಳಲ್ಲಿ ಮೊಬೈಲ್ ಬಳಕೆ ನಿಷೇಧಿಸುವ ವಿಚಾರ ಚರ್ಚೆಯಲ್ಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ‘ಈ ಬಗ್ಗೆ ಪೋಷಕರಿಂದಲೂ ಒತ್ತಡವಿದೆ. ಅನೇಕ ದೇಶಗಳಲ್ಲಿ ಈಗಾಗಲೇ ಈ ಕ್ರಮ ಕೈಗೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಯಾಗುತ್ತಿದೆ’ ಎಂದರು.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಮುಂದೆ ಪ್ರತಿಭಟನೆ ನಾಳೆ

ಬಂಡೀಪುರ ಸಫಾರಿಗೆ ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿ ಮರು ಆರಂಭಿಸಿರುವುದನ್ನು ಖಂಡಿಸಿ ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಮುಂದೆ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘದ ಮುಖಂಡರು ಸೋಮವಾರ ಪ್ರತಿಭಟನೆ ನಡೆಸಿದರು. ಇದೇ ವೇಳೆ, ಮೈಸೂರು ಜಿಲ್ಲೆಯ ನಾಗರಹೊಳೆ ಪ್ರದೇಶದಲ್ಲಿ ಹುಲಿ ಸಫಾರಿಯು ಮಧ್ಯಾಹ್ನ 9 ಪ್ರವಾಸಿಗರೊಂದಿಗೆ ಆರಂಭವಾಯಿತು.

‘ಮಾನವ–ವನ್ಯಜೀವಿ ಸಂಘರ್ಷ ಕುರಿತು ವಸ್ತುಸ್ಥಿತಿ ಅಧ್ಯಯನ ಮಾಡದೆ ತಾಂತ್ರಿಕ ಸಮಿತಿ ನೀಡಿರುವ ಮಧ್ಯಂತರ ವರದಿಯ ಆಧಾರದ ಮೇಲೆ ಸರ್ಕಾರವು ಸಫಾರಿ ಮರು ಆರಂಭಿಸಿರುವುದು ಖಂಡನೀಯ’ ಎಂದು ಚಾಮರಾಜನಗರದಲ್ಲಿ ರೈತ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

‘ಸಫಾರಿ ಬಂದ್ ಆಗುವವರೆಗೂ ನಿರಂತರ ಪ್ರತಿಭಟನೆ ನಡೆಸಲಾಗುವುದು. ಫೆ.25ರಂದು ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಧರಣಿ ನಡೆಸಲಾಗುವುದು. ಮಣಿಯದಿದ್ದರೆ ಮಾರ್ಚ್ 1ರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನು ಆರಂಭಿಸಲಾಗುವುದು’ ಎಂದು ಮುಖಂಡ ಹೊನ್ನೂರು ಪ್ರಕಾಶ್ ತಿಳಿಸಿದರು.

ಮನವಿ ಸ್ವೀಕರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ‘ರೈತ ಸಂಘಟನೆಗಳ ವಿರೋಧವನ್ನು ಅರಣ್ಯ ಸಚಿವರು ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು. ಅಕ್ರಮ ರೆಸಾರ್ಟ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

> **ಬಂಡೀಪುರ–ನಾಗರಹೊಳೆ ಸಫಾರಿಯನ್ನು ಸರ್ಕಾರ ಏಕಾಏಕಿ ಪುನರಾರಂಭ ಮಾಡಿಲ್ಲ. ತಜ್ಞರ ಸಮಿತಿ ಮಾಡಿ, ಚರ್ಚಿಸಿಯೇ ತೀರ್ಮಾನಿಸಿದೆ. ರೈತರು ಪ್ರತಿಭಟನೆಗೆ ಮುಂದಾದರೆ ಏನೂ ಹೇಳಲಾಗದು**
> **ಕೆ.ವೆಂಕಟೇಶ್**
> ಪಶು ಸಂಗೋಪನಾ ಸಚಿವ


ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿ ನಿಲ್ಲಿಸುವಂತೆ ಒತ್ತಾಯಿಸಿ ಚಾಮರಾಜನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಸಾಮೂಹಿಕ ನಾಯಕತ್ವದ ರಾಜ್ಯ ರೈತ ಸಂಘ ಹಾಗೂ ಹಸಿರುಸೇನೆ ಮುಖಂಡರ ಮನವಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಆಲಿಸಿದರು

‘ಕಿಶ್ತವಾಡ: ಉಗ್ರರ ಜಾಲಕ್ಕೆ ಹೊಡೆತ’

ಒಂದೂವರೆ ವರ್ಷದಿಂದ ನಡೆಯುತ್ತಿದ್ದ ಜಂಟಿ ಕಾರ್ಯಾಚರಣೆ: ಸೇನೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಿಶ್ತವಾಡ ಜಿಲ್ಲೆಯ ಛಾತ್ರು ಪ್ರದೇಶದಲ್ಲಿ ಭಾನುವಾರ ನಡೆದ ಪಾಕಿಸ್ತಾನ ಮೂಲದ ಜೈಶ್-ಎ-ಮೊಹಮ್ಮದ್ (ಜೆಇಎಂ) ಸಂಘಟನೆಯ ಮೂವರು ಭಯೋತ್ಪಾದಕರ ಹತ್ಯೆಯು ಭಯೋತ್ಪಾದಕ ಜಾಲಕ್ಕೆ ಭಾರಿ ಹೊಡೆತ ನೀಡಿದೆ ಎಂದು ಭಾರತೀಯ ಸೇನೆ ಬಣ್ಣಿಸಿದೆ.

ಕಿಶ್ತವಾಡ ಪ್ರದೇಶದ ದಟ್ಟ ಅರಣ್ಯ ಪ್ರದೇಶದಲ್ಲಿ ವರ್ಷವು ದೀರ್ಘ ಕಾಲದಿಂದ ನಡೆಯುತ್ತಿದ್ದ ಜಂಟಿ ಕಾರ್ಯಾಚರಣೆಯು ಅತ್ಯಂತ ಸವಾಲಿನದ್ದಾಗಿತ್ತು. ಶೀತ, ಮಳೆ ಮತ್ತು ಹಿಮಪಾತದಂತಹ ಸವಾಲಿನ ಪರಿಸ್ಥಿತಿಗಳ ನಡುವೆಯೂ ಯಶಸ್ವಿಯಾಗಿ ಕಾರ್ಯಾಚರಣೆ ನಡೆಸಲಾಯಿತು ಎಂದು ಅದು ಹೇಳಿದೆ.

ಸೇನಾ ಪಡೆಗಳು, ಜಮ್ಮು ಮತ್ತು ಕಾಶ್ಮೀರದ ಪೊಲೀಸರು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆಯು ಪ್ರಮುಖ ಪರಿಸ್ಥಿತಿಯಲ್ಲೂ ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿದ್ದು, ಭಯೋತ್ಪಾದಕರನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾಗಿವೆ. ಮೃತ ಮೂವರು ಭಯೋತ್ಪಾದಕರಲ್ಲಿ ಒಬ್ಬ ಜೆಇಎಂ ಕಮಾಂಡರ್ ಸೈಫುಲ್ಲಾ ಸಹ ಸೇರಿದ್ದಾನೆ ಎಂದೂ ಸೇನೆ ತಿಳಿಸಿದೆ.



ಕಿಶ್ತವಾಡದಲ್ಲಿ ನಡೆದ ಭಯೋತ್ಪಾದಕರ ಹತ್ಯೆ ಬಳಿಕ ವಶಕ್ಕೆ ಪಡೆದಿರುವ ಶಸ್ತ್ರಾಸ್ತ್ರ – ಪಿಟಿಐ ಚಿತ್ರ

ನಾಗರಿಕ ಮತ್ತು ಸೇನಾ ಗುಪ್ತಚರ ಮಾಹಿತಿ ಆಧರಿಸಿ ಈ ಪಡೆಗಳು ಕಿಶ್ತವಾಡ ವ್ಯಾಪ್ತಿಯಲ್ಲಿ ಎಲ್ಲ ಭಯೋತ್ಪಾದಕರನ್ನು ನಿರ್ಮೂಲನೆ ಮಾಡುವ ಎಂದು ಸೇನೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ತಂತ್ರಜ್ಞಾನದ ಬಳಕೆ: ಈ ಜಂಟಿ ಕಾರ್ಯಾಚರಣೆಯಲ್ಲಿ ತಂತ್ರಜ್ಞಾನವನ್ನು ನಿರಂತರವಾಗಿ ಬಳಸಿಕೊಳ್ಳಲಾಗಿದೆ. ಎಫ್‌ಪಿವಿ ಡ್ರೋನ್‌ಗಳು, ಉಪಗ್ರಹ ಚಿತ್ರಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗಿದೆ ಎಂದು ಸೇನೆ ಹೇಳಿದೆ.

ಟೈಸನ್ ಸಾಹಸ ಸ್ಮರಣೆ

ಸೇನಾ ತರಬೇತಿ ಪಡೆದ ನಾಯಿ ಟೈಸನ್ ಜಂಟಿ ಕಾರ್ಯಾಚರಣೆ ವೇಳೆ ತೋರಿದ ಸಾಹಸವನ್ನು ಮೇಜರ್ ಜನರಲ್ ಎ.ಪಿ.ಎಸ್. ಬಾಲ್ ಸುದ್ದಿಗೋಷ್ಠಿಯಲ್ಲಿ ಕೊಂಡಾಡಿದರು. ಭಯೋತ್ಪಾದಕರು ಹಾರಿಸಿದ ಗುಂಡೇಟಿನಿಂದಾಗಿ ಅದು ಗಾಯಗೊಂಡಿದೆ.

'ಭಯೋತ್ಪಾದಕರು ಅಡಗಿದ್ದ ಗುಡಿಸಲಿನ ಬಳಿ ಪರಿಶೀಲನೆಗಾಗಿ ಟೈಸನ್ ಅನ್ನು ನಿಯೋಜಿಸಲಾಗಿತ್ತು. ಈ ವೇಳೆ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದರು. ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿದವು. ಗುಂಡಿನ ಚಕಮಕಿ ವೇಳೆ ಭಯೋತ್ಪಾದಕರ ಗುಂಡು ಟೈಸನ್‌ಗೆ ತಗುಲಿತು. ಜರ್ಮನ್ ಶೆಫರ್ಡ್ ತಳಿಯ ಟೈಸನ್ ಅನ್ನು ಕೂಡಲೇ ಚಿಕಿತ್ಸೆಗಾಗಿ ಏರ್‌ಲಿಫ್ಟ್ ಮಾಡಲಾಯಿತು. ಈಗ ಅದರ ಆರೋಗ್ಯ ಸ್ಥಿರವಾಗಿದೆ' ಎಂದು ಅವರು ವಿವರಿಸಿದರು.



ಕಿಶ್ತವಾಡದಲ್ಲಿ ನಡೆದ ಕಾರ್ಯಾಚರಣೆ ವೇಳೆ ಗುಂಡೇಟಿನಿಂದ ಗಾಯಗೊಂಡಿರುವ 'ಟೈಸನ್' –ಪಿಟಿಐ ಚಿತ್ರ

ಜೆಇಎಂ 'ಇಸ್ರೇಲ್ ಗ್ರೂಪ್'ನ ಪತನ

ಕಿಶ್ತವಾಡದಲ್ಲಿ ಭಾನುವಾರ ನಡೆಸಿದ ಜಂಟಿ ಕಾರ್ಯಾಚರಣೆ ವೇಳೆ ಹತರಾದ ಮೂವರು ಭಯೋತ್ಪಾದಕರು ಜೈಶ್-ಎ-ಮೊಹಮ್ಮದ್‌ನ 'ಇಸ್ರೇಲ್ ಗ್ರೂಪ್'ಗೆ ಸೇರಿದವರು ಎಂದು ಭದ್ರತಾ ಪಡೆಗಳು ಗುರುತಿಸಿವೆ.

ಈ ಮೂಲಕ ಒಂದೂವರೆ ವರ್ಷದಿಂದ ನಡೆಯುತ್ತಿರುವ ಜಂಟಿ ಕಾರ್ಯಾಚರಣೆ ಯಶಸ್ವಿಯಾಗಿದೆ. ಈ ಗುಂಪಿನ ಎಲ್ಲಾ ಸದಸ್ಯರನ್ನು ಹೊಡೆದುರುಳಿಸಿದಂತೆ ಆಗಿದೆ ಎಂದು ಜಮ್ಮು ವಲಯದ ಐಜಿಪಿ ಭೀಮ್‌ಸೇನ್ ಟುಟಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಗುಂಪಿನ ಎಲ್ಲ ಭಯೋತ್ಪಾದಕರು 2024ರಲ್ಲಿ ಭಾರತದೊಳಗೆ ನುಸುಳಿದ್ದರು. ವಿವಿಧ ಭಯೋತ್ಪಾದಕ ಚಟುವಟಿಕೆಗಳಲ್ಲಿ ಅವರು ಭಾಗಿಯಾಗಿದ್ದರು. ಭಾನುವಾರದ ಕಾರ್ಯಾಚರಣೆಯಲ್ಲಿ ಜೆಇಎಂ ಕಮಾಂಡರ್ ಸೈಫುಲ್ಲಾ ಸೇರಿದಂತೆ ಮೂವರು ಉಗ್ರರನ್ನು ಹತ್ಯೆ ಮಾಡುವ ಮೂಲಕ ಈ ಗುಂಪನ್ನು ಅಂತ್ಯಗೊಳಿಸಿದಂತಾಗಿದೆ ಎಂದು ಅವರು ಮಾಹಿತಿ ನೀಡಿದರು.

ಬಾಂಬ್ ಬೆದರಿಕೆ: ಭದ್ರತೆ ಹೆಚ್ಚಳ

ನವದೆಹಲಿ (ಪಿಟಿಐ): ಇ-ಮೇಲ್ ಮೂಲಕ ಬಾಂಬ್ ದಾಳಿಯ ಬೆದರಿಕೆ ಬಂದ ಬೆನ್ನಲ್ಲೇ, ದೆಹಲಿ ಮೆಟ್ರೊ ನಿಲ್ದಾಣ ಸೇರಿದಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೆಹಲಿ ಸಚಿವಾಲಯ, ಕೆಂಪುಕೋಟೆ, ಎರಡು ಶಾಲೆಗಳು ಸೇರಿ ಹಲವು ಕಡೆಗಳಲ್ಲಿ ಬಾಂಬ್ ಸ್ಫೋಟಿಸಲಾಗುವುದು ಎಂದು ಇತ್ತೀಚೆಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಹಾಕಲಾಗಿತ್ತು. ಭದ್ರತಾ ಪಡೆಗಳು ವ್ಯಾಪಕ ಶೋಧ ನಡೆಸಿದ ಬಳಿಕ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿರಲಿಲ್ಲ.

‘ಬಾಂಬ್ ಬೆದರಿಕೆ ಒಡ್ಡಿದ ದುಷ್ಕರ್ಮಿಗಳ ಐ.ಪಿ. ವಿಳಾಸವನ್ನು ಪತ್ತೆಹಚ್ಚಲು ಸೈಬರ್ ತಂಡದ ಸದಸ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅಪರಾಧಿಗಳು ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್ (ವಿಪಿಎನ್) ಬಳಸಿ, ಬೆದರಿಕೆ ಇ-ಮೇಲ್ ಕಳುಹಿಸುವ ಮೂಲಕ ಪೊಲೀಸರ ದಾರಿ ತಪ್ಪಿಸುತ್ತಾರೆ. ಆದರೂ, ತಂಡದ ತಜ್ಞರು ತಪ್ಪಿತಸ್ಥರನ್ನು ಬಂಧಿಸಲಿದ್ದಾರೆ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಇಡೀ ನಗರದಲ್ಲಿ ಕಟ್ಟೆಚ್ಚರ ಘೋಷಿಸಲಾಗಿದೆ. ಎಲ್ಲಾ ಮೆಟ್ರೊ ನಿಲ್ದಾಣಗಳ ಮುಂದೆ ಹೆಚ್ಚುವರಿ ಪಡೆಗಳನ್ನು ನಿಯೋಜಿಸಲಾಗಿದ್ದು, ವಿಧ್ವಂಸದ ಕೃತ್ಯಗಳ ಆತಂಕ ಇರುವುದರಿಂದ ದಿಢೀರ್ ತಪಾಸಣೆ ನಡೆಸಲು ಸೂಚನೆ ನೀಡಲಾಗಿದೆ’ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

‘ಕೆಂಪುಕೋಟೆ, ದೆಹಲಿ ಸಚಿವಾಲಯ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಬಾಂಬ್ ನಿಷ್ಕ್ರಿಯ ದಳ, ಶ್ವಾನಪಡೆಗಳನ್ನು ನಿಯೋಜಿಸಲಾಗಿದೆ. ಹರಿಯಾಣ ಹಾಗೂ ಉತ್ತರಪ್ರದೇಶ ವ್ಯಾಪ್ತಿಗೆ ಬರುವ ಮೆಟ್ರೊ ನಿಲ್ದಾಣಗಳಲ್ಲಿ ಸೂಕ್ತ ಭದ್ರತೆ ಕೈಗೊಳ್ಳಲು ಸೂಚನೆ ನೀಡಲಾಗಿದೆ’ ಎಂದು ಅವರು ವಿವರಿಸಿದ್ದಾರೆ.

‘ಸ್ಟಾಲಿನ್ ‘ಇಂಡಿಯಾ’ ಮುನ್ನಡೆಸಲಿ’

ನವದೆಹಲಿ (ಪಿಟಿಐ): ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಅವರು ‘ಇಂಡಿಯಾ’ ಕೂಟದ ಸಂಚಾಲಕರಾಗಲು ‘ಸೂಕ್ತ ವ್ಯಕ್ತಿ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಮಣಿಶಂಕರ್ ಅಯ್ಯರ್ ಅವರು ಸೋಮವಾರ ಪ್ರತಿಪಾದಿಸಿದರು.

‘ಕೂಟದಲ್ಲಿ ಒಗ್ಗಟ್ಟನ್ನು ಖಾತರಿಪಡಿಸಲು ಪ್ರಾಬಲ್ಯ ಸಾಧಿಸುವ ಪಕ್ಷಕ್ಕಿಂತ ಸಣ್ಣ ಪಕ್ಷದ ನಾಯಕರೊಬ್ಬರು ಆ ಹುದ್ದೆಯಲ್ಲಿ ಕೂರುವುದು ಉತ್ತಮ’ ಎಂದು ಅವರು ಅಭಿಪ್ರಾಯಪಟ್ಟರು.

‘ಸದ್ಯ 2029ರ ಚುನಾವಣೆಯೇ ನಮ್ಮ ಗುರಿ. ಹೀಗಿದ್ದಾಗ ‘ಇಂಡಿಯಾ’ ಒಕ್ಕೂಟ ಮುನ್ನಡೆಸಲು ಸ್ಟಾಲಿನ್‌ಗಿಂತ ಉತ್ತಮ ಆಯ್ಕೆ ಬೇರೆ ಇಲ್ಲ’ ಎಂದು ಅವರು ಹೇಳಿದರು.

‘ಬಲಿಷ್ಠ ‘ಇಂಡಿಯಾ’ ಒಕ್ಕೂಟ ಮಾತ್ರ 2029ರ ಚುನಾವಣೆಯಲ್ಲಿ ಗೆಲುವು ಸಾಧಿಸಲು ಸಾಧ್ಯ. ಇಲ್ಲದಿದ್ದರೆ ರಾಹುಲ್ ಗಾಂಧಿ ಪ್ರಧಾನಮಂತ್ರಿ ಆಗಲು ಸಾಧ್ಯವಿಲ್ಲ’ ಎಂದೂ ಅವರು ಕಾರಣವನ್ನು ವಿವರಿಸಿದರು.

‘ಮುಂಬರುವ ಚುನಾವಣೆ ಬಳಿಕ ಸ್ಟಾಲಿನ್ ಪುತ್ರ ಮತ್ತು ಅವರ ಸಹಚರರು ರಾಜ್ಯ ಸರ್ಕಾರವನ್ನು ಮುನ್ನಡೆಸುತ್ತಾರೆ. ಸ್ಟಾಲಿನ್ ಅವರು ಮಾತ್ರ ರಾಷ್ಟ್ರಮಟ್ಟದಲ್ಲಿ ಒಕ್ಕೂಟವನ್ನು ಬಲಪಡಿಸುವ ಸಾಮರ್ಥ್ಯ ಹೊಂದಿದ್ದಾರೆ’ ಎಂದು ಹೇಳಿದರು.

> **ನನ್ನ ಮಿತಿ ಏನೆಂದು ತಿಳಿದಿದೆ. ಆ ವ್ಯಾಪ್ತಿಯಿಂದ ಆಚೆಗೆ ಬರಲಾರೆ. ‘ಇಂಡಿಯಾ’ ಒಕ್ಕೂಟವನ್ನು ಕಾಂಗ್ರೆಸ್ ಮುನ್ನಡೆಸುವುದು ಸೂಕ್ತ**
> **ಎಂ.ಕೆ. ಸ್ಟಾಲಿನ್,**
> ತಮಿಳುನಾಡು ಮುಖ್ಯಮಂತ್ರಿ

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕೈಲಾದವನು ಮಾಡುತ್ತಾನೆ. ಕೈಲಾಗದವನು ಉಪದೇಶ ಮಾಡುತ್ತಾನೆ.

–ಜಾರ್ಜ್ ಬರ್ನಾಡ್ ಷಾ

ಸಂಪಾದಕೀಯ

‘ಎಐ’ಗೆ ಪ್ರಜಾಪ್ರಭುತ್ವದ ಆಯಾಮ ಭಾರತದ ಆಶಯ ಅನುಸರಣೀಯ

ನವದೆಹಲಿಯಲ್ಲಿ ಕಳೆದ ವಾರ ಕೊನೆಗೊಂಡ ‘ಎಐ ಇಂಪ್ಯಾಕ್ಟ್ ಶೃಂಗಸಭೆ’ಯು ದೇಶದಲ್ಲಿನ ‘ಎಐ’ ಸಂಬಂಧಿತ ಚಟುವಟಿಕೆಗಳಿಗೆ ಉತ್ತೇಜನ ನೀಡುವಂತಹದ್ದಾಗಿದೆ. ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ ‘ಜಾಗತಿಕ ದಕ್ಷಿಣ’ ಭಾಗದಲ್ಲಿ ನಡೆದ ಮೊದಲ ಪ್ರಮುಖ ಸಮಾವೇಶ ಇದಾಗಿದೆ. ಕೃತಕ ಬುದ್ಧಿಮತ್ತೆಯ ಪ್ರತಿಷ್ಠಿತ ವೇದಿಕೆಗಳಲ್ಲಿ ಜಾಗತಿಕ ದಕ್ಷಿಣ ದೇಶಗಳು ಇಲ್ಲಿಯವರೆಗೆ ಯಾವುದೇ ಮಹತ್ವದ ಉಪಸ್ಥಿತಿಯನ್ನು ಹೊಂದಿಲ್ಲ ಮತ್ತು ‘ಎಐ’ ಆಡಳಿತಕ್ಕೆ ಸಂಬಂಧಿಸಿದ ಸಂವಾದಗಳಲ್ಲಿ ಭಾಗಿಯಾಗಿಲ್ಲ. ಪ್ರಸ್ತುತ ವಿಶ್ವವ್ಯಾಪಿಯಾಗಿರುವ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶವನ್ನು ದಕ್ಷಿಣದ ದೇಶಗಳಿಗೆ ಸಮಾವೇಶ ಒದಗಿಸಿದೆ. ಈ ಶೃಂಗಸಭೆಯಲ್ಲಿ ಅಳವಡಿಸಿಕೊಂಡ ‘ದೆಹಲಿ ಘೋಷಣೆ’ಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಪ್ರಜಾಪ್ರಭುತ್ವದ ಸ್ಪರ್ಶ ನೀಡುವ ಮೂಲಕ ವಿಶ್ವದಲ್ಲಿ ಬದಲಾವಣೆ ತರುವುದಕ್ಕೆ ಕರೆ ನೀಡಿದೆ. ‘ಎಐ’ ಬಳಕೆಯ ಅನುಕೂಲಗಳನ್ನು ಜನರಿಗೆ ಸಾಧ್ಯವಾದಷ್ಟೂ ತಲುಪಿಸುವ, ವಿಶ್ವದ ದಕ್ಷಿಣ ಭಾಗದ ದೇಶಗಳಲ್ಲಿ ‘ಎಐ’ ಅನ್ನು ಪ್ರಸ್ತುತಗೊಳಿಸುವ, ಸುರಕ್ಷಿತ ಹಾಗೂ ವಿಶ್ವಾಸಾರ್ಹ ‘ಎಐ’ ಕುರಿತು ‘ದೆಹಲಿ ಘೋಷಣೆ’ ಒಳಗೊಂಡಿರುವ ಆಶಯಗಳು ಭಾರತದ ಗೊತ್ತುಪಡಿಸಿಕೊಂಡ ಆದ್ಯತೆಗಳೊಂದಿಗೆ ಹೊಂದಾಣಿಕೆ ಆಗುವಂತಿವೆ. ಈ ಘೋಷಣೆಗೆ ಅಮೆರಿಕ, ಚೀನಾ, ಫ್ರಾನ್ಸ್ ಸೇರಿದಂತೆ ಕೃತಕ ಬುದ್ಧಿಮತ್ತೆ ಕ್ಷೇತ್ರದ ಮುಂಚೂಣಿ ದೇಶಗಳು ಸಹಿ ಹಾಕಿವೆ.



‘ಎಐ ಇಂಪ್ಯಾಕ್ಟ್ ಶೃಂಗಸಭೆ’ ಕೃತಕ ಬುದ್ಧಿಮತ್ತೆ ಕ್ಷೇತ್ರದ ಚಟುವಟಿಕೆಗಳಿಗೆ ಉತ್ತೇಜನ ನೀಡುವಂತಹ ಹಾಗೂ ಆ ಕ್ಷೇತ್ರದಲ್ಲಿನ ಚರ್ಚೆಗಳಲ್ಲಿ ಭಾರತೀಯರಿಗೆ ವೇದಿಕೆ ದೊರಕಿಸುವ ಪ್ರಯತ್ನವಾಗಿದೆ.

ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ಓಪನ್ ಕೋಡ್’ ಮತ್ತು ಹಂಚಿಕೆಯ ಅಭಿವೃದ್ಧಿಯನ್ನು ಆಧರಿಸಿದ ‘ಎಐ’ ಕುರಿತ ಪರ್ಯಾಯ ದೃಷ್ಟಿಕೋನವನ್ನು ಪ್ರತಿಪಾದಿಸಿದರು. ಅಂತಿಮವಾಗಿ ‘ಎಐ’ ತಂತ್ರಜ್ಞಾನ ವಿಶ್ವದ ಸಾಮಾನ್ಯ ಒಳಿತನ್ನು ಸಾಧಿಸುವಂತಿರಬೇಕು. ದೇಶಗಳು ಮತ್ತು ಕಂಪನಿಗಳ ನಡುವೆ ತೀವ್ರ ಸ್ಪರ್ಧೆ ಇರುವ ಸಂದರ್ಭದಲ್ಲಿ ಈ ‘ಸಾಮಾನ್ಯ ಒಳಿತಿನ’ ಆಶಯ ಮಹತ್ವದ್ದಾಗಿದೆ. ಚಾಟ್‌ಜಿಪಿಟಿ ಸಿಇಒ ಸ್ಯಾಮ್ ಆಲ್ಟ್‌ಮನ್ ಮತ್ತು ಆಂಥ್ರೊಪಿಕ್ ಸಿಇಒ ಡೇರಿಯೊ ಅಮೋಡೈ ಅವರು ಶೃಂಗಸಭೆಯಲ್ಲಿ ಸಾರ್ವಜನಿಕವಾಗಿ ಪರಸ್ಪರ ಕೈಗಳನ್ನು ಹಿಡಿದುಕೊಂಡು ಮೇಲೆತ್ತಲು ನಿರಾಕರಿಸಿದ್ದು, ಈ ಕ್ಷೇತ್ರದಲ್ಲಿ ಇರುವ ಸ್ಪರ್ಧೆಯ ತೀವ್ರತೆಯನ್ನು ಸಂಕೇತಿಸುವಂತಿದೆ. ವಿಶ್ವದ ಗಮನಸೆಳೆದಿದ್ದರೂ, ‘ಎಐ’ ತಂತ್ರಜ್ಞಾನ ಇನ್ನೂ ಶೈಶವಾವಸ್ಥೆಯಲ್ಲಿದೆ ಹಾಗೂ ಅದರ ಸಾಧ್ಯತೆಗಳು ಅಸ್ಪಷ್ಟವಾಗಿಯೇ ಇವೆ. ಕೈಗಾರಿಕೆ, ವೈದ್ಯಕೀಯ, ಕೃಷಿ, ಕಾನೂನು, ಸಮಾಜ ವಿಜ್ಞಾನ ಸೇರಿದಂತೆ ಖಾಸಗಿ ಹಾಗೂ ಸಾರ್ವಜನಿಕ ಜೀವನದ ಬಹುತೇಕ ಕ್ಷೇತ್ರಗಳನ್ನು ಈ ಹಿಂದಿನ ಯಾವ ತಂತ್ರಜ್ಞಾನವೂ ಪ್ರಭಾವಿಸದಷ್ಟು ಗಾಢವಾಗಿ ‘ಎಐ’ ಪ್ರಭಾವಿಸಲಿದೆ ಎಂದು ಭಾವಿಸಲಾಗಿದೆ. ಅಮೆರಿಕ, ಚೀನಾದಂತಹ ಕೆಲವು ದೇಶಗಳು ಮತ್ತು ಸಂಸ್ಥೆಗಳು ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿವೆ. ನರೇಂದ್ರ ಮೋದಿ ಅವರು ನೀಡಿರುವ ‘ಮಾನವ’ (ಎಂಎಎನ್‌ಎವಿ) ಪರಿಕಲ್ಪನೆ ಪ್ರತಿನಿಧಿಸುವ ನೈತಿಕತೆ, ಹೊಣೆಗಾರಿಕೆ, ರಾಷ್ಟ್ರೀಯ ಸಾರ್ವಭೌಮತೆ, ಲಭ್ಯತೆ ಹಾಗೂ ವಿಶ್ವಾಸಾರ್ಹತೆ ಎನ್ನುವ ಐದು ಆಶಯಗಳನ್ನು ಈ ಕ್ಷೇತ್ರದ ಭಾಗವಾಗಿಸುವುದು ಸುಲಭವಲ್ಲವಾದರೂ, ಸಾಮಾನ್ಯ ಒಳಿತಿಗಾಗಿ ಮೂಲಭೂತವಾದ ಮಾರ್ಗಸೂಚಿಗಳನ್ನು ಹೊಂದುವ ಅಗತ್ಯವನ್ನು ಗಟ್ಟಿಯಾಗಿ ಹೇಳಲೇಬೇಕಿದೆ.

‘ಎಐ’ ಕ್ಷೇತ್ರದ ಪ್ರಮುಖ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಿದ್ದು ಶೃಂಗಸಭೆಯ ವಿಶೇಷಗಳಲ್ಲೊಂದಾಗಿದೆ. ಐದುನೂರಕ್ಕೂ ಹೆಚ್ಚು ಖಾಸಗಿ ಮಾತುಕತೆಗಳು ನಡೆದಿದ್ದು, 250 ಶತಕೋಟಿ ಡಾಲರ್‌ಗೂ ಹೆಚ್ಚು ಬಂಡವಾಳ ಹೂಡಿಕೆಯ ಬದ್ಧತೆ ಹಾಗೂ 20 ಶತಕೋಟಿ ಡಾಲರ್ ಅಂದಾಜಿನ ಸಂಶೋಧನೆಗಳ ಬದ್ಧತೆಗೆ ಸಮಾವೇಶ ಸಾಕ್ಷಿಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಗೂಗಲ್ ಮತ್ತು ಮೈಕ್ರೊಸಾಫ್ಟ್‌ನಂತಹ ಪ್ರಮುಖ ಸಂಸ್ಥೆಗಳೊಂದಿಗಿನ ಭಾರತದ ಪಾಲುದಾರಿಕೆಯ ಮಾತುಕತೆಗಳು ತಂತ್ರಜ್ಞಾನ ಮತ್ತು ಬಂಡವಾಳ, ಎರಡರ ಬರುವಿಕೆಗೂ ಕಾರಣವಾಗುವಂತಿವೆ. ಭಾರತವು ತನ್ನ ಅಗತ್ಯ ಮತ್ತು ಸಂದರ್ಭಗಳಿಗೆ ಸಂಬಂಧಿಸಿದಂತೆ ನಾವೀನ್ಯತೆ ಮತ್ತು ಪ್ರಯೋಗಗಳ ಮೂಲಕ ಸಂಶೋಧನೆಯನ್ನು ರೂಪಿಸಿಕೊಳ್ಳಬೇಕಾಗಿದೆ. ‘ಎಐ’ಗೆ ಸಂಬಂಧಿಸಿದ ಆಸಕ್ತಿ ಮತ್ತು ಚಟುವಟಿಕೆ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ, ಈ ಕ್ಷೇತ್ರದಲ್ಲಿ ಹಲವಾರು ನವೋದ್ಯಮಗಳು ಸಕ್ರಿಯವಾಗಿವೆ. ಈ ಎಲ್ಲ ಚಟುವಟಿಕೆಗಳಿಗೆ ಮತ್ತು ಆಕಾಂಕ್ಷೆಗಳಿಗೆ ‘ಎಐ ಇಂಪ್ಯಾಕ್ಟ್ ಶೃಂಗಸಭೆ’ ಉತ್ತೇಜನ ನೀಡಿದೆ.

ಚುಟುಕು

ಆನೆಗಳಿಗೆ ಜಾಗ ಎಲ್ಲಿದೆ?



ಚಿಕ್ಕಮಗಳೂರಿನಲ್ಲಿ ಎಲ್ಲೆಂದರಲ್ಲಿ ಹೋಮ್ ಸ್ಟೇ, ರೆಸಾರ್ಟ್, ರಿಯಲ್ ಎಸ್ಟೇಟ್ ಮಾಫಿಯಾ ದಂಧೆ ನಡೆಸುವುದನ್ನು ನಿಲ್ಲಿಸಬೇಕು. ಕಾಫಿ ಎಸ್ಟೇಟ್‌ಗಳನ್ನು ತುಂಡು ತುಂಡಾಗಿಸಿ ಮಾರಾಟ ಮಾಡಿ, ಆನೆಗಳು ಓಡಾಡುವ ಜಾಗದಲ್ಲಿ ಜನದಟ್ಟಣೆಯಾದರೆ ಅವುಗಳು ಎಲ್ಲಿಗೆ ಹೋಗಬೇಕು?

ಕೆ.ಎ. ಜಗದೀಶ್, ‘ಎಕ್ಸ್’ನಿಂದ

ಕಿಡಿನುಡಿ



ಟ್ಯಾಂಕರ್ ಮಾಫಿಯಾ ಜತೆ ರಾಜ್ಯ ಸರ್ಕಾರ ಕೈಜೋಡಿಸಿದೆ. ಕಳೆದ ಎರಡು ವರ್ಷಗಳಿಂದ ಕೊಳವೆಬಾವಿ ದುರಸ್ತಿ ಯಾಕೆ ಆಗುತ್ತಿಲ್ಲ? ಇದಕ್ಕಾಗಿ ಟ್ಯಾಂಕರ್ ಮಾಫಿಯಾದಿಂದ ಎಷ್ಟು ಕಮಿಷನ್ ಬರುತ್ತಿದೆ? ಇದರಲ್ಲಿ ಹೈಕಮಾಂಡ್‌ನ ಪಾಲು ಎಷ್ಟು?

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 24-2-2001

- **ಕಾಲೇಜು ಅನುದಾನ: ಇಂದು ಹೊಸ ಆದೇಶ ಜಾರಿಗೆ**

ಬೆಂಗಳೂರು, ಫೆ. 23– ಅನುದಾನಿತ ಕಾಲೇಜುಗಳಿಗೆ ಶೇ 15ರಷ್ಟು ಅನುದಾನ ಕಡಿತ ಮಾಡಿ ಈ ತಿಂಗಳ 13ರಂದು ಹೊರಡಿಸಿದ್ದ ಆದೇಶವನ್ನು, ಅಧ್ಯಾಪಕರ ಸಂಬಳಕ್ಕೆ ಸ್ವಲ್ಪವೂ ಧಕ್ಕೆ ಆಗದಂತೆ ಸರ್ಕಾರ ಪರಿಷ್ಕರಣೆ ಮಾಡಿದೆ. ಅಧ್ಯಾಪಕರು ಹಿಂದಿನಂತೆ ಪೂರ್ಣ ಸಂಬಳವನ್ನು ಪಡೆಯಲಿದ್ದಾರೆ.

ಅಧ್ಯಾಪಕರ ಸಂಬಳದಲ್ಲಿ ಕಡಿತ ಆಗದಂತೆ ಆದೇಶ ತಿದ್ದುಪಡಿ ಮಾಡಿ ನಾಳೆ ಅಧಿಕೃತ ಆದೇಶ ಹೊರಡಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಜಿ. ಪರಮೇಶ್ವರ ಅವರು ತಿಳಿಸಿದರು.

- **ವಾರಾಹಿ ಯೋಜನೆಗೆ ಪರಿಸರ ಅನುಮತಿ**

ನವದೆಹಲಿ, ಫೆ. 23– ವಾರಾಹಿ ನೀರಾವರಿ ಯೋಜನೆಗೆ ಕೇಂದ್ರ ಅರಣ್ಯ ಮತ್ತು ಪರಿಸರ ಖಾತೆ ಸಚಿವಾಲಯವು ಪರಿಸರ ಸಂಬಂಧಿ ಅನುಮತಿ ನೀಡುವುದು ಬಹುತೇಕ ಖಚಿತವಾಗಿದ್ದು, ಇದರಿಂದಾಗಿ 21 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಯೋಜನೆ ಕೊನೆಗೂ ಕಾರ್ಯಗತಗೊಳ್ಳುವ ಹಾದಿಯಲ್ಲಿ ಸಾಗಿದೆ.

75 ವರ್ಷಗಳ ಹಿಂದೆ

ಶನಿವಾರ, 24-2-1951

- **ಏಪ್ರಿಲ್ 1ರಿಂದ ರೈಲ್ವೆ ಪ್ರಯಾಣದ ದರ ಏರಿಕೆ**

ನವದೆಹಲಿ, ಫೆ. 23– ರೈಲ್ವೆ ಪ್ರಯಾಣದ ದರವನ್ನು ಏಪ್ರಿಲ್ 1ನೇ ತಾರೀಖಿನಿಂದ ಹೆಚ್ಚಿಸುವುದಾಗಿ ರೈಲ್ವೆ ಸಚಿವ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು ಇಂದು ಪ್ರಕಟಿಸಿದರು.

ಪಾರ್ಲಿಮೆಂಟಿನಲ್ಲಿ 51–52ರ ರೈಲ್ವೆ ಆಯವ್ಯಯ ಅಂದಾಜನ್ನು ಮಂಡಿಸುತ್ತ ಈ ದರಗಳ ಏರಿಕೆಯಿಂದ ಹತ್ತೊಂಬತ್ತು ಕೋಟಿ ರೂ.ಗಳನ್ನು ಪಡೆಯಬಹುದೆಂಬ ಭರವಸೆ ವ್ಯಕ್ತಪಡಿಸಿದರು. ಮಾಲು ಸಾರಿಗೆ ದರವನ್ನು ಏರಿಸುವುದಿಲ್ಲ ಎಂದರು.

ಮೂರನೇ ತರಗತಿ ದರವನ್ನು ಮೈಲಿಗೆ 1 ಕಾಸಿನಂತೆ ಹೆಚ್ಚಿಸಿರುವುದರಿಂದ ಪ್ಯಾಸೆಂಜರ್ ದರ 4 ಕಾಸಿನಿಂದ 5 ಕಾಸು, ಎಕ್ಸ್‌ಪ್ರೆಸ್ ದರ 5 ಕಾಸಿನಿಂದ 6 ಕಾಸಿಗೂ ಏರುವುದು.

ಇಂಟರ್ ತರಗತಿ ದರವನ್ನು ಮೈಲಿಗೆ 1 ಕಾಸಿನಂತೆ ಹೆಚ್ಚಿಸಿರುವುದರಿಂದ ಪ್ಯಾಸೆಂಜರ್ ದರ 7 ಕಾಸಿನಿಂದ 9 ಕಾಸಿಗೂ, ಎಕ್ಸ್‌ಪ್ರೆಸ್ ದರ 9 ಕಾಸಿನಿಂದ 10 ಕಾಸಿಗೂ, ದ್ವಿತೀಯ ತರಗತಿ ದರ 14 ಕಾಸಿನಿಂದ 16 ಕಾಸು, ಪ್ರಥಮ ತರಗತಿ ದರ ಮೈಲಿಗೆ 24 ಕಾಸುಗಳಿಂದ 27 ಕಾಸಿಗೆ ಏರುವುದು.

‘ಮತಾಂತರ ನಿಷೇಧ’ ರದ್ದಾದೀತೆ?



ವಿಶ್ಲೇಷಣೆ

ಸಿ.ಎಸ್. ದ್ವಾರಕಾನಾಥ್

> ಮತಾಂತರವನ್ನು ವಿರೋಧಿಸುವ ಕಾನೂನುಗಳ ಸಿಂಧುತ್ವದ ಪ್ರಶ್ನೆ ಸುಪ್ರೀಂ ಕೋರ್ಟ್ ಮೂಲಕ ಮತ್ತೆ ಮುನ್ನೆಲೆಗೆ ಬಂದಿದೆ. ಸಂವಿಧಾನ ಕೊಡ ಮಾಡಿರುವ ಧಾರ್ಮಿಕ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿರುವ ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಗೊಳಿಸಬೇಕೆನ್ನುವ ಆಗ್ರಹ ರಾಜ್ಯದಲ್ಲೂ ಬಲಗೊಳ್ಳುತ್ತಿದೆ. ಈ ಕಾಯ್ದೆಯನ್ನು ರಾಜ್ಯ ಸರ್ಕಾರ ರದ್ದುಪಡಿಸೀತೆ?

ಗ್ರೇಟರ್ ಬೆಂಗಳೂರಿನ ಚುನಾವಣೆಗಳು ಮುಂಬರುತ್ತಿವೆ. ಇದೇ ಸನ್ನಿವೇಶದಲ್ಲಿ ‘ಮತಾಂತರ ನಿಷೇಧ ಕಾಯ್ದೆ’ಯನ್ನು ರದ್ದುಗೊಳಿಸಬೇಕೆ? ಬೇಡವೆ? ತಿದ್ದುಪಡಿ ಮಾಡಿದರೆ ಸಾಕೆ? ಎಂಬ ಚರ್ಚೆಗಳು ಆರಂಭವಾಗಿವೆ. ಫೆಬ್ರುವರಿ 3ರಂದು ಸುಪ್ರೀಂ ಕೋರ್ಟ್, ಮತಾಂತರ ವಿರೋಧಿ ಕಾನೂನುಗಳ ಸಿಂಧುತ್ವ ಪ್ರಶ್ನಿಸಿ ಭಾರತದ ರಾಷ್ಟ್ರೀಯ ಚರ್ಚ್‌ಗಳ ಮಂಡಳಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದೆ. ಕೇಂದ್ರ ಸರ್ಕಾರ ಮತ್ತು 12 ರಾಜ್ಯಗಳಿಗೆ ನೋಟಿಸ್ ನೀಡಿದೆ. ಈ ರಾಜ್ಯಗಳಲ್ಲಿರುವ ಮತಾಂತರ ವಿರೋಧಿ ಕಾನೂನುಗಳನ್ನು ಅನುಷ್ಠಾನಗೊಳಿಸುವುದಕ್ಕೆ ರಾಷ್ಟ್ರೀಯ ಚರ್ಚ್‌ಗಳ ಮಂಡಳಿ (ಎನ್‌ಸಿಐಸಿ) ತಡೆ ನೀಡುವಂತೆ ಕೋರಿದೆ. ಎನ್‌ಸಿಐಸಿ ಸಲ್ಲಿಸಿರುವ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ನ್ಯಾಯಪೀಠ ವಿಚಾರಣೆ ನಡೆಸುತ್ತಿದ್ದು, ಮುಂದಿನ ನಾಲ್ಕು ವಾರಗಳಲ್ಲಿ ಕೇಂದ್ರ ಮತ್ತು 12 ರಾಜ್ಯ ಸರ್ಕಾರಗಳು ತಮ್ಮ ಪ್ರತಿಕ್ರಿಯೆ ನೀಡಬೇಕು ಎಂದು ಆದೇಶಿಸಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ, ಅದರಲ್ಲೂ ಪ್ರಮುಖವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದ ದಿನದಿಂದಲೂ ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಗೊಳಿಸುತ್ತೇವೆ ಎಂದು ಸತತವಾಗಿ ಹೇಳುತ್ತಲೇ ಬಂದಿದ್ದಾರೆ. ಸರ್ಕಾರ ರಚನೆಯಾಗಿ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಈಗಾಗಲೇ ಸಾವಿರ ದಿನಗಳು ಪೂರೈಸಿದವು. ಅದರ ವಿಜೃಂಭಣೆಯೂ ಮುಗಿಯಿತು. ಆದರೆ, ಮತಾಂತರ ನಿಷೇಧ ಕಾಯ್ದೆ ಮಾತ್ರ ನಿಷೇಧವಾಗಲಿಲ್ಲ. ಈ ಕುರಿತು ಕ್ರೈಸ್ತ ಸಮುದಾಯ ಕಳೆದ ಮೂರು ವರ್ಷಗಳಿಂದಲೂ ಸರ್ಕಾರದ ಮೇಲೆ ಒತ್ತಡ ತರುತ್ತಿದೆ. ಸರ್ಕಾರ ಸ್ಪಂದಿಸುತ್ತಿಲ್ಲ ಎಂಬ ಆರೋಪವನ್ನು ಸಮುದಾಯ ಮಾಡುತ್ತಿದೆ.

ಕರ್ನಾಟಕದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆ 2011ರ ಜನಗಣತಿಯ ಪ್ರಕಾರ 11.43 ಲಕ್ಷ. ಬೆಂಗಳೂರಿನಲ್ಲಿಯೇ 5,04,863 ಕ್ರಿಶ್ಚಿಯನ್ನರು ಇದ್ದಾರೆ. ಸದ್ಯದಲ್ಲೇ ನಡೆಯಲಿರುವ ಗ್ರೇಟರ್ ಬೆಂಗಳೂರು ಚುನಾವಣೆಗೆ ಕ್ರೈಸ್ತರ ಮತಗಳು, ‘ಸೆಕ್ಯುಲರ್’ ಕಾಂಗ್ರೆಸ್ಸಿಗೆ ಅತ್ಯವಶ್ಯಕ. ಆದರೂ ಮತಾಂತರ ನಿಷೇಧ ಕಾಯ್ದೆ ಹಿಂಪಡೆಯಲು ಕಾಂಗ್ರೆಸ್ ಯಾಕೋ ಹಿಂಜರಿಯುತ್ತಿರುವಂತೆ ಕಾಣಿಸುತ್ತಿದೆ. ಬಿಜೆಪಿಯಂತೂ ಕಾಯ್ದೆಯನ್ನು ಇನ್ನಷ್ಟು ಬಲಪಡಿಸಬೇಕೆಂದು ವಾದಿಸುತ್ತಿದೆ. ಕಾಂಗ್ರೆಸ್ ಧರ್ಮಸಂಕಟ ಅನುಭವಿಸುತ್ತಿರುವಂತಿದೆ. ಕಾಯ್ದೆಯನ್ನು ರದ್ದುಪಡಿಸಿದರೆ ಕ್ರೈಸ್ತ ಸಮುದಾಯದ ಮತಗಳೇನೋ ಕಾಂಗ್ರೆಸ್ಸಿಗೆ ಸಿಗುತ್ತವೆ. ಆದರೆ, ಕಾಯ್ದೆಯನ್ನು ರದ್ದು ಪಡಿಸಿದ್ದನ್ನು ಬಿಜೆಪಿ ರಾಜಕೀಯ ದಾಳವಾಗಿ ಬಳಸಿಕೊಂಡು ಹಿಂದೂ ಮತದಾರರನ್ನು ಓಲೈಸಲು ತಾನೇ ದಾರಿಮಾಡಿಕೊಟ್ಟಂತಾಗುತ್ತದೆ.

ಕ್ರೈಸ್ತ ಸಮುದಾಯ ಯಾವುದೇ ಸಂದರ್ಭದಲ್ಲಿ ಕಾಂಗ್ರೆಸ್‌ನ ಕೈಬಿಡುವುದಿಲ್ಲ ಎಂಬ ತಲೆಮಾರುಗಳ ನಂಬಿಕೆ ಈಗ ಕಾಂಗ್ರೆಸ್ ವಲಯದಲ್ಲಿ ಕಡಿಮೆಯಾಗುತ್ತಿದೆ. ಕ್ರೈಸ್ತ ಸಮುದಾಯ ನಿಧಾನವಾಗಿ ರಾಜಕೀಯವಾಗಿ ಜಾಗೃತವಾಗುತ್ತಿದೆ. ಇದಕ್ಕೆ ಪೂರಕವೆಂಬಂತೆ ದಕ್ಷಿಣ ಕನ್ನಡ ಸೇರಿದಂತೆ ಕೆಲವು ಭಾಗಗಳಲ್ಲಿನ ಸ್ಥಳೀಯ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ವಿರುದ್ಧವಾಗಿ ಕ್ರಿಶ್ಚಿಯನ್ ಮತದಾರರು ನಿಂತಿರುವುದನ್ನು ಗಮನಿಸಬಹುದು. ಇದರೊಂದಿಗೆ, ಸದರಿ ಕಾಯ್ದೆಯನ್ನು ರದ್ದು ಪಡಿಸಬೇಕೆಂದು ಕ್ರೈಸ್ತ ಸಮುದಾಯ ಕಾಂಗ್ರೆಸ್ ಸರ್ಕಾರದ ವಿರುದ್ಧವೇ ಬೃಹತ್ ಪ್ರತಿಭಟನಾ ರ‍್ಯಾಲಿಗೆ ಸಜ್ಜಾಗುತ್ತಿದೆ.

ಬಿಜೆಪಿ, ಆರ್‌ಎಸ್‌ಎಸ್, ಬಜರಂಗದಳದಂತಹ ಸಂಘ ಪರಿವಾರದವರ ಪ್ರಕಾರ, ಮತಾಂತರ ನಿಷೇಧದಂತಹ ಕಾನೂನುಗಳಿಂದ ಮತಾಂತರ ಮಾಡುವವರು ಬಲವಂತ, ಆಮಿಷ, ವಂಚನೆ, ಪ್ರಭಾವಗಳನ್ನು ಬಳಸಿ ಧರ್ಮಾಂತರ ಮಾಡುವ ಪ್ರಕ್ರಿಯೆಗೆ ತಡೆಯುಂಟಾಗುತ್ತದೆ. ಕಾನೂನನ್ನು ರದ್ದುಗೊಳಿಸಿದರೆ ಮತಾಂತರ ಮಾಡುವವರಿಗೆ ಯಾವುದೇ ತಡೆಯಿಲ್ಲದೆ ಮತಾಂತರ ನಡೆಸಲು ಅನುಕೂಲವಾಗುತ್ತದೆ. ಕಾಯ್ದೆಯ ರದ್ದತಿ ಬಲವಂತದ ಮತಾಂತರಗಳನ್ನು ಸುಗಮಗೊಳಿಸುತ್ತದೆ.

ಭಾರತದಲ್ಲಿ ಧಾರ್ಮಿಕ ಮತಾಂತರವನ್ನು ನಿಯಂತ್ರಿಸುವ ಕಲ್ಪನೆಯು ಬಹಳ ಹಿಂದಿನದು. 1930 ಮತ್ತು 1940ರ ದಶಕಗಳಲ್ಲಿ, ಹಲವಾರು ರಾಜಪ್ರಭುತ್ವಗಳು, ಮಿಷನರಿಗಳಿಂದಾಗುವ ದುರುಪಯೋಗಗಳನ್ನು ತಡೆಯಲು, ಧಾರ್ಮಿಕ ಮತಾಂತರವನ್ನು ನಿರ್ಬಂಧಿಸುವ ಕಾನೂನುಗಳನ್ನು ಜಾರಿಗೆ ತಂದವು. ವಸಾಹತುಶಾಹಿ ಯುಗದ ಆ ಕಾನೂನುಗಳು ಸ್ಥಳೀಯವಾಗಿದ್ದವು; ವ್ಯಾಪ್ತಿ ಮತ್ತು ಜಾರಿಯಲ್ಲಿ ಅವು ಕಟ್ಟುನಿಟ್ಟಿನವಾಗಿದ್ದವು, ಸ್ವಾತಂತ್ರ್ಯಾನಂತರದಲ್ಲಿ ಭಾರತೀಯ ಸಂವಿಧಾನವು ವಿಧಿ 25ರ ಅಡಿಯಲ್ಲಿ ಧರ್ಮವನ್ನು ಮುಕ್ತವಾಗಿ ಪ್ರತಿಪಾದಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಪ್ರತಿಪಾದಿಸಿತು. ಇದರ ಹೊರತಾಗಿಯೂ, ವಸಾಹತುಶಾಹಿ ನಂತರದ ಭಾರತದಲ್ಲಿ ಹಲವಾರು ರಾಜ್ಯ ಸರ್ಕಾರಗಳು ಧಾರ್ಮಿಕ ಮತಾಂತರಗಳನ್ನು ನಿಯಂತ್ರಿಸಲು ಕಾನೂನುಗಳನ್ನು ಜಾರಿಗೆ ತರಲು ಮುಂದಾದವು. ಆ ಸಂದರ್ಭದಲ್ಲಿ, ಮತಾಂತರದ ಕುರಿತ ಉದ್ವಿಗ್ನತೆಗಳು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಪ್ರಮುಖವಾಗಿದ್ದವು.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಇದ್ದಾಗ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತರಲಾಯಿತು. ಅಂದಿನಿಂದ ಕ್ರೈಸ್ತ ಸಮುದಾಯದ ಮೇಲೆ ಮತಾಂತರದ ಕಾರಣ ನೀಡಿ ಅನೇಕ ದೌರ್ಜನ್ಯಗಳು ನಡೆದಿವೆ. ಅಮಾಯಕ ಕ್ರೈಸ್ತರು ಬಲಿಪಶುಗಳಾಗಿದ್ದಾರೆ. ಏಕೆಂದರೆ, ಈಗ ಜಾರಿಯಲ್ಲಿರುವ ಕಾಯ್ದೆಯಲ್ಲಿ ಪುರಾವೆಯ ಹೊರೆಯನ್ನು ಹೊರಬೇಕಾದುದು ಆಪಾದಿತನೇ ಹೊರತು ದೂರುದಾರನಲ್ಲ. ದೂರುದಾರ ದೂರು ಕೊಟ್ಟು ಹೋದರೆ ಸಾಕು, ಆಪಾದಿತ ತಾನು ತಪ್ಪು ಮಾಡಿಲ್ಲವೆಂದು ಸಾಬೀತು ಮಾಡಬೇಕು! ಸದ್ಯಕ್ಕೆ ಲಭ್ಯ ಮಾಹಿತಿಯ ಪ್ರಕಾರ, ಈ ಕಾಯ್ದೆ ಜಾರಿಗೆ ಬಂದ ನಂತರ ಮತಾಂತರದ ಆಪಾದನೆಯ ಹಿನ್ನೆಲೆಯಲ್ಲಿ ರಾಜ್ಯದಲ್ಲಿ 13 ಪ್ರಕರಣಗಳು ದಾಖಲಾಗಿವೆ. ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿಯಾಗಿರುವ 11 ಪ್ರಕರಣಗಳು, ಮಹಿಳೆಯರ ಮೇಲೆ ದೌರ್ಜನ್ಯದ ವಿಷಯದಲ್ಲಿ 9 ಪ್ರಕರಣಗಳು ದಾಖಲಾಗಿವೆ. ಸದರಿ ಕಾಯ್ದೆ ಕಟ್ಟುನಿಟ್ಟಾಗಿ ಜಾರಿಯಲ್ಲಿರುವ ಉತ್ತರ ಪ್ರದೇಶದಲ್ಲಿ ಕ್ರೈಸ್ತ ಸಮುದಾಯ ಅನುಭವಿಸುತ್ತಿರುವ ಯಾತನೆ ಮತ್ತಷ್ಟು ದೊಡ್ಡದು.

ಕ್ರೈಸ್ತ ಸಮುದಾಯದ ನಾಯಕರಷ್ಟೇ ಅಲ್ಲ, ಮಾನವಹಕ್ಕುಗಳ ಅನೇಕ ಪ್ರತಿಪಾದಕರು, ಸಾಮಾಜಿಕ ಕಳಕಳಿಯ ಕಾನೂನು ತಜ್ಞರು, ಸಾಮಾಜಿಕ ನ್ಯಾಯದ ಹೋರಾಟಗಾರರು ಪ್ರತಿಪಾದಿಸುವಂತೆ, ಮತಾಂತರ ನಿಷೇಧದ ಕಾನೂನುಗಳು ಧಾರ್ಮಿಕ ಸ್ವಾತಂತ್ರ್ಯಕ್ಕೆ ಸ್ಪಷ್ಟವಾಗಿ ವಿರುದ್ಧವಾಗಿವೆ. ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿಯಾಗಿಸಲು ಇಂತಹ ಕಾಯ್ದೆಗಳ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ರಾಜ್ಯಗಳು ಈ ಕಾನೂನುಗಳನ್ನು ಬಲವಂತದ, ಮೋಸದ ಅಥವಾ ಪ್ರೋತ್ಸಾಹ ಆಧಾರಿತ ಮತಾಂತರಗಳನ್ನು ತಡೆಯುವ ಕ್ರಮಗಳ ನೆಪಗಳಾಗಿ ಸಮರ್ಥಿಸುತ್ತವೆ. ಆದರೆ, ಸದರಿ ಕಾನೂನುಗಳು ಅಲ್ಪಸಂಖ್ಯಾತರನ್ನು ಕಾನೂನಿನ ನೆಪದಲ್ಲಿ ಸದೆಬಡೆಯುವ ಕಾರಣಗಳಿಗಾಗಿ ಅಪಾಯಕಾರಿ ಎಂದು ಇವುಗಳನ್ನು ವಿರೋಧಿಸುವವರು ಆಧಾರಗಳ ಸಮೇತ ವಾದಿಸುತ್ತಾರೆ.

ಸಾಂವಿಧಾನಿಕವಾಗಿ ದತ್ತವಾದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಮತಾಂತರ ನಿಷೇಧ ಕಾಯ್ದೆಯಿಂದ ಧಕ್ಕೆ ಉಂಟಾಗುತ್ತದೆ. ಭಾರತೀಯ ಸಂವಿಧಾನವು ಧರ್ಮವನ್ನು ಮುಕ್ತವಾಗಿ ಆಚರಿಸುವ, ಪ್ರತಿಪಾದಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಖಾತರಿಪಡಿಸುತ್ತದೆ (ಅನುಚ್ಛೇದ 25, 21 ಮತ್ತು 14). ಮತಾಂತರ ನಿರ್ಬಂಧಿಸುವ ಕಾನೂನುಗಳು, ವಿಶೇಷವಾಗಿ ಪೂರ್ವಾನುಮತಿಯಂತಹ ಅವಶ್ಯಕತೆಗಳನ್ನು ವಿಧಿಸಿದಾಗ, ಈ ಹಕ್ಕನ್ನು ಉಲ್ಲಂಘಿಸಬಹುದು ಮತ್ತು ಸ್ವಯಂಪ್ರೇರಿತ ಸಂವಾದಗಳನ್ನು ತಡೆಯಬಹುದು ಎಂದು ಕಾನೂನು ತಜ್ಞರು ಅಭಿಪ್ರಾಯಪಡುತ್ತಾರೆ. ಒಂದು ವಾದದ ಪ್ರಕಾರ, ಈ ಕಾಯ್ದೆ ಹಿಂತೆಗೆದುಕೊಳ್ಳುವಿಕೆ ಮಾತ್ರವೇ ಸಾಂವಿಧಾನಿಕವಾಗಿ ಪ್ರಾಮಾಣಿಕ ಆಯ್ಕೆಯಾಗಿದೆ.

ಕರ್ನಾಟಕ ಮತಾಂತರ ವಿರೋಧಿ ಕಾನೂನು ತಟಸ್ಥ ನಿಯಂತ್ರಕ ಕಾನೂನು ಅಲ್ಲ. ಅದು, ಅಲ್ಪಸಂಖ್ಯಾತ ಸಮುದಾಯಗಳನ್ನು ತಪ್ಪಿತಸ್ಥರೆಂದು ಪರಿಗಣಿಸುತ್ತದೆ. ಈ ಕಾನೂನನ್ನು ದುರುಪಯೋಗಪಡಿಸಿಕೊಳ್ಳಲೂಬಹುದು, ಬೆದರಿಕೆ ಒಡ್ಡಲೂ ಬಳಸಬಹುದು ಎಂಬುದು ಗಮನಾರ್ಹ.

ಮತಾಂತರ ನಿಷೇಧ ಕಾಯ್ದೆಯನ್ನು ರದ್ದುಪಡಿಸುವುದಕ್ಕಿಂತಲೂ ಅದನ್ನು ತಿದ್ದುಪಡಿ ಮಾಡಬಹುದು ಎನ್ನುವುದು ಕಾಂಗ್ರೆಸ್‌ನ ವಾದ. ಆದರೆ, ಅಂತಹ ಕಾಯ್ದೆಯನ್ನು ತಿದ್ದುಪಡಿ ಮಾಡುವುದು ಅದರ ದೋಷಪೂರಿತ ಪ್ರಮೇಯವನ್ನು ಕಾನೂನುಬದ್ಧಗೊಳಿಸುತ್ತದೆ ಅಷ್ಟೇ. ಕಾನೂನನ್ನು ಹಿಂತೆಗೆದುಕೊಳ್ಳುವಿಕೆಯು ಅಲ್ಪಸಂಖ್ಯಾತರ ಸಾಂವಿಧಾನಿಕ ಸ್ವಾತಂತ್ರ್ಯವನ್ನು ಕಾಪಾಡಲು ಕರ್ನಾಟಕದ ಬದ್ಧತೆಯನ್ನು ಎತ್ತಿಹಿಡಿಯುತ್ತದೆ. ಅಂತೆಯೇ ಅಲ್ಪಸಂಖ್ಯಾತ ಸಮುದಾಯಗಳಲ್ಲಿ ನ್ಯಾಯ ವಿತರಣೆಯ ವಿಶ್ವಾಸವನ್ನು ಪುನರ್ ಸ್ಥಾಪಿಸುತ್ತದೆ. ಪೊಲೀಸ್ ದುರುಪಯೋಗವನ್ನು ಕಡಿಮೆಗೊಳಿಸುತ್ತದೆ. ಈ ಕಾರಣಗಳಿಗಾಗಿ, ಕರ್ನಾಟಕ ಸರ್ಕಾರವು ಕಾಯ್ದೆಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು, ತಿದ್ದುಪಡಿ ಮಾಡಬಾರದು.

ಧರ್ಮವನ್ನು ಆಯ್ಕೆ ಮಾಡಿಕೊಳ್ಳುವುದು ಮಾನವನ ಮೂಲಭೂತ ಮಾನವ ಹಕ್ಕು ಮತ್ತು ವೈಯಕ್ತಿಕ ನಂಬಿಕೆಯ ವಿಷಯ ಎಂದು ಬಾಬಾಸಾಹೇಬ್ ಬಿ.ಆರ್. ಅಂಬೇಡ್ಕರ್ ನಂಬಿದ್ದರು. ಓರ್ವ ವ್ಯಕ್ತಿಯು ತನ್ನ ‘ಪೂರ್ವಜರ ಧರ್ಮ’ವು ಘನತೆ, ಸಮಾನತೆ ಮತ್ತು ನ್ಯಾಯ ಒದಗಿಸಲು ವಿಫಲವಾದರೂ ಅದಕ್ಕೆ ಬದ್ಧನಾಗಿರುತ್ತಾನೆ ಎಂಬ ಪರಿಕಲ್ಪನೆಯನ್ನು ಅಂಬೇಡ್ಕರ್ ತಿರಸ್ಕರಿಸಿದ್ದರು. ಅಂಬೇಡ್ಕರ್ ಚಿಂತನೆಗಳ ಹಿನ್ನೆಲೆಯಲ್ಲಿ, ಧಾರ್ಮಿಕ ಸ್ವಾತಂತ್ರ್ಯದ ಕಾರಣದಿಂದಾಗಿಯೂ ಮತಾಂತರ ನಿಷೇಧ ಕಾನೂನು ಸಂವಿಧಾನ ಬದ್ಧವಲ್ಲ.



ವಾಚಕರ ವಾಣಿ

ಹೋಬಳಿಯಲ್ಲಿ ಅಗ್ನಿಶಾಮಕ ಠಾಣೆ ಇರಲಿ

ಬೇಸಿಗೆ ಶುರುವಾಗಿದೆ. ಹಬ್ಬಿದ ಕಾಳ್ಗಿಚ್ಚು, ಬಣವೆ ಬೆಂಕಿಗಾಹುತಿ ಎಂಬ ಸುದ್ದಿಗಳು ಸಾಮಾನ್ಯವಾಗಿವೆ. ಕಾಡಿಗೆ ಬೆಂಕಿ ಬಿದ್ದರೆ ವನ್ಯಜೀವಿಗಳ ಬದುಕು ಸಂಕಷ್ಟಕ್ಕೆ ಸಿಲುಕುತ್ತದೆ; ಅಂತೆಯೇ ಸಾರ್ವಜನಿಕ ಆಸ್ತಿ ನಾಶವಾದರೆ ಜನರ ಬದುಕು ಬೀದಿಗೆ ಬೀಳುತ್ತದೆ. ಒಂದೆಡೆ ಬೆಂಕಿ ಅವಘಡಗಳು ಹೆಚ್ಚಾಗುತ್ತಿದ್ದರೆ, ಮತ್ತೊಂದೆಡೆ ತುರ್ತು ಸೇವೆಯಲ್ಲಿ ವಿಳಂಬವಾಗುತ್ತಿದೆ. ಪ್ರಸ್ತುತ ತಾಲ್ಲೂಕಿಗೊಂದು ಅಗ್ನಿಶಾಮಕ ಮತ್ತು ತುರ್ತು ಸೇವಾ ಠಾಣೆ ಇದೆ. ಇದರಿಂದ ಬೆಂಕಿ ಕಾಣಿಸಿಕೊಳ್ಳುವ ದೂರದ ಊರುಗಳಿಗೆ ತಲಪಲು ಅಗ್ನಿ ಶಾಮಕ ವಾಹನಗಳಿಗೆ ಒಂದು ತಾಸಿಗೂ ಹೆಚ್ಚಿನ ಸಮಯ ಬೇಕು. ಅಷ್ಟರೊಳಗೆ ಎಲ್ಲವೂ ಸುಟ್ಟು ಬೂದಿಯಾಗುತ್ತದೆ. ಹಾಗಾಗಿ, ಪ್ರತಿ ಹೋಬಳಿಗೊಂದು ಅಗ್ನಿ ಶಾಮಕ ಠಾಣೆ ತೆರೆದರೆ ಉತ್ತಮ.

ಸಂತೋಷ್ ಕುಮಾರ್ ಎಲ್., ಹಿರಿಯೂರು

ಕಾಡಾನೆ ಸಂಘರ್ಷ: ಶ್ರಮಿಕರು ಬಲಿಪಶು

ಚಿಕ್ಕಮಗಳೂರು, ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆಗಳ ಕಾಫಿತೋಟಗಳಲ್ಲಿ ಕೃಷಿ ಕಾರ್ಮಿಕರು ಕಾಡಾನೆಗಳ ದಾಳಿಗೆ ಬಲಿಯಾಗುತ್ತಿರುವುದು ಹೆಚ್ಚುತ್ತಿದೆ. ಅಭದ್ರತೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಜೀವನ ಮತ್ತು ಜೀವಕ್ಕೆ ರಕ್ಷಣೆ ಇಲ್ಲ. ದುಡಿಯುವ ಶ್ರಮಿಕರು ತೋಟಗಳಲ್ಲಿ, ಸ್ವಂತ ಜಮೀನುಗಳಲ್ಲಿ ಜೀವಭಯದಿಂದ ಕೆಲಸ ಮಾಡಬೇಕಾದ ಪರಿಸ್ಥಿತಿಯಿದೆ. ಹೊರ ಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಬಂದಿರುವ ವಲಸೆ ಕಾರ್ಮಿಕರು ಸಮರ್ಪಕ ಸೌಕರ್ಯವಿಲ್ಲದೆ ಶೋಚನೀಯ ಸ್ಥಿತಿಯಲ್ಲಿ ದುಡಿಯುತ್ತಿದ್ದಾರೆ. ದುಡಿದು ತಿನ್ನುವವರು ಕಾಡುಪ್ರಾಣಿಗಳಿಗೆ ಬಲಿಯಾಗುತ್ತಿರುವುದು ನೋವಿನ ಸಂಗತಿ.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

‘ಎಐ’ ಸೃಜನಶೀಲತೆ ಕುಗ್ಗಿಸುವ ಅಸ್ತ್ರ

‘ಎಐ ಕಾಲದಲ್ಲಿ ಕವಿರಾಜಮಾರ್ಗ’ ಲೇಖನದಲ್ಲಿ (ಲೇ: ಅವಿನಾಶ್ ಗೋಪಾಲಕೃಷ್ಣ, ಪ್ರ.ವಾ., ಫೆ. 21) ಎತ್ತಿರುವ ಪ್ರಶ್ನೆಯು, ಎಐ ತಂತ್ರಜ್ಞಾನವು ತಂದೊಡ್ಡಬಹುದಾದ ಸಮಸ್ಯೆಗಳ ಬಗ್ಗೆ ಚಿಂತನೆಗೆ ಪ್ರೇರೇಪಿಸುತ್ತದೆ. ಮಾತೃಭಾಷೆಗಳ ಮೇಲಿನ ಎಐ ಪರಿಣಾಮ ಕುರಿತು ಚರ್ಚೆ ನಡೆಯದಿರುವುದು ದುರದೃಷ್ಟಕರ. ಕಾರ್ಪೊರೇಟ್ ಮಾದರಿಯಡಿ ನಿರ್ಮಿತವಾದ ಈ ತಂತ್ರಜ್ಞಾನ ತಿಳಿದೋ ಅಥವಾ ತಿಳಿಯದೆಯೋ ಭಾಷಾ ವೈವಿಧ್ಯಕ್ಕೆ ಧಕ್ಕೆ ತರಲಿದೆ. ನೃಪತುಂಗನ ಕಾಲದಲ್ಲಿ ಭಾಷಾ ಬೌದ್ಧಿಕತೆ ಸಮುದಾಯದ ಆತ್ಮವಿಶ್ವಾಸವಾಗಿತ್ತು. ಇಂದಿನ ಕಾಲದಲ್ಲಿ ಅದೇ ಆತ್ಮವಿಶ್ವಾಸವನ್ನು ತಂತ್ರಜ್ಞಾನದಿಂದ ಬಲಪಡಿಸುವ ಹೊಣೆಗಾರಿಕೆ ನಮ್ಮದಾಗಿದೆ. ಎಐ ಹೊಸ ಸಾಮ್ರಾಜ್ಯವಾಗಬಾರದು; ಅದು ಬಹುಭಾಷಾ ಸೃಜನಶೀಲತೆಯ ಮತ್ತು ಬಹುತ್ವದ ವೇದಿಕೆಯಾಗಬೇಕು. ಹಾಗೆಯೇ ಮೂಲಭೂತವಾಗಿ ಭಾಷೆ ಉದ್ಯೋಗದ ಸಾಧನವಲ್ಲ; ಅದು ನಾಗರಿಕತೆಯ ಚಿಂತನೆಯ ನೆಲೆ. ತಂತ್ರಜ್ಞಾನವು ವೈವಿಧ್ಯ ಮತ್ತು ಸೃಜನಶೀಲತೆಯನ್ನು ಕುಗ್ಗಿಸುವ ಶಕ್ತಿಯಾಗಬಾರದು; ಅದನ್ನು ಬಲಪಡಿಸುವ ಸಾಧನವಾಗಬೇಕು.

ಎಂ. ರವೀಂದ್ರ, ಬೆಂಗಳೂರು

ಆಪ್ತ ಸಹಾಯಕರ ಅಕ್ರಮ ಕೊನೆಯಾಗಲಿ

ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ಹಾಗೂ ಅವರ ಆಪ್ತ ಸಹಾಯಕ ಮಂಜುನಾಥ ವಾಲ್ಮೀಕಿ ಲಂಚ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ. ಇಂತಹ ಘಟನೆಗಳು ಒಂದು ಕ್ಷೇತ್ರಕ್ಕೆ ಸೀಮಿತವಾಗಿಲ್ಲ. ಹಲವು ಕ್ಷೇತ್ರಗಳಲ್ಲಿ ಕೆಲವು ಆಪ್ತ ಸಹಾಯಕರು ಅಧಿಕಾರ ದುರುಪಯೋಗಪಡಿಸಿಕೊಂಡು ಶಾಸಕರಂತೆಯೇ ವರ್ತಿಸುತ್ತಾರೆ. ಸರ್ಕಾರಿ ಕಚೇರಿಗಳಲ್ಲಿ ದರ್ಪ ತೋರುವುದೂ ಉಂಟು. ಜನರಿಗೆ ನ್ಯಾಯಯುತವಾಗಿ ಸರ್ಕಾರಿ ಸೌಲಭ್ಯ ತಲಪಬೇಕು. ಆದರೆ, ಹಣ ನೀಡುವವರಿಗೆ ಅಥವಾ ತಮ್ಮ ಇಷ್ಟದವರಿಗೆ ಅನುಕೂಲ ಕಲ್ಪಿಸುತ್ತಾರೆ. ಜನರು ಸಮಸ್ಯೆಗಳಿಗೆ ಪರಿಹಾರ ಹುಡುಕುವಾಗ ಇಂತಹವರ ವರ್ತನೆಗಳಿಂದ ನಿರಾಶರಾಗುತ್ತಿದ್ದಾರೆ. ಹಾಗಾಗಿ, ಆಪ್ತ ಸಹಾಯಕರ ಅಕ್ರಮಗಳಿಗೆ ಸರ್ಕಾರ ಕಡಿವಾಣ ಹಾಕಬೇಕಿದೆ.

ಪ್ರದೀಪ ಬಿಸಲನಾಯಿಕ, ಚಿಕ್ಕೋಡಿ

ನೀರಿನ ಬಳಕೆ; ಎಲ್ಲರಿಗಿರಲಿ ಹೊಣೆಗಾರಿಕೆ

ಬೆಂಗಳೂರು ಸೇರಿದಂತೆ ರಾಜ್ಯದ ಹಲವು ನಗರ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಾರಕಕ್ಕೇರಿದೆ. ರಾಜಧಾನಿಯ ಕೆಲವೆಡೆ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ರಾಜ್ಯದ ಕೆಲವು ಪ್ರದೇಶಗಳ ಚಿತ್ರಣವು ಇದಕ್ಕಿಂತ ಹೊರತಾಗಿಲ್ಲ. ಈ ವರ್ಷ ವಾಡಿಕೆಗಿಂತಲೂ ಬಿಸಿಲು ಅಧಿಕವಾಗಿರಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಇದರಿಂದ ಕುಡಿಯುವ ನೀರಿಗೆ ಹಾಹಾಕಾರದ ಸ್ಥಿತಿ ತಲೆದೋರುವ ಸಾಧ್ಯತೆಯಿದೆ. ನಾಗರಿಕರು ಜಲಮೂಲಗಳ ಸಂರಕ್ಷಣೆಗೆ ಒತ್ತು ನೀಡಬೇಕು. ನೀರಿನ ಸದ್ಬಳಕೆಗೆ ಮುಂದಾಗಬೇಕು.


ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ಮಾತೃಭಾಷೆಯಿಂದ ಬೇರೆ ಭಾಷೆಗೂ ಶಕ್ತಿ

ಹಿಂದಿ ಉತ್ತೇಜಿಸಿದರೆ ಎಲ್ಲ ಭಾಷೆಗಳಿಗೂ ಬಲ ಸಿಗಲಿದೆಯೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿರುವುದು ಹಾಸ್ಯಾಸ್ಪದ. ಹಿಂದಿ ಮಾತನಾಡುವುದರಿಂದ ಇತರ ಭಾಷೆಗಳು ಗಟ್ಟಿಗೊಳ್ಳುವುದಿಲ್ಲ. ಮಾತೃಭಾಷೆಯನ್ನು ಉತ್ತೇಜಿಸಿದರಷ್ಟೆ ಉಳಿದೆಲ್ಲ ಭಾಷೆಗಳು ಗಟ್ಟಿಗೊಳ್ಳುತ್ತವೆ. ಆರಂಭದ ಶಿಕ್ಷಣ ಮಾತೃಭಾಷೆ ಮೂಲಕ ದಕ್ಕುವಂತಾದರೆ ಮಕ್ಕಳ ಕಲಿಕೆಗೆ ಭದ್ರಬುನಾದಿ ಸಿಕ್ಕಿದಂತಾಗುತ್ತದೆ. ತಾಯ್ನುಡಿ ಮೂಲಕ ಕಲಿತದ್ದು ನೇರವಾಗಿ ಎದೆಗಿಳಿಯುತ್ತದೆ. ಮಾತೃಭಾಷೆಯಲ್ಲಿ ಕಲಿಕೆಯ ಮೂಲಕ ಓದು-ಬರಹದಲ್ಲಿ ಸರಾಗ ಸಾಮರ್ಥ್ಯಗಳಿಸಿದ ನಂತರದ ಹಂತದಲ್ಲಿ ಹಿಂದಿ, ಇಂಗ್ಲಿಷ್ ಮತ್ಯಾವುದೇ ಭಾಷೆ ಕಲಿಯುವುದು ಸೂಕ್ತ. ಸಚಿವರು ಹೇಳಿದಂತೆ ಹಿಂದಿ ಉತ್ತೇಜಿಸುವುದರಿಂದ ಇತರ ಭಾಷೆಗಳು ಗಟ್ಟಿಗೊಳ್ಳುವುದಿಲ್ಲ; ಬದಲಿಗೆ ಅವು ಮೂಲೆಗುಂಪಾಗುತ್ತವೆ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಚುರುಮುರಿ



ಹಾಲಕ್ಕಿ ನುಡಿತೈತೆ

• ಲಿಂಗರಾಜು ಡಿ.ಎಸ್.

ವತ್ತಾರೇಗೆ ಹಾಲಕ್ಕಿಯೊಂದು ಮಸಣದ ಮರದ ಮ್ಯಾಲೆ ಕೂಕಂದು ಯೋಚನೆ ಮಾಡ್ತಿತ್ತು. ಬುಡುಬುಡಿಕಣ್ಣ ಬ್ಯಾರೆ ‘ಇನ್ನು ಮ್ಯಾಲೆ ನಾನು ಶಕುನ ನುಡಿಯಕ್ಕೆ ಹೋಗ್ಕುಲ್ಲ ಕಣವ್ವ. ಬೀದಿನಾಯಿಗಳು ಅಟ್ಟಿಸಿಕ್ಯಬತ್ತವೆ’ ಅಂತ ನೊಂದಕತಿದ್ದ. ಅಲ್ಲದುರೆ ತಾನೆ ಈ ಕಂಟಕದ ಕಾಲದೇಲಿ ಶಕುನ ನುಡಿಯಕೇನದೆ ಅಂದ್ಕತಿತ್ತು ಹಾಲಕ್ಕಿ.

ಆಟೊತ್ತಿಗೆ ಇನ್ನೊಂದು ಹಾಲಕ್ಕಿ ಪುರ‍್ರನೆ ಹಾರಿ ಬಂದು ನಮ್ಮ ಹಾಲಕ್ಕಿ ಪಕ್ಕ ಕೂತುಗಂದು ಮಾತಿಗೆ ಶುರು ಹಚ್ಚಿಗ್ಯತ್ತು.

‘ಇದ್ಯಾಕೆ ನನತಾಯಿ, ಮುಂಗೋಳಿ ಕೂಗೋ ಹೊತ್ತಲ್ಲಿ ಹಿಂಗೆ ಅಡ್ಡಗ್ಯಾನಾಗಿ ಕೂತಿದ್ದಯ್?’ ಅಂತು.

‘ಕಾಲ ಕೆಟ್ಟೋತು ಕನಕ್ಕ. ಶಾಸಕರೇ ಜುಲುಮೆ ಮಾಡಿ ಲಂಚ ಈಸುಗಂದು ಸಿಗೇಬಿದ್ದವರಂತೆ. ಕಮೀಶನ್ ಆತು, ಈಗ ಎಲ್ಲಾದರಲ್ಲೂ ಸಟ್ಟುಗ ಅಲ್ಲಾಡ್ಸಕ್ಕೋತಾವೆ’.

‘ದಿಟ ಕನೆ. ಖಾದಿ ಇಕ್ಕ್ಯಂದವರು ಗಾಂಧಿ ಹೆಸರನೇ ಗೈರುವಿಲೆ ಮಾಡಿಬುಟ್ಟವ್ರೆ. ಖಾಕಿ ಇಕ್ಕ್ಯಂದೋರು ಚಾಕರಿ ಬುಟ್ಟು ಪೋಕರಿಗಳಾಗ್ಯವರೆ. ಊರೊಟ್ಟಿನ ಜನಕೆಲ್ಲಾ ಧರ್ಮ-ಕರ್ಮ ಹೇಳಬೇಕಾದ ಕಾವಿ ಇಕ್ಕಿದವು ಅಲಾಯಿದವಾದ ಕ್ಯಾಮೇಲೆ ಕಳೆದೋಗ್ಯವೆ’.

‘ಜನ ಬೂವಕ್ಕೆ ಬಾಗಾಡಿಕ್ಯಂದು ವತ್ತರಿಕೆಂಗೆ ರಾತ್ರಿಗೆಂಗೆ ಅಂತ ಬದುಕು ನೀಸ್ತಾವ್ರೆ. ಖಾಕಿ, ಖಾವಿ, ಖಾದಿಯೋರು ಲಂಗುಲಗಾಮು, ಅಂಕೆಶಂಕೆ ಇಲ್ಲದೇ ತೆವಲಿಗೋಸ್ಕರಾನೆ ಬದುಕ್ತಾವೆ ಅನ್ನಿಸ್ತದೆ ಕನೆ’.

‘ತೆವಲು ಅಂದಾಗ ನೆಪ್ಪಾತು ನೋಡು. ಶಿರಸೀಲಿ ಒಬ್ಬ ಪಂಚಾಯಿತಿ ಸದಸ್ಯ ಆಯಪ್ಪನಿಗೆ ಬಂದ ಗೌರವಧನದಲ್ಲಿ ಬಸ್ ನಿಲ್ದಾಣ ಮಾಡಿಸ್ಯವನಂತೆ. ರಾಜಕೀಯದವು ಎಲ್ಲೋಗಿ ಕುಂತವ್ರೋ?’

‘ಅವುಗಳ ಹಣೆಬರಾವು ಅವು ಅನುಭೋಗಿಸ್ತವೆ ಬುಡೆ. ಯಂಗನ್ನ ಆಗಲಿ ಒಂದು ಬುದ್ಧಿ ಮಾತು ಹೇಳಿಬುಡವ್ವ’.

‘ನನ ತಾಯಿ. ನಮ್ಮ ಹಾಲಕ್ಕಿ ಶಕುನಕ್ಕೂ ಟ್ಯಾಕ್ಸು ಜಡಿದುಬುಡ್ತರೆ ಕನೆ. ಆದ್ರೂ ಖಾಕಿ, ಖಾದಿಗಳಿಗೆ ಒಂದು ಮಾತೇಳತಿನಿ. ಸಿಕ್ಕಿದ್ದಕ್ಕೆ ಖುಷಿ ಪಡಬ್ಯಾಡಿ, ಸಿಗಲಿಲ್ಲಾಂತ ಬೈಬ್ಯಾಡಿ. ಆತ್ಮಾವಲೋಕನ ಮಾಡಿಕ್ಯಳಿ, ಆತ್ಮವಂಚನೆ ಮಾಡಿಕ್ಯಬ್ಯಾಡಿ ಅಂತ ಹಾಲಕ್ಕಿ ನುಡಿತೈತೆ’ ಎಂದು ಹಾಲಕ್ಕಿ ಗುಕ್, ಗುಕ್ ಅಂದ್ಕಂದು ಹಾರೋಯ್ತು.

ಸಂಗತ

ಮಲೆನಾಡು: ರೈತರ ಬದುಕಲ್ಲಿ ಮಂಗನಾಟ


ಹಲವು ಸಂಕಷ್ಟಗಳಿಂದ ಕಂಗೆಟ್ಟಿರುವ ಮಲೆನಾಡಿನ ರೈತರನ್ನೀಗ ಮಂಗಗಳೂ ಕಾಡುತ್ತಿವೆ. ಮಂಗಾಟದಿಂದ ಆಗುತ್ತಿರುವ ಬೆಳೆಹಾನಿ ರೈತರನ್ನು ಗಾಸಿಗೊಳಿಸಿದೆ.

• ಡಾ. ಮುರಳೀಧರ ಕಿರಣಕೆರೆ

‘ಮಲೆನಾಡ ರೈತರ ಬದುಕು ಬೀದಿ ಪಾಲಾಗುವ ದಿನ ಬಹಳ ದೂರವೇನಿಲ್ಲ’ ಎಂದು ಹತಾಶೆಯಿಂದ ಹೇಳಿದರು ಆ ಪರಿಚಿತ ಕೃಷಿಕರು. ಎದುರಿನಲ್ಲಿ ಅವರ ಎರಡು ಜೇನು ಪೆಟ್ಟಿಗೆಗಳು ಅಪಘಾತಕ್ಕೆ ತುತ್ತಾದಂತೆ ಬಾಯಿ ತೆರೆದುಕೊಂಡು ಬಿದ್ದಿದ್ದವು! ‘ಇದೆಲ್ಲಾ ಹೇಗಾಯ್ತು?’ ಎಂದು ನಾನು ಆತಂಕದಿಂದ ಕೇಳುತ್ತಿದ್ದಂತೆ, ‘ಎಲ್ಲಾ ಶತ್ರುಗಳ ಕಾಟ’ ಎನ್ನುತ್ತಾ ಅಡಿಕೆ ಮರಗಳ ಮೇಲೆ ಕುಳಿತು ಇತ್ತಲೇ ನೋಡುತ್ತಿದ್ದ ಮಂಗಗಳ ಗುಂಪಿನತ್ತ ಬೊಟ್ಟು ತೋರಿದರು.

ಜೇನುತುಪ್ಪ ತಿನ್ನಲು, ಜೇನಿನ ಮೊಟ್ಟೆ ಮರಿಗಳನ್ನು ಮೆಲ್ಲಲು ಮಂಗಗಳು ತಮ್ಮದೇ ದಾರಿ ಕಂಡುಕೊಂಡಿವೆ. ಒಮ್ಮೆಲೆ ಪೆಟ್ಟಿಗೆಯ ಮೇಲೆ ಹಾರಿ ಅದನ್ನು ಬೀಳಿಸಿ, ಜೇನು ನೊಣಗಳ ದಾಳಿಗೆ ಸಿಗದಿರಲು ದೂರ ಓಡುತ್ತವೆ. ನೊಣಗಳು ಎಲ್ಲೆಡೆ ಚದುರಿದ ಬಳಿಕ ತುಪ್ಪ, ಮೊಟ್ಟೆಮರಿಗಳನ್ನು ಹೊತ್ತ ಜೇನಿನ ಹಲ್ಲೆಗಳನ್ನು ಹೊತ್ತೊಯ್ಯುತ್ತವೆ.

ಜೇನು ಮಾತ್ರವಲ್ಲ, ಮಲೆನಾಡಿನ ರೈತರ ಜೀವನೋಪಾಯದ ಮೇಲೆಯೂ ಮಂಗಗಳು ದಾಳಿ ನಡೆಸುತ್ತಿವೆ. ಮಲೆನಾಡಿನ ಆರ್ಥಿಕತೆಯ ಜೀವನಾಡಿ ಅಡಿಕೆ ಬೆಳೆಯು ಕೊಳೆರೋಗ, ಎಲೆಚುಕ್ಕೆ, ಹಳದಿ ರೋಗಗಳಿಂದ ಈಗಾಗಲೇ ತತ್ತರಿಸಿದೆ. ಅಡಿಕೆಯ ಜೊತೆ ಜೊತೆಗೆ ಒಂದಷ್ಟು ಮಿಶ್ರ ಬೆಳೆಗಳಿಂದಲಾದರೂ ಬದುಕು ಕಟ್ಟಿಕೊಳ್ಳುವ ರೈತರ ಪ್ರಯತ್ನಕ್ಕೆ ನಾಡು ಹೊಕ್ಕಿರುವ ಮಂಗಗಳು ಸವಾಲಾಗಿವೆ. ಅವು ತಿನ್ನುವುದಕ್ಕಿಂತಲೂ ಹಾಳು ಮಾಡುವುದೇ ಜಾಸ್ತಿ. ತೆಂಗಿನ ಸಿಪ್ಪೆ ಸಿಗಿದು ಎಳನೀರು ಕುಡಿಯುತ್ತವೆ. ಭತ್ತ, ಕಾಫಿ, ಕೋಕೊ, ಏಲಕ್ಕಿ, ಬಾಳೆ, ಮಾವು, ಹಲಸು, ಚಿಕ್ಕು, ಪಪ್ಪಾಯಿ, ಬೆಣ್ಣೆಹಣ್ಣು, ತರಕಾರಿ, ಎಲ್ಲದರ ಮೇಲೂ ದಾಳಿ ಮಾಡುತ್ತಾ ರೈತರಿಗೆ ದುಃಸ್ವಪ್ನವಾಗಿವೆ; ಮಲೆನಾಡಿನ ಆರ್ಥಿಕತೆಯನ್ನೇ ಬುಡಮೇಲು ಮಾಡುತ್ತಿವೆ. ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಯಲ್ಲಿ ಇವುಗಳ ಉಪಟಳ ಮೇರೆ ಮೀರಿದೆ.



ಅಡಿಕೆಕಾಯಿ ಮಂಗಗಳ ಆಹಾರವೇ ಅಲ್ಲ. ಎಳೆಯ ಚಿಗುರು ಕಾಯಿಗಳನ್ನು ಕಿತ್ತು ಬುಡದ ಮೃದುಭಾಗವನ್ನು ಚೀಪಿ ಎಸೆಯುತ್ತವೆ. ಕಾಯಿಗಳನ್ನು ಚೀಪಿ ಚೀಪಿ ಮತ್ತೇರಿಸಿಕೊಂಡ ಮಂಗಗಳು ಮತ್ತಷ್ಟು ಕಾಯಿಗಳನ್ನು ಕಿತ್ತು ಹಾಕುತ್ತವೆ. ಅಡಿಕೆ ಸಿಂಗಾರಕ್ಕೆ ಹಾನಿ ಮಾಡುತ್ತವೆ. ಗಾಯಗೊಂಡ ಗೊನೆ ರೋಗಾಣುಗಳ ನೆಲೆಯಾಗುತ್ತದೆ. ಮದ ಏರಿಸಿಕೊಂಡ ಮಂಗಗಳು ಮರದ ಸುಳಿಯನ್ನೇ ಮುರಿದು ಹಾಕುವುದುಂಟು. ಒಂದೊಂದು ಮಂಗವೂ ಪ್ರತಿನಿತ್ಯ ನೂರಾರು ಕಾಯಿಗಳನ್ನು ಎಳೆದು ಹಾಕುತ್ತದೆ. ಅವುಗಳ ಗುಂಪು ದೊಡ್ಡದಾಗಿದ್ದಷ್ಟೂ ನಷ್ಟದ ಪ್ರಮಾಣ ಏರುತ್ತದೆ. ಅಡಿಕೆ ಮರದ ಬುಡದಲ್ಲಿ ಪ್ರತಿನಿತ್ಯ ಬೀಳುವ ಎಳೆಗಾಯಿಗಳ ಹಾಸನ್ನು ನೋಡುವಾಗ ರೈತರ ಹೊಟ್ಟೆ ಉರಿಯದೇ ಇದ್ದೀತೆ?

ತೆಂಗು, ಏಲಕ್ಕಿ, ಕಾಫಿ, ಕೋಕೊದ ಮೇಲೂ ಇಂತಹದ್ದೇ ದಾಳಿ. ಆಸರೆಯ ಮರಕ್ಕೆ ಹಬ್ಬಿಸಿರುವ ವೀಳ್ಯದೆಲೆ, ಕಾಳುಮೆಣಸಿನ ಬಳ್ಳಿಗಳೂ ಮಂಗಗಳ ದಾಳಿಗೆ ತುತ್ತಾಗಿ ನೆಲಕ್ಕೊರಗುತ್ತಿವೆ. ಇನ್ನು ಹಣ್ಣು, ತರಕಾರಿಗಳನ್ನು ರಕ್ಷಿಸಿಕೊಳ್ಳುವುದಂತೂ ಅಸಾಧ್ಯವೇ ಸರಿ. ಇದರಿಂದಾಗಿ ರೈತರ ಆದಾಯದ ಚಿಕ್ಕ ಮೂಲಗಳು ಬತ್ತಿ ಹೋಗಿವೆ. ಈಗ ಮಂಗಗಳ ಕಾಟದಿಂದ ರೋಸಿ ಹೋಗಿ ಬೆಳೆಯುವುದನ್ನೇ ನಿಲ್ಲಿಸುತ್ತಿದ್ದಾರೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಮಂಗಗಳನ್ನು ಕೊಲ್ಲುವುದು, ಹಿಂಸಿಸುವುದು, ಕೂಡಿಹಾಕುವುದು, ಸಾಕುವುದು ಶಿಕ್ಷಾರ್ಹ ಅಪರಾಧ. ಕಾಟಿ, ಆನೆಗಳು ನುಗ್ಗಿ ಬೆಳೆ ನಾಶವಾದ ಸಂದರ್ಭದಲ್ಲಿ ಅರಣ್ಯ ಇಲಾಖೆ ಪರಿಹಾರ ನೀಡುತ್ತದೆ. ಹುಲಿ, ಚಿರತೆ ದಾಳಿಯಿಂದ ಜಾನುವಾರು ಮೃತಪಟ್ಟಾಗಲೂ ಮಾಲೀಕರಿಗೆ ಪರಿಹಾರ ದೊರೆಯುತ್ತದೆ. ಆದರೆ, ಮಂಗಗಳು ವನ್ಯಜೀವಿಗಳಾದರೂ ಅವುಗಳಿಂದಾಗುವ ಬೆಳೆ ನಷ್ಟಕ್ಕೆ ಯಾವುದೇ ಪರಿಹಾರವಿಲ್ಲ.

ಮಂಗಗಳ ಉಪಟಳ ನಿಯಂತ್ರಿಸಲು ಕಾವಲು ಕಾಯುವುದು, ಪಟಾಕಿ ಸಿಡಿಸುವುದು, ನೈಲಾನ್ ಬಲೆ, ಏರ್‌ಗನ್ ಬಳಕೆ, ಲೇಸರ್ ಲೈಟ್, ಮೀನಿನೆಣ್ಣೆಯ ವಾಸನೆ ಹರಡಿಸುವುದು, ಮೆಣಸಿನ ಹೊಗೆ ಹಾಕುವಂತಹ ಕ್ರಮವು ಅವುಗಳ ಬುದ್ಧಿವಂತಿಕೆಯ ಮುಂದೆ ಹೆಚ್ಚು ದಿನ ಬಾಳುವುದಿಲ್ಲ. ಇನ್ನು ಅವುಗಳಿಗೆ ವಾಸಸ್ಥಾನ, ಆಹಾರ ಕಲ್ಪಿಸುವ ‘ಮಂಕಿ ಪಾರ್ಕ್’ಗಳ ನಿರ್ಮಾಣವೂ ಪ್ರಾಯೋಗಿಕವಲ್ಲ. ನಾಡೊಳಗಿನ ಮಂಗಗಳನ್ನು ನಿಯಮಾನುಸಾರ ಹಿಡಿದು ದಟ್ಟ ಕಾಡೊಳಗೆ ಬಿಡುವುದೊಂದೇ ನಮ್ಮೆದುರುಗಿರುವ ಏಕೈಕ ಪರಿಹಾರದ ಮಾರ್ಗ. ಹೀಗೆ ಮಾಡುವಲ್ಲಿ ಹಲವು ಸವಾಲುಗಳು, ಅಪಾಯಗಳು ಇವೆ. ಹಿಡಿದ ಜಾಗದಿಂದ ಕನಿಷ್ಠ 10–15 ಕಿ.ಮೀ. ದೂರದ ಅರಣ್ಯದಲ್ಲಿ ಬಿಡಬೇಕು. ಇಲ್ಲದಿದ್ದರೆ ಅವು ಮರಳಿ ಮೊದಲ ಜಾಗಕ್ಕೆ ಬರುವ ಸಂಭವ ಇದೆ. ಸನಿಹದಲ್ಲಿ ಹಳ್ಳಿಗಳಿದ್ದರೆ ಮಂಗಗಳು ಅಲ್ಲಿಗೆ ನುಗ್ಗಬಹುದು. ವಿವಿಧೆಡೆಯಿಂದ ತಂದು ಬಿಟ್ಟ ಮಂಗಗಳು, ಅಲ್ಲಿ ಮೊದಲಿನಿಂದಲೂ ವಾಸವಾಗಿರುವ ಗುಂಪುಗಳ ನಡುವೆ ಸಂಘರ್ಷ ನಡೆಯಬಹುದು. ಮಾನವನ ಆಹಾರ, ನಾಡಿನ ಜೀವನಕ್ಕೆ ಹೊಂದಿಕೊಂಡ ಮಂಗಗಳು ಕಾಡಿನಲ್ಲಿ ನೈಸರ್ಗಿಕವಾಗಿ ದೊರೆಯುವ ಸಸ್ಯದ ಚಿಗುರುಗಳು, ಹೂವು, ಹಣ್ಣು, ಕಾಯಿಗಳಂತಹ ಆಹಾರವನ್ನು ಹುಡುಕಿ ತಿನ್ನುವುದು ಕಷ್ಟವಾಗಬಹುದು. ಇದರಿಂದ ಸೊರಗುವ, ಹಸಿವೆಯಿಂದ ಸಾಯುವ ಇಲ್ಲವೇ ಹತ್ತಿರದ ಹಳ್ಳಿಗಳನ್ನು ಹುಡುಕಿ ಹೋಗುವ ಸಂಭವವಿದೆ.

ಅಪಾಯಗಳು ಇದ್ದರೂ, ರೈತರ ಹಿತದೃಷ್ಟಿ, ಆಹಾರ ಭದ್ರತೆ, ಸಾಮಾಜಿಕ, ಆರ್ಥಿಕ ಸ್ವಾಸ್ಥ್ಯದ ನಿಟ್ಟಿನಲ್ಲಿ ಮಂಗಗಳನ್ನು ಕಾಡಿಗೆ ಬಿಡುವ ಕಠಿಣ ಕ್ರಮದ ಅನಿವಾರ್ಯತೆ ಇದೆ. ಮೂಲಭೂತವಾಗಿ ಮಾನವನ ದುರಾಸೆಯೇ ವನ್ಯಜೀವಿಗಳೊಂದಿಗಿನ ಈ ಪರಿಯ ಸಂಘರ್ಷಕ್ಕೆ ಕಾರಣವಾಗಿದ್ದರೂ, ಪ್ರಾಣಿಗಳ ಹಕ್ಕುಗಳಿಗೆ ಕೊಡುವ ಒತ್ತು ರೈತರ ಬದುಕುವ ಹಕ್ಕನ್ನು ಕಸಿಯಬಾರದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಣಜಿ ಫೈನಲ್ ಪ್ರವೇಶ

ಕಣಿವೆ ರಾಜ್ಯದ ಚಾರಿತ್ರಿಕ ಸಾಧನೆ

ಕ್ರಿಕೆಟ್ ಪ್ರೇಮದ ಕಾಶ್ಮೀರ



ಜಮ್ಮು ಮತ್ತು ಕಾಶ್ಮೀರದ ಕ್ರಿಕೆಟ್ ತಂಡ ಈ ಬಾರಿಯ ರಣಜಿ ಟ್ರೋಫಿ ಫೈನಲ್‌ಗೆ ಲಗ್ಗೆ ಇಡುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ. 67 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ದೇಶೀಯ ಕ್ರಿಕೆಟ್‌ನ ಪ್ರತಿಷ್ಠಿತ ಟೂರ್ನಿಯಲ್ಲಿ ಪ್ರಶಸ್ತಿ ಹಂತಕ್ಕೆ ತಲುಪಿದೆ. ಮಂಗಳವಾರದಿಂದ ಆರಂಭವಾಗಲಿರುವ ಫೈನಲ್‌ನಲ್ಲಿ ಅದು ಕರ್ನಾಟಕ ತಂಡವನ್ನು ಎದುರಿಸಲಿದೆ. ಭಯೋತ್ಪಾದನೆ, ನಿರಂತರವಾಗಿ ನಡೆಯುತ್ತಿದ್ದ ಹಿಂಸಾಚಾರಗಳು ಜಮ್ಮು ಕಾಶ್ಮೀರದಲ್ಲಿ ಕ್ರಿಕೆಟ್ ಸೇರಿದಂತೆ ಎಲ್ಲ ಕ್ರೀಡೆಗಳೂ ಹಿನ್ನಡೆ ಅನುಭವಿಸುವಂತೆ ಮಾಡಿದ್ದವು. ಒಂದೂವರೆ ದಶಕದಿಂದ ಅಲ್ಲಿನ ಕ್ರಿಕೆಟ್ ಚಿತ್ರಣ ಬದಲಾಗುತ್ತಾ ಬಂದಿದ್ದು, ಈ ವರ್ಷದ ರಣಜಿ ಟೂರ್ನಿಯಲ್ಲಿ ಅಲ್ಲಿನ ಕ್ರಿಕೆಟಿಗರ ಪ್ರದರ್ಶನ ಈ ಆಟಕ್ಕೆ ಹೊಸ ದಿಕ್ಕು ತೋರಿದೆ

• ಗಿರೀಶ ದೊಡ್ಡಮನಿ

ಜಮ್ಮು–ಕಾಶ್ಮೀರದ ಮಣ್ಣಿಗೂ, ಕ್ರಿಕೆಟ್ ಆಟಕ್ಕೂ ಸರಿಸುಮಾರು ಮೂರು ಶತಮಾನಗಳಷ್ಟು ಹಳೆಯ ನಂಟಿದೆ. ಆಗಾಧವಾಗಿ ಬೆಳೆದಿರುವ ಕ್ರಿಕೆಟ್ ಆಟದಲ್ಲಿ ಬ್ಯಾಟರ್‌ಗಳು ಇಲ್ಲಿಯವರೆಗೆ ಲಕ್ಷಾಂತರ ರನ್‌ಗಳನ್ನು ಹರಿಸಿದ್ದಾರೆ. ಅದರಲ್ಲಿ ಕಾಶ್ಮೀರ ಕಣಿವೆಯಲ್ಲಿ ಸಿದ್ಧವಾದ ಬ್ಯಾಟ್‌ಗಳಿಂದ ಹರಿದ ರನ್‌ಗಳದ್ದು ಸಿಂಹಪಾಲಿದೆ.

ಈ ಕಣಿವೆಯಲ್ಲಿ ಬೆಳೆಯುವ ವಿಶೇಷ ಮರಗಳ ಕಟ್ಟಿಗೆ ಮತ್ತು ನಾರುಗಳಲ್ಲಿ ಬ್ಯಾಟ್‌ಗಳನ್ನು ತಯಾರಿಸಲಾಗುತ್ತದೆ. ಇವುಗಳು ಬಹುಕೋಟಿ ಉದ್ಯಮವಾಗಿಯೂ ಇದು ಬೆಳೆದಿದೆ. ಜಗತ್ಪ್ರಸಿದ್ಧ 'ಇಂಗ್ಲೆಂಡ್ ಮತ್ತು ಕಾಶ್ಮೀರ ವಿಲೋಗಳು (ಬ್ಯಾಟ್) ಸುಪ್ರಸಿದ್ಧ. ಸಚಿನ್ ತೆಂಡೂಲ್ಕರ್, ಯುವರಾಜ್ ಸಿಂಗ್, ಮಹೇಂದ್ರಸಿಂಗ್ ಧೋನಿ ಸೇರಿದಂತೆ ಹಲವು ಬ್ಯಾಟರ್‌ಗಳು ಇಲ್ಲಿಯ ಬ್ಯಾಟ್‌ಗಳನ್ನು ತಮ್ಮ ವೃತ್ತಿಜೀವನದಲ್ಲಿ ಬಳಸಿದ್ದಾರೆ.



ಅಬ್ದುಲ್ ಸಮದ್

ಇಂತಹ ರಾಜ್ಯದ ಕ್ರಿಕೆಟ್ ತಂಡ ಇದೇ ಮೊದಲ ಸಲ 'ದೇಶಿ ಕ್ರಿಕೆಟ್ ರಾಜ'ನೆಂದೇ ಕರೆಸಿಕೊಳ್ಳುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿದೆ. ಹುಬ್ಬಳ್ಳಿಯಲ್ಲಿ ಮಂಗಳವಾರದಿಂದ ಕರ್ನಾಟಕ ತಂಡದ ಎದುರು ಕಣಕ್ಕಿಳಿಯಲಿದೆ. ಕ್ರಿಕೆಟ್ ಇತಿಹಾಸ, ಪ್ರತಿಭೆಗಳು ಇದ್ದರೂ ಕಣಿವೆ ರಾಜ್ಯವು ಈ ಹಂತಕ್ಕೆ ಬರಲು ಏಳು ದಶಕ ಕಾಯಬೇಕಾಯಿತು. ಭಯೋತ್ಪಾದನೆ, ಹಿಂಸಾಚಾರಗಳಿಂದ ನಲುಗಿದ ರಾಜ್ಯದಲ್ಲಿ ಎಲ್ಲ ಕ್ಷೇತ್ರಗಳೂ ತೊಂದರೆ ಅನುಭವಿಸಿವೆ. ಅದರಲ್ಲಿ ಕ್ರೀಡಾ ಕ್ಷೇತ್ರವೂ ಸೇರಿದ್ದು, ಅದನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನಗಳು ನಡೆದಿವೆ. ಅದರ ಫಲವಾಗಿಯೇ ಇವತ್ತು ರಾಜ್ಯ ತಂಡವು ಈ ಮಟ್ಟಕ್ಕೆ ಬಂದು ನಿಂತಿದೆ.

1959–60ರ ರಣಜಿ ಋತುವಿನಲ್ಲಿ ಮೊದಲ ಸಲ ಜಮ್ಮು–ಕಾಶ್ಮೀರ ತಂಡವು ಆಡಿತು. ಆದರೆ, ಮೊದಲ ಗೆಲುವು ಸವಿಯಲು 23 ವರ್ಷ ಕಾಯಬೇಕಾಯಿತು. 1982–83ರ ಋತುವಿನಲ್ಲಿ ಸರ್ವಿಸಸ್ ತಂಡದ ಎದುರಿನ ಪಂದ್ಯದಲ್ಲಿ ಜಯಿಸಿತು. ಅದರ ನಂತರ ಆ ತಂಡ ಅಷ್ಟೇನೂ ಬಲಿಷ್ಠವಾಗಿರಲಿಲ್ಲ.

ರಾಜ್ಯದ ಶ್ರೀನಗರ ಹಾಗೂ ಜಮ್ಮು ನಗರಗಳಲ್ಲಿ ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್ ಪಂದ್ಯಗಳು ನಡೆದಂತಹ ಕ್ರೀಡಾಂಗಣಗಳು 90ರ ದಶಕದಲ್ಲಿಯೇ ಇದ್ದವು. ಆದರೆ ರಾಜ್ಯದ ಕಾನೂನು, ಸುವ್ಯವಸ್ಥೆ ಸರಿಯಿರದ ಕಾರಣ ಆಟಕ್ಕೆ ಹಿನ್ನಡೆಯಾಯಿತು. ಈ ನಡುವೆಯೂ ಇಲ್ಲಿಯ ಕ್ರಿಕೆಟಿಗರು ತಮ್ಮ ಪ್ರಯತ್ನವನ್ನು ಬಿಡಲಿಲ್ಲ. 15 ವರ್ಷಗಳ ಹಿಂದೆ ಕಾಶ್ಮೀರ ಕಣಿವೆಯ ಕ್ರಿಕೆಟ್ ಮಗ್ಗಲು ಬದಲಿಸಿತು.

ಬೇಡಿ ಪರ್ವ: 2011ರಲ್ಲಿ ಸ್ಪಿನ್ ದಿಗ್ಗಜ ಮತ್ತು ಭಾರತ ತಂಡದ ಮಾಜಿ ನಾಯಕ ಬಿಷನ್ ಸಿಂಗ್ ಬೇಡಿ ಅವರು ಜಮ್ಮು–ಕಾಶ್ಮೀರ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕವಾದರು. ಅವರ ಕಟ್ಟುನಿಟ್ಟಾದ ಕೋಚಿಂಗ್‌ನಿಂದಾಗಿ ಕಣಿವೆ ರಾಜ್ಯದ ಪ್ರತಿಭೆಗಳ ಆತ್ಮವಿಶ್ವಾಸ ಇಮ್ಮಡಿಯಾಯಿತು. ದೇಶಿ ಕ್ರಿಕೆಟ್‌ನ ದೊಡ್ಡ ತಂಡಗಳಿಗೂ ಸವಾಲೊಡ್ಡುವ ಸಾಮರ್ಥ್ಯ ಬೆಳೆಯಿತು.



ಬಿಷನ್ ಸಿಂಗ್ ಬೇಡಿ

'ನಮಗೆ ಟೂರ್ನಿಗಳಲ್ಲಿ ಭಾಗವಹಿಸುವುದೇ ದೊಡ್ಡದು ಎಂಬ ಮನೋಭಾವ ಇತ್ತು. ಆದರೆ ಕೋಚ್ ಆಗಿ ಬಂದ ಬೇಡಿ ಸರ್ ಅದನ್ನು ಬದಲಿಸಿದರು. ನಿಮಗೆ ಕೌಶಲ, ಪ್ರತಿಭೆಗಳಿವೆ. ಗೆಲ್ಲಲು ಪ್ರಯತ್ನಿಸಿ. ಎಲ್ಲವೂ ಸಾಧ್ಯವಿದೆ ಎಂದು ಬೆನ್ನು ತಟ್ಟಿದರು. ಆ ಮಾತುಗಳು ನಮ್ಮನ್ನು ಬದಲಿಸಿದ್ದವು' ಎಂದು ಕಾಶ್ಮೀರ ತಂಡದ ಬ್ಯಾಟರ್ ಇಯಾನ್ ದೇವ್ ಸಿಂಗ್ ಹಾಗೂ ಭಾರತ ತಂಡವನ್ನು ಏಕದಿನ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿದ್ದ ಪರ್ವೇಜ್ ರಸೂಲ್ ಅವರು ತಮ್ಮ ಸಂದರ್ಶನಗಳಲ್ಲಿ ಹೇಳಿದ್ದರು.

ಬೇಡಿ ಕೋಚ್ ಆಗಿದ್ದಾಗ ತಂಡದಲ್ಲಿ ಇಯಾನ್ ದೇವ್ ಸಿಂಗ್ ಆಡಿದ್ದರು. ಶತಕ ಕೂಡ ಗಳಿಸಿದ್ದರು. ಸಿಂಗ್ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 93 ಪಂದ್ಯಗಳಿಂದ 5,558 ರನ್ ಗಳಿಸಿದ್ದರು. ರಣಜಿ, ದುಲೀಪ್ ಟ್ರೋಫಿ ಟೂರ್ನಿಗಳಲ್ಲಿ ಆಡಿದ್ದರು. ನಂತರ ಅವರು ಅಮೆರಿಕದಲ್ಲಿ ನೆಲಸಿದರು. ಅಲ್ಲಿಯೂ ಅವರು ಕೆಲವು ತಂಡಗಳಿಗೆ ಕ್ರಿಕೆಟ್ ಆಡಿದರು. ಪರ್ವೇಜ್ ಅವರು ಕಾಶ್ಮೀರದಿಂದ ಭಾರತ ತಂಡದಲ್ಲಿ ಆಡಿದ ಮೊದಲ ಆಟಗಾರ. ಏಕದಿನ ಮತ್ತು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ್ದಾರೆ.



ಇಯಾನ್ ದೇವ್

ಪ್ರಸ್ತುತ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿರುವ ಮಿಥುನ್ ಮನ್ಹಾಸ್ ಕೂಡ ಕಾಶ್ಮೀರ ತಂಡದಲ್ಲಿ ಆಡಿದ್ದರು. ಅಲ್ಲದೇ ಅವರು ಜಮ್ಮು–ಕಾಶ್ಮೀರ ರಾಜ್ಯ ಕ್ರಿಕೆಟ್ ಸಂಸ್ಥೆ (ಜೆಕೆಸಿಎ) ಆಡಳಿತ ಸುಧಾರಣೆಗಾಗಿ ನೇಮಕ ಮಾಡಲಾಗಿದ್ದ ಅಡ್‌ಹಾಕ್ ಸಮಿತಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅವರಲ್ಲದೇ ಇತ್ತೀಚಿನ ವರ್ಷಗಳಲ್ಲಿ ಅಬೀದ್ ನಬಿ, ರಸಿಕ್ ದಾರ್, ಅಬ್ದುಲ್ ಸಮದ್, ವೇಗದ ಬೌಲರ್ ಉಮ್ರಾನ್ ಮಲಿಕ್, ಅಕೀಬ್ ನಬಿ ದಾರ್ ಮಿಂಚುತ್ತಿದ್ದಾರೆ.

ಅಕೀಬ್ ಆಟದ ಬಲ: ಈ ಸಲ ತಂಡವು ಫೈನಲ್ ತಲುಪಲು ಅಕೀಬ್ ನಬಿ ದಾರ್ ಅವರ ಪಾತ್ರ ದೊಡ್ಡದು. 29 ವರ್ಷದ ಈ ಬಲಗೈ ಮಧ್ಯಮವೇಗಿ ಈ ಋತುವಿನಲ್ಲಿ 55 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಇಂದೋರ್‌ನಲ್ಲಿ ನಡೆದಿದ್ದ ಕ್ವಾರ್ಟರ್‌ಫೈನಲ್‌ನಲ್ಲಿ ಬಲಿಷ್ಠ ಮಧ್ಯಪ್ರದೇಶ ತಂಡದ ಎದುರು ಎರಡೂ ಇನಿಂಗ್ಸ್‌ಗಳಲ್ಲಿ ಐದು ವಿಕೆಟ್ ಗೊಂಚಲು (ಒಟ್ಟು 12 ವಿಕೆಟ್) ಗಳಿಸಿದ್ದರು. ಕಲ್ಯಾಣಿಯಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಬಂಗಾಳದ ಎದುರು (87ಕ್ಕೆ5 ಮತ್ತು 36ಕ್ಕೆ4) ಒಟ್ಟು 9 ವಿಕೆಟ್ ಗಳಿಸಿದ್ದರು. ಈ ಟೂರ್ನಿಯಲ್ಲಿ ಅವರು ಒಟ್ಟು ಅರ್ಧಡಜನ್ 'ಪಂಚಗುಚ್ಛ' ಗಳಿಸಿದ್ದಾರೆ.



ಅಕೀಬ್ ನಬಿ ದಾರ್

ಪಾರಸ್ ಡೋಗ್ರಾ ನಾಯಕತ್ವದ ತಂಡವು 'ಡಿ' ಗುಂಪಿನಲ್ಲಿ ರಾಜಸ್ಥಾನ, ದೆಹಲಿ, ಹೈದರಾಬಾದ್ ತಂಡಗಳನ್ನು ಸೋಲಿಸಿತ್ತು. ಸೆಮಿಫೈನಲ್‌ನಲ್ಲಿ ಅಬ್ದುಲ್ ಸಮದ್ ಮತ್ತು ವಂಶಜ್ ಶರ್ಮಾ ಅವರು ಮಿಂಚಿದ್ದರು. ಪಾರಸ್ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 10 ಸಾವಿರಕ್ಕೂ ಹೆಚ್ಚು ರನ್ ಗಳಿಸಿರುವ ಅನುಭವಿ. ಈ ಋತುವಿನಲ್ಲಿ ಅವರ ನಾಯಕತ್ವವೂ ಹುರಿಗೊಂಡಿದೆ. ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡವನ್ನು ಎದುರಿಸಲು ಅವರ ತಂಡ ಸರ್ವಸನ್ನದ್ಧವಾಗಿದೆ.

2014ರಲ್ಲಿ ಮೊದಲ ಬಾರಿಗೆ ತಂಡವು ರಣಜಿ ನಾಕೌಟ್ ಪ್ರವೇಶಿಸಿತ್ತು. ಹೋದ ವರ್ಷವೂ ತಂಡ ಸೆಮಿಫೈನಲ್ ಪ್ರವೇಶಿಸಿತ್ತು. ಟ್ರೋಫಿಯ ಸೋಲು–ಗೆಲುವಿನಾಚೆ ನೋಡುವುದಾದರೆ ಜಮ್ಮು–ಕಾಶ್ಮೀರ ತಂಡವು ಸುದೀರ್ಘವಾದ ಮತ್ತು ಕಠಿಣವಾದ ಹಾದಿಯಲ್ಲಿ ಪಯಣಿಸಿ ಈ ಹಂತಕ್ಕೆ ಬಂದಿರುವುದೇ ಚಾರಿತ್ರಿಕ ಸಾಧನೆ. ಇದರಿಂದಾಗಿ ಕಣಿವೆ ರಾಜ್ಯದಲ್ಲಿ ಕ್ರಿಕೆಟ್ ಮತ್ತಷ್ಟು ಬೆಳೆಯುವ ಅವಕಾಶಗಳ ಬಾಗಿಲು ತೆರೆದಂತಾಗಿದೆ.



ವಂಶಜ್ ಶರ್ಮಾ

ಕನ್ನಡಿಗ ಜೋಶಿ ಕಾಣಿಕೆ...

ಜಮ್ಮು–ಕಾಶ್ಮೀರ ತಂಡದ ಈ ಸಾಧನೆಯ ಓಟದಲ್ಲಿ ಕನ್ನಡಿಗ ಸುನಿಲ್ ಜೋಶಿ ಅವರ ಕಾಣಿಕೆಯೂ ಇದೆ.

ಬಿಷನ್ ಸಿಂಗ್ ಬೇಡಿ ಅವರ ನಂತರ ಈ ತಂಡಕ್ಕೆ 2014-15ರಲ್ಲಿ ಕೋಚ್ ಆಗಿ ನೇಮಕವಾಗಿದ್ದರು ಜೋಶಿ. ಅವರ ಮಾರ್ಗದರ್ಶನದಲ್ಲಿ ತಂಡವು ವಿಜಯ್ ಹಜಾರೆ ಟ್ರೋಫಿ, ರಣಜಿ ಟ್ರೋಫಿ ಟೂರ್ನಿಗಳಲ್ಲಿ ಉತ್ತಮ ಸಾಧನೆ ಮಾಡಿತು.



ಇದೀಗ ಅದೇ ಜಮ್ಮು–ಕಾಶ್ಮೀರ ಮತ್ತು ಕರ್ನಾಟಕ ನಡುವಣ ಫೈನಲ್ ಪಂದ್ಯದ ಸಂದರ್ಭದಲ್ಲಿ ಹುಬ್ಬಳ್ಳಿಯ ಮೈದಾನದ ಪೆವಿಲಿಯನ್ ಬ್ಲಾಕ್‌ಗೆ ಸುನಿಲ್ ಜೋಶಿ ಹೆಸರನ್ನು ಇಡಲಾಗುತ್ತಿದೆ.

ಗದುಗಿನ ಜೋಶಿಯವರು ಧಾರವಾಡ ವಲಯದಿಂದ ಭಾರತ ಟೆಸ್ಟ್ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ ಮೊದಲ ಆಟಗಾರರಾಗಿದ್ದಾರೆ. ಸದ್ಯ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಕೋಚ್ ಆಗಿದ್ದಾರೆ.

ಈಶಾನ್ಯದಲ್ಲೂ ಕ್ರಿಕೆಟ್‌ಗೆ ಪ್ರೋತ್ಸಾಹ

ಕ್ರಿಕೆಟ್ ಮುಖ್ಯವಾಹಿನಿಯಿಂದ ದೂರವೇ ಉಳಿದಿದ್ದ ಈಶಾನ್ಯದ ರಾಜ್ಯಗಳಿಗೂ ಈ ಆಟವನ್ನು ವಿಸ್ತರಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯೋನ್ಮುಖವಾಗಿದೆ. ಈ ಭಾಗದ ಆರು ರಾಜ್ಯಗಳಾದ ಅರುಣಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್ ಮತ್ತು ಸಿಕ್ಕಿಂ ತಂಡಗಳು 2018ರಿಂದ ರಣಜಿ ಟ್ರೋಫಿಯಲ್ಲಿ ಆಡುವ ಅವಕಾಶ ಪಡೆದಿವೆ. ಈ ತಂಡಗಳು ಪ್ಲೇಟ್ ಗುಂಪಿನಲ್ಲಿ ಆಡುತ್ತಿವೆ. ಅಸ್ಸಾಂ ಮತ್ತು ತ್ರಿಪುರಾ ತಂಡಗಳು ಅದಕ್ಕೆ ಮೊದಲೇ ಅವಕಾಶ ಪಡೆದಿವೆ.

2024ರ ಮೇ ತಿಂಗಳಲ್ಲಿ ಆಗಿನ ಬಿಸಿಸಿಐ ಕಾರ್ಯದರ್ಶಿಯಾಗಿದ್ದ ಜಯ್ ಶಾ (ಈಗ ಐಸಿಸಿ ಅಧ್ಯಕ್ಷ) ಅವರು ಆರು ರಾಜ್ಯಗಳಲ್ಲಿ ಅತ್ಯಾಧುನಿಕ ಕ್ರಿಕೆಟ್ ತರಬೇತಿ ವ್ಯವಸ್ಥೆಗೆ ಅಡಿಗಲ್ಲು ಹಾಕಿದ್ದರು. ಶಿಲ್ಲಾಂಗ್, ಇಟಾನಗರ, ಕೊಹಿಮಾ, ಐಜ್ವಾಲ್, ಇಂಫಾಲ್ ಮತ್ತು ಗ್ಯಾಂಗ್ಟಕ್‌ನಲ್ಲಿ ಈ ವ್ಯವಸ್ಥೆ ಕೆಲವೇ ತಿಂಗಳಲ್ಲಿ ಬಳಕೆಗೆ ಲಭ್ಯವಾಗುವ ನಿರೀಕ್ಷೆಯಿದೆ. ಒಳಾಂಗಣ ನೆಟ್ಸ್ ವ್ಯವಸ್ಥೆ, ಈಜುಕೊಳ, ಫಿಟ್ನೆಸ್ ಸೆಂಟರ್ ಇವುಗಳಲ್ಲಿ ಇರಲಿವೆ. ವರ್ಷಪೂರ್ತಿ ತರಬೇತಿಗೆ ಅನುಕೂಲ ಮಾಡಿಕೊಡುವ ಉದ್ದೇಶ ಇದರ ಹಿಂದಿದೆ.

2022–23ರಿಂದ ದೇಶದ ಐದು (ಕೇಂದ್ರ, ದಕ್ಷಿಣ, ಪಶ್ಚಿಮ, ಉತ್ತರ, ದಕ್ಷಿಣ ವಲಯಗಳ ಜೊತೆ) ವಲಯಗಳ ಜೊತೆ ಈಶಾನ್ಯ ವಲಯವನ್ನೂ ಸ್ಥಾಪಿಸಲಾಗಿದೆ. ದುಲೀಪ್ ಟ್ರೋಫಿ ಏಕದಿನ ಟೂರ್ನಿಯಲ್ಲಿ ಆಡುವ ಮೂಲಕ ಇದಕ್ಕೆ ಚಾಲನೆಯೂ ದೊರೆತಿದೆ.

ಅಸ್ಸಾಂನ ಬ್ಯಾಟರ್ ರಿಯಾನ್ ಪರಾಗ್ ಐಪಿಎಲ್‌ನಲ್ಲಿ ಉತ್ತಮ ಆಟದಿಂದ ಗಮನ ಸೆಳೆದಿದ್ದಾರೆ. ರಾಜಸ್ಥಾನ ರಾಯಲ್ಸ್ ತಂಡಕ್ಕೆ ಅವರು ನಾಯಕರೂ ಆಗಿದ್ದಾರೆ. ಈ ತಂಡ ಕೆಲವು ವರ್ಷಗಳಿಂದ ಗುವಾಹಟಿಯ ಬರ್ಸಪಾರಾ ಕ್ರೀಡಾಂಗಣವನ್ನು ಜೈಪುರದ ಜೊತೆಗೆ ತವರು ಕ್ರೀಡಾಂಗಣವನ್ನಾಗಿ ಆಯ್ಕೆ ಮಾಡಿಕೊಂಡಿದೆ. 2018ರಲ್ಲಿ ಗುವಾಹಟಿಯಲ್ಲಿ ಮೊದಲ ಏಕದಿನ (ಭಾರತ–ವೆಸ್ಟ್ ಇಂಡೀಸ್) ಅಂತರರಾಷ್ಟ್ರೀಯ ಪಂದ್ಯ ನಡೆದಿತ್ತು. 2025ರ ನವೆಂಬರ್‌ನಲ್ಲಿ ಗುವಾಹಟಿಯಲ್ಲಿ ಮೊದಲ ಬಾರಿ ಟೆಸ್ಟ್ ಪಂದ್ಯವೂ (ಭಾರತ–ದಕ್ಷಿಣ ಆಫ್ರಿಕಾ) ನಡೆದಿತ್ತು.

ರಾಷ್ಟ್ರೀಯ

ಶಬರಿಮಲೆ ಚಿನ್ನ ನಾಪತ್ತೆ ಪ್ರಕರಣ
ಕೇರಳ ವಿಧಾನಸಭೆಯಲ್ಲಿ ವಾಗ್ವಾದ, ಕಲಾಪ ಬಹಿಷ್ಕಾರ



ತಿರುವನಂತಪುರ (ಪಿಟಿಐ): ಶಬರಿಮಲೆ ಚಿನ್ನ ನಾಪತ್ತೆ ಪ್ರಕರಣ ಮತ್ತು ಮುಖ್ಯ ಅರ್ಚಕ ಕಂಡರಾರು ರಾಜೀವರು ಅವರ ಬಂಧನ ಸಂಬಂಧ ಕೇರಳ ವಿಧಾನ ಸಭೆಯಲ್ಲಿ ಸೋಮವಾರ ಆಡಳಿತಾರೂಢ ಎಲ್‌ಡಿಎಫ್ ಮತ್ತು ವಿರೋಧ ಪಕ್ಷ ಯುಡಿಎಫ್ ನಡುವೆ ತೀವ್ರ ವಾಗ್ವಾದ ನಡೆಯಿತು.

ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳ ನಾಯಕರು, 'ಚಿನ್ನ ನಾಪತ್ತೆ ಪ್ರಕರಣ, ಮಹಿಳೆಯರ ಪ್ರವೇಶ ಸೇರಿದಂತೆ ಶಬರಿಮಲೆಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಸರ್ಕಾರದ ನಿಲುವು ಸರಿಯಲ್ಲ. ಸದನದ ಕಲಾಪಗಳಿಗೆ ಸಹಕರಿಸುವುದಿಲ್ಲ' ಎಂದು ಸಭಾಧ್ಯಕ್ಷ ಎ.ಎನ್. ಶಂಸೀರ್ ಅವರಿಗೆ ಹೇಳಿದರು.

'ನವಯುಗ ಯಾತ್ರೆ'ಯ ಭಾಗವಾಗಿ ಹೊರಗಿರುವ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಅವರ ಅನುಪಸ್ಥಿತಿಯಲ್ಲಿ, ಕಾಂಗ್ರೆಸ್ ಶಾಸಕ ಕೆ. ಬಾಬು ಸದನಕ್ಕೆ ತಮ್ಮ ನಿಲುವನ್ನು ತಿಳಿಸಿದರು.

ಚಿನ್ನ ನಾಪತ್ತೆ ಪ್ರಕರಣದ ಆರೋಪಿಗಳಿಗೆ ಜಾಮೀನು ಸಿಕ್ಕಿರುವುದು ಹಾಗೂ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಪ್ರಧಾನ ಅರ್ಚಕರನ್ನು ಬಂಧಿಸಿದ್ದಕ್ಕೆ ಟೀಕಿಸಿದರು.

'ಮುಜರಾಯಿ ಸಚಿವ ವಿ.ಎನ್. ವಾಸವನ್ ಅವರು ರಾಜೀನಾಮೆ ನೀಡಬೇಕು. ಸರ್ಕಾರದ ಲೋಪಗಳಿಂದಾಗಿ ಪ್ರಕರಣದ ಪ್ರಮುಖ ಆರೋಪಿಗಳಿಗೆ ಜಾಮೀನು ಸಿಕ್ಕಿದೆ. ಅವರೆಲ್ಲರೂ ಈಗ ಜೈಲಿನ ಹೊರಗೆ ಮುಕ್ತ ಜೀವನ ನಡೆಸುತ್ತಿದ್ದಾರೆ' ಎಂದು ಆರೋಪಿಸಿದರು.

'ಶಬರಿಮಲೆ ಆಚರಣೆಗಳ ಉಲ್ಲಂಘನೆಯನ್ನು ಸರ್ಕಾರ ಬೆಂಬಲಿಸುತ್ತಿದೆ. ಈ ನಿಲುವನ್ನು ಬೆಂಬಲಿಸದ ಕಾರಣ ಪ್ರಧಾನ ಅರ್ಚಕರನ್ನು 40 ದಿನಗಳವರೆಗೆ ಜೈಲಿನಲ್ಲಿರಿಸಲಾಯಿತು' ಎಂದು ಆರೋಪಿಸಿದರು.

2018ರಲ್ಲಿ ಮಹಿಳೆಯರ ಪ್ರವೇಶ ವಿಷಯವನ್ನೂ ಬಾಬು ಉಲ್ಲೇಖಿಸಿದರು. 'ತಿರುವಾಂಕೂರು ದೇವಸ್ವಂ ಮಂಡಳಿ (ಟಿಡಿಬಿ) ಸರ್ಕಾರದ ಬೆಂಬಲದೊಂದಿಗೆ ಆಯೋಜಿಸಿದ್ದ 'ಜಾಗತಿಕ ಅಯ್ಯಪ್ಪ ಸಂಗಮ' ಕಾರ್ಯಕ್ರಮದಲ್ಲಿ ಅಕ್ರಮಗಳು ನಡೆದಿವೆ' ಎಂದೂ ಆರೋಪಿಸಿದರು.

ಈ ವೇಳೆ, ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ತೀವ್ರ ವಾಗ್ವಾದ ನಡೆಯಿತು. ಯುಡಿಎಫ್ ಶಾಸಕರು ಫಲಕಗಳನ್ನು ಹಿಡಿದುಕೊಂಡು ಸಭಾಧ್ಯಕ್ಷರ ಪೀಠದ ಮುಂದೆ ಪ್ರತಿಭಟನೆ ನಡೆಸಿದರು. ಬಳಿಕ, ಕಲಾಪವನ್ನು ಬಹಿಷ್ಕರಿಸಿ ಸದನದಿಂದ ಹೊರನಡೆದರು. ಸಭಾಧ್ಯಕ್ಷ ಎ.ಎನ್. ಶಂಸೀರ್ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

ಪುನರ್‌ವಸತಿ ಕಲ್ಪಿಸಿ: ಮಣಿಪುರ ಸಿ.ಎಂ.ಗೆ ಅಮಿತ್ ಶಾ ಸೂಚನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಸ್ಥಳಾಂತರಗೊಂಡಿರುವ ಜನರ ಪುನರ್‌ವಸತಿಯತ್ತ ಗಮನಹರಿಸುವಂತೆ ಮಣಿಪುರ ನೂತನ ಮುಖ್ಯಮಂತ್ರಿ ಯುಮ್ನಮ್ ಖೇಮ್‌ಚಂದ್ ಸಿಂಗ್ ಮತ್ತು ಇಬ್ಬರು ಉಪಮುಖ್ಯಮಂತ್ರಿಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆ ನೀಡಿದ್ದಾರೆ.

ಭಾನುವಾರ ಸಂಜೆ ಉಪಮುಖ್ಯಮಂತ್ರಿಗಳೊಂದಿಗೆ ಖೇಮ್‌ಚಂದ್ ಅವರು ದೆಹಲಿಯಲ್ಲಿ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದರು. ಮೈತೇಯಿ ಮತ್ತು ಕುಕಿ ಸಮುದಾಯಗಳ ನಡುವೆ ನಿಲ್ಲದ ಸಂಘರ್ಷ, ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಕೈಗೊಂಡಿರುವ ಕ್ರಮಗಳ ಕುರಿತು ಅಮಿತ್ ಶಾ ಚರ್ಚಿಸಿ, ಮಾಹಿತಿ ಪಡೆದುಕೊಂಡಿದ್ದಾರೆ.

'ರಾಜ್ಯದಲ್ಲಿ ಶಾಂತಿ ಮತ್ತು ಸಹಜ ಸ್ಥಿತಿ ಮರಳಿ ತರಲು, ರಾಜ್ಯದಲ್ಲಿ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡಲಿದೆ ಎಂಬ ಭರವಸೆ ಅಮಿತ್ ಶಾ ಅವರಿಂದ ಸಿಕ್ಕಿದೆ' ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.



ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಮಣಿಪುರ ಸಿ.ಎಂ. ಖೇಮ್‌ಚಂದ್ ಸಿಂಗ್ ಅವರು ಭಾನುವಾರ ಭೇಟಿಯಾಗಿದ್ದರು– ಪಿಟಿಐ ಚಿತ್ರ

ಸೋಮವಾರ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನೂ ಭೇಟಿಯಾಗಿ ಸಮಾಲೋಚನೆ ನಡೆಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತವನ್ನು ಫ್ರಾನ್ಸ್‌ನ ಕ್ಷಿಪಣಿ ಪಾಲುದಾರನನ್ನಾಗಿ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಬೇಡಿಕೊಂಡಿದ್ದರು. ಭಾರತದ ವಾಯು ಪಡೆಯ ಅಸಮರ್ಥತೆಯ ಕಾರಣಕ್ಕೆ ಯುದ್ಧವಿಮಾನಗಳನ್ನು ಕಳೆದುಕೊಳ್ಳಬೇಕಾಯಿತು. ಇದರಿಂದ ನಾವು ಶತ ಕೋಟಿ ಡಾಲರ್ ಮೌಲ್ಯದ ರಫೇಲ್ ಮಾರುಕಟ್ಟೆಯನ್ನು ಕಳೆದುಕೊಳ್ಳಬೇಕಾಗಿ ಬಂದಿದೆ. ಈ ಕಾರಣಕ್ಕೆ ಫ್ರಾನ್ಸ್ ಭಾರತದ ಪೂರ್ಣ ರಕ್ಷಣಾ ಪಾಲುದಾರ ರಾಷ್ಟ್ರವಾಗಲು ಸಾಧ್ಯವಿಲ್ಲ' ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರು ಹೇಳಿದ್ದಾರೆ ಎಂದು ಪ್ರತಿಪಾದಿಸುತ್ತಾ 'ಎಕ್ಸ್'ನಲ್ಲಿ ಒಂದು ವಿಡಿಯೊವನ್ನು ಪೋಸ್ಟ್ ಮಾಡಲಾಗಿದೆ. ಎಂಟು ಯುದ್ಧವಿಮಾನಗಳನ್ನು ಕಳೆದುಕೊಳ್ಳಬೇಕಾಯಿತು ಎಂದು ಮ್ಯಾಕ್ರನ್ ಹೇಳಿರುವುದಾಗಿ ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆ ವಿಡಿಯೊದಲ್ಲಿ ಸುದ್ದಿ ಸಂಸ್ಥೆ ಎಎನ್‌ಐ ಲೋಗೊ ಕೂಡ ಇದೆ. ಆದರೆ, ಇದು ಸುಳ್ಳು ಸುದ್ದಿ.

ಈ ವಿಡಿಯೊ ತುಣುಕಿನಲ್ಲಿ ಕೇಳಿಸುವ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, ವಿಶ್ವಾಸಾರ್ಹ ಮಾಧ್ಯಮಗಳಲ್ಲಿ ಈ ಕುರಿತ ವಿಶ್ವಾಸಾರ್ಹ ಮಾಧ್ಯಮ ವರದಿಗಳು ಸಿಗಲಿಲ್ಲ. ವಿಡಿಯೊದ ಕೀಫ್ರೇಮ್ ಅನ್ನು ರಿವರ್ಸ್ ಸರ್ಚ್ ವಿಧಾನದಲ್ಲಿ ಹುಡುಕಾಟ ನಡೆಸಿದಾಗ ಫೆ.17ರಂದು 'ದಿ ಪ್ರಿಂಟ್'ನ ಅಧಿಕೃತ ಯೂಟ್ಯೂಬ್‌ನಲ್ಲಿ ನೇರಪ್ರಸಾರವಾದ ವಿಡಿಯೊ ಸಿಕ್ಕಿತು. ಅದು ಮುಂಬೈನಲ್ಲಿ ಮ್ಯಾಕ್ರನ್ ಮತ್ತು ಮೋದಿ ಅವರು ಜಂಟಿಯಾಗಿ ನಡೆಸಿದ ಪತ್ರಿಕಾಗೋಷ್ಠಿಯ ವಿಡಿಯೊ. ಎಎನ್‌ಐನ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲೂ ಸುದ್ದಿಗೋಷ್ಠಿ ನೇರಪ್ರಸಾರಗೊಂಡಿತ್ತು. ಆದರೆ, ಅಲ್ಲಿ ಮ್ಯಾಕ್ರನ್ ಅವರು ಭಾರತೀಯ ವಾಯುಪಡೆ, ರಫೇಲ್ ಯುದ್ಧವಿಮಾನದ ಬಗ್ಗೆ ಎಲ್ಲೂ ಪ್ರಸ್ತಾಪ ಮಾಡಿಲ್ಲ. ಭಾರತ–ಫ್ರಾನ್ಸ್ ಜಂಟಿ ಹೇಳಿಕೆಯಲ್ಲೂ ಇದರ ಪ್ರಸ್ತಾಪವಿರಲಿಲ್ಲ. ಮುಂದಿನ ಹಂತವಾಗಿ ಡೀಪ್‌ಫೇಕ್ ಒ–ಮೀಟರ್, ರಿಸೆಂಬಲ್ ಎಐ ಟೂಲ್‌ಗಳ ಮೂಲಕ ವಿಡಿಯೊವನ್ನು ಮತ್ತು ಧ್ವನಿಯನ್ನು ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ತಂತ್ರಜ್ಞಾನದ ಮೂಲಕ ಸೃಷ್ಟಿಸಿದ ನಕಲಿ ಧ್ವನಿ ಎಂಬುದು ದೃಢಪಟ್ಟಿತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6325


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ರಾಜಿ ಮಾಡಿಕೊಂಡರೂ ಈತ ಸೋತವನು (4)
3.ವಿದ್ಯೆಯನ್ನು ಕಲಿಸುವ ಶಾಲೆ (4)
5.ಕಬ್ಬಿಗ ಇಲ್ಲಿ ಕಾಣುತ್ತಿದ್ದಾನೆ (2)
7.ಅರಸಿ ಕೈಯಲ್ಲಿದ್ದುದು ಧಾನ್ಯಗಳನ್ನು ಕೇರುವ ಸಾಧನ (3)
8.ದಮಯಂತಿಯ ಪತಿ (2)
9.ಶ್ರಮ ನಿರ್ವಹಿಸುವುದು (3)
10.ವಂಗ ದೇಶದಿಂದ ತರಿಸಿಕೊಂಡಿರುವ ಸಾಂಬಾರ ದ್ರವ್ಯ (3)
11.ಜನರಲ್ಲಿ ಜಾಗೃತಿ ಮೂಡಿಸಿದ ಪರಿಶೆ! (2)
12.ಸಡಗರ ಹೀಗೆ ಬಂದಿದೆ (3)
14.ಕಠೋರವಾದ ಕೈ! (2)
16.ಮೋಕ್ಷಕ್ಕೆ ಸಾಧಕವಾದ ಪರಮಾತ್ಮನ ಅರಿವು (4)
17.ಮುಚ್ಚಳವಿರುವ ಡಬ್ಬಿ (4)

ಮೇಲಿಂದ ಕೆಳಕ್ಕೆ

1.ಪದ ಹೇಳಿ ಗಳಿಸಿರುವ ಬಿಲ್ಲೆ (3)
2.ಬಿದಿರಿನ ತಟ್ಟಿಯನ್ನು ಹೀಗೂ ಹೇಳುವರು (3)
3.ಕ್ರೀಡಾಶೀಲ ವ್ಯಕ್ತಿಯಿವನು (3)
4.ಯಮನ ಬಳಿ ಬಂದಿರುವ ಜೋಡಿ (3)
6.ಗೆಲುವನ್ನು ಗಳಿಸುವುದಕ್ಕಾಗಿ ಕೈಗೊಳ್ಳುವ ಪ್ರಯಾಣ (5)
8.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
11.ಈತ ಎಚ್ಚರಗೊಂಡವನು (3)
12.ಸಮಾಧಾನವಾಗಿ ನಡೆದ ರಾಜಿ (3)
13.ಕರುವಿಗೆ ತೋರಿರುವ ದಯೆ (3)
15.ಈತ ವಿಲಾಸಪ್ರಿಯ (3)



6324ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಲಪಾತ 3.ಪರಂಪರೆ 5.ನವದಂಪತಿ 7.ಕೆಸರು 9.ತಾಕತ್ತು 11.ಉಸಿರು 13.ವ್ಯವಕಲನ 15.ಅನಿಕೇತ 16.ನಡುಪ್ರಾಯ

ಮೇಲಿಂದ ಕೆಳಕ್ಕೆ:
1.ಜವನಿಕೆ 2.ತಲ್ಲೀನ 4.ಪದಾತಿ 6.ದಂಡೆತ್ತು 8.ಸಜ್ಜೆ 9.ತಾರಕ 10.ದಾಸಿ 12.ರುಗ್ಣಾಲಯ 13.ವ್ಯಸನಿ 14.ನವೀನ

ಸುಡೊಕು 6709

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	5	3	1			4		7
6				5				
	4		8				6	
4			5		9	2		1
	2			4			5	
3		5	2		8			
5	7					8		9
		1	4		5			
	8			7			3	4

6708 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ನಾಳೆ ಎಂಬ ಸುಂದರ ಸುಳ್ಳು



ನುಡಿ ಬೆಳಗು

ದೀಪಾ ಹಿರೇಗುತ್ತಿ

ದಟ್ಟವಾದ ಕಾಡೊಂದರಲ್ಲಿ ಗೂಬೆಯೊಂದಿತ್ತು. ಅದರ ಹೆಸರು ಚಿಂಕು. ಗೂಬೆಗಳು ಸಾಧಾರಣವಾಗಿ ಬೇರೆ ಪಕ್ಷಿಗಳು ಬಿಟ್ಟುಹೋದ ಗೂಡುಗಳಲ್ಲೋ ಅಥವಾ ಮರದ ಪೊಟರೆಯಲ್ಲೋ ವಾಸಿಸುತ್ತವೆ. ಚಿಂಕು ಕೂಡ ಹದ್ದೊಂದು ಕಟ್ಟಿದ್ದ ಹಳೆಯ ಗೂಡೊಂದರಲ್ಲಿ ವಾಸವಾಗಿತ್ತು. ಆದರೆ ತಾನೇ ಒಂದು ಹೊಸ ಸುಭದ್ರ ಗೂಡು ಕಟ್ಟಿಕೊಳ್ಳಬೇಕೆಂಬ ಆಸೆ ಚಿಂಕುಗೆ ಯಾವಾಗಲೂ ಇತ್ತು.

ಆಸೆಯೇನೋ ಸರಿ. ಆದರೆ ಚಿಂಕುವಿಗೆ ಒಂದು ಕೆಟ್ಟ ಸ್ವಭಾವವಿತ್ತು. ಅದೇಂದರೆ ಅದರ ಪ್ರೀತಿಯ ಪದ ನಾಳೆ ಎಂಬುದಾಗಿತ್ತು. ನಾನು ನಾಳೆ ಗೂಡು ಕಟ್ಟಲು ಶುರು ಮಾಡುತ್ತೇನೆ, ನಾಳೆ ಸ್ವಲ್ಪ ಜಾಸ್ತಿ ಆಹಾರ ತಂದು ಕೂಡಿಡುತ್ತೇನೆ, ನಾಳೆ ಸ್ನೇಹಿತರನ್ನು ಭೇಟಿಯಾಗುತ್ತೇನೆ ಎಂದು ಪ್ರತೀ ಕೆಲಸವನ್ನೂ ಮುಂದೂಡುತ್ತಲೇ ಇರುತ್ತಿತ್ತು. ನಾಳೆ ಅನ್ನುವ ಪದವೇ ಹಾಗೆ. ಅದು ಬಹಳ ಸುಂದರ ಪದ, ನಾಳೆ ಎಂದುಕೊಂಡಾಗಲೆಲ್ಲ ಸದ್ಯದ ತಲ್ಲಣಗಳು ಮಾಯವಾಗುತ್ತವೆ. ನಾಳೆ ಅನ್ನುವುದು ಹಿತಕರ ಅನುಭವ ನೀಡುವುದರಿಂದ ನಾವು ಬಹಳಷ್ಟು ಕೆಲಸವನ್ನು ದಿನವೂ ನಾಳೆಗೆ ಮುಂದೂಡುತ್ತಿರುತ್ತೇವೆ. ಚಿಂಕು ಕೂಡ ಇದೇ ಅಭ್ಯಾಸ ಮಾಡಿಕೊಂಡಿತ್ತು

ಚಿಂಕುವಿನ ಮುರುಕು ಗೂಡಿರುವ ಮರದ ಹತ್ತಿರವೇ ಸೋನು ಎಂಬ ಅಳಿಲು ವಾಸಿಸುತ್ತಿತ್ತು. ಅದು ಯಾವಾಗಲೂ ಏನಾದರೂ ಮಾಡುತ್ತಿರುತ್ತಿತ್ತು. ಬೀಜಗಳನ್ನು ಸಂಗ್ರಹಿಸುವುದು, ಗೂಡನ್ನು ಸರಿಮಾಡಿಕೊಳ್ಳುವುದು, ಗೆಳೆಯರನ್ನು ಭೇಟಿಯಾಗುವುದು ಯಾವುದನ್ನೂ ಮುಂದೂಡುತ್ತಿರಲಿಲ್ಲ. ಒಂದು ದಿನ ಏಪ್ರಿಲ್ ತಿಂಗಳ ಬಿರುಬೇಸಿಗೆಯಲ್ಲಿ ಇದ್ದಕ್ಕಿದ್ದಂತೆ ಮೋಡಗಳು ದಟ್ಟವಾಗತೊಡಗಿದವು. ಗಾಳಿ ಜೋರಾಗುವ ಲಕ್ಷಣಗಳು ಕಾಣಿಸಿಕೊಂಡವು. ಸೋನು ತನ್ನ ಗುಡಿಸಲನ್ನು ಭದ್ರಪಡಿಸಿಕೊಂಡಿತು. ಮೊಲಗಳು ತಮ್ಮ ಬಿಲದೊಳಗೆ ಓಡಿದವು. ಕರಡಿ ಕೂಡ ನಿಧಾನಕ್ಕೆ ತನ್ನ ಗುಹೆಯತ್ತ ತೆರಳಿತು. ಚಿಂಕು ಗಡಿಬಿಡಿಯಿಂದ ತನ್ನ ಗೂಡಿನತ್ತ ಹೋಯಿತು. ಗೂಡಿಗೆ ಚಿಂಕು ಜೋತು ಬೀಳುತ್ತಿದ್ದಂತೆ ಗಾಳಿ ಮಳೆಗೆ ಈಗಾಗಲೇ ಸಿಲುಕಿದ್ದ ಗೂಡು ಉದುರಿಬಿದ್ದಿತು. ಬೇರೆ ದಾರಿ ಇಲ್ಲದೇ ಮಳೆಯಲ್ಲೇ ಹಾರಿ ಯಾವುದೋ ಒಂದು ಮರದ ಪೊಟರೆಯೊಳಗೆ ಕುಳಿತಿತು ಚಿಂಕು.

ಮಳೆ ಗಾಳಿ ನಿಂತ ಮಾರನೇ ದಿನ ಕಾಡು ಮೊದಲಿನಂತಿರಲಿಲ್ಲ. ಎಲ್ಲಿ ನೋಡಿದರೂ ಮುರಿದು ಬಿದ್ದ ಮರಗಳು, ರಾಶಿ ಬಿದ್ದ ಎಲೆಗಳು. ಬೇರೆಯವರ ಗೂಡುಗಳಿಗೆ ಅಲ್ಪಸ್ವಲ್ಪ ಹಾನಿಯಾಗಿತ್ತು. ಆದರೆ ಚಿಂಕುವಿನ ಗೂಡಿನಂತೆ ಪೂರ್ತಿ ಹಾಳಾಗಿರಲಿಲ್ಲ. ವಾಪಸ್ ಬಂದ ಚಿಂಕುವನ್ನು ನೋಡಿ ಅಳಿಲು ಹೇಳಿತು: 'ಸದ್ಯ ಚಿಂಕು ನಿನಗೇನು ಆಗಲಿಲ್ಲವಲ್ಲ. ಆದರೆ ಒಂದು ಸಂಗತಿ ನೆನಪಿಡು, ಬಿರುಗಾಳಿ ನಾಳೆಗಾಗಿ ಕಾಯುವುದಿಲ್ಲ'.

ಪುಟ್ಟ ಅಳಿಲಿನ ಮಾತು ಕೇಳಿ ಚಿಂಕು ನಾಚಿಕೆಯಿಂದ ತಲೆತಗ್ಗಿಸಿತು. ತಕ್ಷಣವೇ ಗೂಡು ಕಟ್ಟಲು ಗಟ್ಟಿಯಾದ ಮರದ ಪುಟ್ಟ ಪುಟ್ಟ ಗೆಲ್ಲುಗಳನ್ನು ತಂದಿತು. ಹುಲ್ಲನ್ನು ತಂದಿತು. ಹಂತಹಂತವಾಗಿ ಗೂಡು ನಿರ್ಮಾಣವಾಯಿತು. ನಂತರ ಆಹಾರವನ್ನು ಸಂಗ್ರಹಿಸುವ ಸರದಿ. ಅದಾದ ಮೇಲೆ ಬಹಳ ದಿನಗಳಿಂದ ಸಿಗದ ತನ್ನ ಸ್ನೇಹಿತ ರೋನಿ ಮೊಲವನ್ನು ಭೇಟಿಯಾಗಿ ಬಂತು.

ನಾಳೆ ಎಂಬ ಪದವನ್ನು ಉಪಯೋಗಿಸುವುದಕ್ಕಿಂತ ಇಂದು ಕಾರ್ಯತತ್ಪರವಾಗುವುದು ಮುಖ್ಯ ಎಂದು ಗೂಬೆ ಅರಿತುಕೊಂಡಿತು. ನಾಳೆ ಎಂಬುದು ಕನಸು ಮತ್ತು ಇಂದಿನ ದಿನವೇ ವಾಸ್ತವ ಎಂಬ ಪಾಠವನ್ನು ಅದು ಕಾಡಿನ ಗೆಳೆಯರಿಗೆ ತನ್ನದೇ ಉದಾಹರಣೆ ಕೊಟ್ಟು ಹೇಳಲಾರಂಭಿಸಿತು. ಇಂದಿನ ಕೆಲಸವನ್ನು ಎಂದಿಗೂ ಮುಂದೂಡಬಾರದು. ಯಾರಿಗೆ ಗೊತ್ತು, ನಾಳೆ ಎನ್ನುವುದು ಬಿರುಗಾಳಿಯನ್ನೇ ತನ್ನೊಂದಿಗೆ ತರಬಹುದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಫೆಬ್ರುವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಸಪ್ತಮಿ ಗಂ. 7-03 ನಂತರ ಅಷ್ಟಮಿ ಗಂ 28-52 ನಕ್ಷತ್ರ: ಕೃತ್ತಿಕಾ ಗಂ. 15-07 ಯೋಗ: ಐಂದ್ರ ಗಂ. 7-24, ನಂತರ ವೈಧೃತಿ ಗಂ 28-26 ಕರಣ: ವಣಿಜ ಗಂ 7-03 ಕುಂಭ ಮಾಸದ 12 ನೇ ದಿನ. ಮಳೆ ನಕ್ಷತ್ರ : ಶತಭಿಷ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-53 ಸೂರ್ಯಾಸ್ತ : 06-35, ಮುಸ್ಲಿಂ ದಿನಾಂಕ : 6 ರಂಜಾನ್, ಅದೃಷ್ಟ ಸಂಖ್ಯೆ : 5, 7

ಮೇಷ: ಸವಾಲನ್ನು ಎದುರಿಸುವ ಶಕ್ತಿ ಹಾಗೂ ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವವು ನಿಮ್ಮಲ್ಲಿದೆ. ಪ್ರಭಾವಿತ ವ್ಯಕ್ತಿಗಳಿಂದ ಸಹಕಾರ ಸಿಗಲಿದೆ. ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ.

ವೃಷಭ: ಜೀವವಿಜ್ಞಾನದ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಯಶೋದಾಯಕವಾಗಿರುತ್ತದೆ. ನಿರುದ್ಯೋಗಿಗಳು ಒಂದು ಸ್ಥಿರವಾದ ಉದ್ಯೋಗವನ್ನು ಪಡೆಯುವ ಸಾಧ್ಯತೆ ಇದೆ.

ಮಿಥುನ: ಮನೆಯವರ ಸಹಾಯದಿಂದ ಹಣಕಾಸಿನ ತೊಂದರೆಗಳು ದೂರಾಗಿ ಹೊಸ ಯೋಜನೆಗೆ ಚಾಲನೆ ದೊರೆಯಲಿದೆ. ಸಾಮಾಜಿಕ ಕಾರ್ಯಗಳಲ್ಲಿ ಚಟುವಟಿಕೆಯಿಂದ ಭಾಗವಹಿಸುವಿರಿ.

ಕರ್ಕಾಟಕ: ಉದಾರ ಮನೋಭಾವ ವ್ಯವಹಾರದಲ್ಲಿ ನಷ್ಟ ಅಥವಾ ಸೋಲೆನಿಸಿದರೂ, ಮುಂದಿನ ದಿನಗಳಲ್ಲಿ ಅನುಕೂಲವನ್ನು ಒದಗಿಸಲಿದೆ. ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿದೆ.

ಸಿಂಹ: ಮೂತ್ರಕೋಶಕ್ಕೆ ಸಂಬಂಧಿಸಿದಂತೆ ಅನಾರೋಗ್ಯ ಕಂಡುಬಂದಲ್ಲಿ ನಿರ್ಲಕ್ಷಿಸುವುದು ಅಥವಾ ಮನೆಮದ್ದು ಮಾಡುವುದು ಸರಿಯಲ್ಲ. ನೂತನ ಯೋಜನೆ ಬಗ್ಗೆ ಚರ್ಚೆಗೆ ಸೂಕ್ತವಾಗಿರುತ್ತದೆ.

ಕನ್ಯಾ: ಅಧಿಕಾರಿಗಳ ಮನಸ್ಸಿನ ಪರಿಸ್ಥಿತಿ ಅವಲೋಕಿಸಿಕೊಂಡು ಚರ್ಚಿಸುವ ಮುಂದಿನ ಹೆಜ್ಜೆ ಇರಿಸಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮನಸ್ಸಾಗುವುದು. ಬಡಗಿ ಕೆಲಸ ಮಾಡುವವರಿಗೆ ಸುಯೋಗದ ದಿನ.

ತುಲಾ: ತಪ್ಪುಗಳನ್ನು ಸಮರ್ಥಿಸಿಕೊಳ್ಳುವಂಥ ಕೆಲಸದ ಬದಲು ತಪ್ಪನ್ನು ಸರಿಪಡಿಸಿಕೊಳ್ಳುವ ಬಗ್ಗೆ ಆಲೋಚನೆಗಳು, ದೈಹಿಕ ಶ್ರಮವಿರಲಿ. ಕಾರ್ಯ ಪ್ರವೃತ್ತರಾದಲ್ಲಿ ಅಭಿವೃದ್ಧಿ ಅನುಭವಕ್ಕೆ ಬರಲಿದೆ.

ವೃಶ್ಚಿಕ: ಸಂಘ-ಸಂಸ್ಥೆಗಳ ಸಭೆಗಳಲ್ಲಿ ಮಾತಿಗೆ ಬೆಲೆ ಇಲ್ಲದಂತೆ ಅಥವಾ ಮಾತನ್ನು ಅಪಾರ್ಥವಾಗಿ ಕಲ್ಪಿಸಿಕೊಂಡು ದೂಷಿಸುವಂತಹ ಘಟನೆಗಳು ಸಂಭವಿಸಬಹುದು. ಧಾರ್ಮಿಕ ನಾಯಕರಿಗೆ ಶುಭವಾಗುವುದು.

ಧನು: ಲೇವಾದೇವಿ ವ್ಯವಹಾರದವರಿಗೆ ನಂಬಿಕೆದ್ರೋಹದಂಥ ಘಟನೆಗಳು ನಡೆಯಬಹುದು. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ. ಆಫೀಸಿನ ಕೆಲಸಕ್ಕಾಗಿ ವಿದೇಶಯಾನ ಮಾಡಬೇಕಾಗಬಹುದು.


ಮಕರ: ಲೋಪ ದೋಷಗಳನ್ನು ತಿದ್ದಿಕೊಳ್ಳುವಂತೆ ಹಿರಿಯರಿಂದ ಸೂಚನೆ, ಅವರ ಅನುಭವದ ಮಾತು ಒದಗಿಬರುವುದು. ಹರಾಜಿನಲ್ಲಿ ಆಸ್ತಿ ಖರೀದಿ ಎನ್ನುವ ರೀತಿಯಲ್ಲಿ ಸಂಪತ್ತು ಅಭಿವೃದ್ಧಿಯಾಗಲಿದೆ.

ಕುಂಭ: ಪ್ರಗತಿಯನ್ನು ಎಲ್ಲೆಡೆಯೂ ಪ್ರಶಂಸಿಸುತ್ತಿರುವುದರಿಂದ ಕಾರ್ಯ ಕ್ಷೇತ್ರದಲ್ಲಿ ಹೊಸದೊಂದು ಹುಮ್ಮಸ್ಸು ಬರುವುದರ ಜೊತೆಗೆ ವೃತ್ತಿಪರ ಶತ್ರುಗಳ ಸಂಖ್ಯೆ ಹೆಚ್ಚಲಿದೆ. ಧನಾದಾಯದ ಮಾರ್ಗವು ಗೋಚರಿಸಲಿದೆ.

ಮೀನ: ಹುಟ್ಟೂರಿನಲ್ಲಿ ಕೃಷಿ ಮಾಡುವ ಅಥವಾ ಕೃಷಿ ಭೂಮಿ ಖರೀದಿಸುವ ಆಲೋಚನೆ ನೆರವೇರುವುದು. ಮನೆಯಲ್ಲಿ ನಡೆದ ಅಹಿತಕರ ಘಟನೆಯಿಂದ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯಕ್ಕೆ ಹಾನಿಯುಂಟಾಗಲಿದೆ.

ಪ್ರಜಾವಾಣಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,571
ಇಂದಿನ ಅಂತ್ಯ:	25,713
ದಿನದ ಗರಿಷ್ಠ:	25,771
	141

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹550
12 ಕ್ಕೆ	₹80
ಮೈಸೂರು: 100 ಕ್ಕೆ	₹550

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹211.50
ಆರ್‌ಎಸ್‌ಎಸ್-5	₹205.50
ಗುಡ್ ಲಾಟ್	₹193.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹522-782
ದ್ವಿತಳಿ (ಬಿ.ವಿ)	₹230-921

ಮುದ್ರಮನೆ ಕಾಫಿ

ಎಪಿ	₹23000
ಎಸಿ	₹13000
ಆರ್‌ಪಿ	₹18250
ಆರ್‌ಸಿ	₹9825

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1730 (1740)
ಸೋಯಾ (ರಿಫೈನ್ಡ್)	₹1370 (1360)
ಸೂರ್ಯಕಾಂತಿ (ರಿಫೈನ್ಡ್)	₹1590 (1590)
ಪಾಮೋಲಿನ್	₹1295 (1290)

ಮುಂಬೈ ಧಾರಣೆ (ಶೇಂಗಾ)


23-02-2026


ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1740 (1750)
ಒಂದು ವಾರದ ಡೆಲಿವರಿ	1735 (1745)
ಪಾಮ್ ವಾರದ ಡೆಲಿವರಿ	1293 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1490)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,800 (1,56,450)
ಬೆಳ್ಳಿ ಕೆ.ಜಿಗೆ	2,64,000 (2,61,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1500-2000
ಮಧ್ಯಮ	₹1000-1400
ಸಣ್ಣ	₹400-800





ವಿಮೆ ಮಾರುವ ಬ್ಯಾಂಕ್‌ಗಳಿಗೆ ತರಾಟೆ

ಠೇವಣಿ ಸ್ವೀಕರಿಸುವುದು, ಸಾಲ ವಿತರಿಸುವುದು ಬ್ಯಾಂಕ್‌ನ ಮೂಲ ಕೆಲಸ: ಹಣಕಾಸು ಸಚಿವೆ

ನವದೆಹಲಿ (ಪಿಟಿಐ): ವಿಮೆ ಸೇರಿದಂತೆ ವಿವಿಧ ಹಣಕಾಸಿನ ಉತ್ಪನ್ನಗಳನ್ನು ಅಗತ್ಯ ಇಲ್ಲದವರಿಗೂ ಮಾರಾಟ ಮಾಡುವ ಬ್ಯಾಂಕ್‌ಗಳ ವಿರುದ್ಧ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಚಾಟಿ ಬೀಸಿದರು. ಬ್ಯಾಂಕ್‌ಗಳು ತಮ್ಮ ಮೂಲ ಕೆಲಸದ ಮೇಲೆ ಗಮನ ನೀಡಬೇಕು ಎಂದು ಹೇಳಿದರು.

'ನನಗೆ ಯಾವಾಗಲೂ ಸಣ್ಣದಾಗಿ ಕಿರಿಕಿರಿ ಉಂಟುಮಾಡುವ ಸಂಗತಿಯೊಂದಿದೆ... ನೀವು ಅಗತ್ಯ ಇಲ್ಲದಿದ್ದಾಗಲೂ ವಿಮಾ ಉತ್ಪನ್ನಗಳನ್ನು ಮಾರಾಟ ಮಾಡಲು ಹೆಚ್ಚಿನ ಸಮಯ ಕಳೆಯುತ್ತೀರಿ. ಇದರಿಂದಾಗಿ ಎರಡು ಬಗೆಯ ಉದ್ದೇಶಗಳನ್ನೂ ಈಡೇರಿಸಲು ಆಗುವುದಿಲ್ಲ (ಆರ್‌ಬಿಐನ ಉದ್ದೇಶ ಹಾಗೂ ಐಆರ್‌ಡಿಎಐನ ಉದ್ದೇಶ)' ಎಂದು ಅವರು ಹೇಳಿದರು.

ಬಜೆಟ್ ಮಂಡನೆಯ ನಂತರದಲ್ಲಿ ಆರ್‌ಬಿಐ ಕೇಂದ್ರೀಯ ಮಂಡಳಿಯ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ ನಂತರ ನಿರ್ಮಲಾ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

'ಆರ್‌ಬಿಐ ಈ ವಿಚಾರವಾಗಿ ಮಾರ್ಗಸೂಚಿಯೊಂದನ್ನು ತರಲಿರುವುದು ನನಗೆ ಸಂತಸ ತಂದಿದೆ. ಹಣಕಾಸಿನ ಉತ್ಪನ್ನಗಳನ್ನು ಅನಗತ್ಯವಾಗಿ ಮಾರಾಟ ಮಾಡಿ, ಅದನ್ನು ದಕ್ಕಿಸಿಕೊಳ್ಳಲು ಆಗುವುದಿಲ್ಲ ಎಂಬ ಸಂದೇಶವು ಬ್ಯಾಂಕ್‌ಗಳಿಗೆ ರವಾನೆ ಆಗಬೇಕಿದೆ' ಎಂದು ನಿರ್ಮಲಾ ಅವರು ಹೇಳಿದರು.

ಅಗತ್ಯವಿರುವ ವಿಮಾ ಸೌಲಭ್ಯವನ್ನು ಗ್ರಾಹಕ ಹೊಂದಿದ್ದರೂ ಬ್ಯಾಂಕ್‌ಗಳು ತಮ್ಮಲ್ಲಿಗೆ ಬರುವ ಗ್ರಾಹಕರು ವಿಮಾ ಉತ್ಪನ್ನ ಖರೀದಿಸಬೇಕು ಎಂದು ಹೇಳುತ್ತಿವೆ ಎಂಬುದನ್ನು ಪ್ರಸ್ತಾಪಿಸಿದ ನಿರ್ಮಲಾ, 'ವಿಮೆಯ ವಿಚಾರವು ಐಆರ್‌ಡಿಎಐ ವ್ಯಾಪ್ತಿಗೆ ಬರುತ್ತದೆ ಎಂಬ ಕಾರಣಕ್ಕೆ ಈ ಬಗ್ಗೆ ಆರ್‌ಬಿಐ ನಿಗಾ ವಹಿಸಲಿಲ್ಲ' ಎಂದರು.

'ಇತ್ತ ಐಆರ್‌ಡಿಎಐ ಕೂಡ ಇದರ ಬಗ್ಗೆ ಗಮನ ನೀಡಲಿಲ್ಲ, ಬ್ಯಾಂಕ್‌ಗಳ ಮೇಲೆ ತನಗೆ ನಿಯಂತ್ರಣವಿಲ್ಲ ಎಂದು ಅದು ಭಾವಿಸಿತ್ತು. ಆದರೆ ನಿಯಮಗಳಲ್ಲಿನ ಲೋಪದ ಪರಿಣಾಮವಾಗಿ ಗ್ರಾಹಕರು ಸಮಸ್ಯೆ ಅನುಭವಿಸಿದರು. ಆಸ್ತಿಯನ್ನು ಅಡಮಾನವಾಗಿ ಇರಿಸಿ ಸಾಲ ಪಡೆಯುವ ವ್ಯಕ್ತಿಗಳು ವಿಮೆ ಖರೀದಿಸುವಂತೆ ಬ್ಯಾಂಕ್‌ಗಳು ತಮ್ಮನ್ನು ಏಕೆ ಒತ್ತಾಯಿಸುತ್ತವೆ ಎಂಬ ಪ್ರಶ್ನೆ ಕೇಳುತ್ತಲೇ ಇದ್ದರು' ಎಂದು ನಿರ್ಮಲಾ ವಿವರಿಸಿದರು.

ಬ್ಯಾಂಕ್‌ಗಳ ಮೂಲ ಕೆಲಸ ಠೇವಣಿ ಸ್ವೀಕರಿಸುವುದು, ಸಾಲ ವಿತರಣೆ ಮಾಡುವುದು. ಅದರ ಬಗ್ಗೆ ಅವು ಗಮನ ನೀಡಬೇಕು. ಬ್ಯಾಂಕ್‌ಗಳಿಗೆ ಸಂಬಂಧವಿಲ್ಲದ ಉತ್ಪನ್ನ ಮಾರಾಟ ಮಾಡುವ ಬದಲು ಅವು ಕಡಿಮೆ ವೆಚ್ಚದ ಠೇವಣಿ (ಚಾಲ್ತಿ ಖಾತೆ ಉಳಿತಾಯ ಖಾತೆ) ಹೆಚ್ಚಿಸುವ ಕೆಲಸಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.



ಆರ್‌ಬಿಐ ಕೇಂದ್ರೀಯ ಮಂಡಳಿಯ ಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ಗವರ್ನರ್ ಸಂಜಯ್ ಮಲ್ಹೋತ್ರಾ ಭಾಗವಹಿಸಿದ್ದರು –ಪಿಟಿಐ ಚಿತ್ರ

ಆರ್‌ಬಿಐನಿಂದ ಕರಡು ಮಾರ್ಗಸೂಚಿ

ಬ್ಯಾಂಕ್‌ಗಳು ಅನ್ಯ ಹಣಕಾಸಿನ ಉತ್ಪನ್ನಗಳನ್ನು ಗ್ರಾಹಕರಿಗೆ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಆರ್‌ಬಿಐ ಫೆಬ್ರುವರಿ 11ರಂದು ಕರಡು ಮಾರ್ಗಸೂಚಿಯೊಂದನ್ನು ಹೊರಡಿಸಿದೆ. ಅನಗತ್ಯವಾದ ಹಣಕಾಸಿನ ಉತ್ಪನ್ನ ಖರೀದಿಸಲು ಅಥವಾ ಸೇವೆಯನ್ನು ಪಡೆಯಲು ಗ್ರಾಹಕ ಪಾವತಿಸಿದ ಪೂರ್ಣ ಮೊತ್ತವನ್ನು ಬ್ಯಾಂಕ್‌ಗಳು ಮರುಪಾವತಿ ಮಾಡಬೇಕಾಗುತ್ತದೆ ಎಂದು ಕರಡು ಮಾರ್ಗಸೂಚಿಯು ಹೇಳಿದೆ.

ಅನಗತ್ಯವಾದ ಹಣಕಾಸಿನ ಉತ್ಪನ್ನ ಮಾರಾಟ ಮಾಡಿದಾಗ, ಅದರಿಂದ ಗ್ರಾಹಕರಿಗೆ ಆಗುವ ನಷ್ಟಕ್ಕೆ ಪರಿಹಾರ ಕೊಡಬೇಕಾಗುತ್ತದೆ ಎಂದು ಕೂಡ ಅದರಲ್ಲಿ ಹೇಳಲಾಗಿದೆ. ಈ ಕರಡು ಮಾರ್ಗಸೂಚಿಗಳಿಗೆ ಆಕ್ಷೇಪ ಸಲ್ಲಿಸಲು ಸಾರ್ವಜನಿಕರಿಗೆ ಮಾರ್ಚ್ 4ರವರೆಗೆ ಅವಕಾಶ ನೀಡಲಾಗಿದೆ.

ಹಣಕಾಸಿನ ಉತ್ಪನ್ನಗಳನ್ನು ಅನಗತ್ಯವಾಗಿ ಮಾರಾಟ ಮಾಡುವುದನ್ನು ತಡೆಯುವ ಉದ್ದೇಶದ ಕಠಿಣ ನಿಯಮಗಳು ಜುಲೈ 1ರಿಂದ ಜಾರಿಗೆ ಬರಲಿವೆ ಎಂದು ಆರ್‌ಬಿಐ ತಿಳಿಸಿದೆ.

ಸುದ್ದಿ 2 ನಿಮಿಷ

ಇಂದಿನಿಂದ ಶೇ 10ರಷ್ಟು ಸುಂಕ

ನವದೆಹಲಿ (ಪಿಟಿಐ): ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಸರಕುಗಳ ಮೇಲೆ ಅಮೆರಿಕ ವಿಧಿಸಿರುವ ಶೇ 10ರಷ್ಟು ಹೆಚ್ಚುವರಿ ಸುಂಕವು ಮಂಗಳವಾರದಿಂದ ಜಾರಿಗೆ ಬರಲಿದೆ. ಈ ಆದೇಶವು 150 ದಿನಗಳವರೆಗೆ ಜಾರಿಯಲ್ಲಿ ಇರಲಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಫೆಬ್ರುವರಿ 24ರಿಂದ ಎಲ್ಲ ದೇಶಗಳಿಂದ ಅಮೆರಿಕಕ್ಕೆ ಪ್ರವೇಶಿಸುವ ಸರಕುಗಳ ಮೇಲೆ ಶೇ 15ರಷ್ಟು ಸುಂಕ ವಿಧಿಸುವುದಾಗಿ ಹೇಳಿದ್ದಾರೆ. ಆದರೆ, ಇದರ ಅಧಿಕೃತ ಆದೇಶ ಇದುವರೆಗೆ ಜಾರಿ ಆಗಿಲ್ಲ. ಇದು ವರ್ತಕ ಸಮುದಾಯದಲ್ಲಿ ಅನಿಶ್ಚಿತತೆ ಉಂಟು ಮಾಡಿದೆ ಎಂದು ರಫ್ತುದಾರರು ಹೇಳಿದ್ದಾರೆ.

ಅಮೆರಿಕದ ಸುಪ್ರೀಂ ಕೋರ್ಟ್, ಡೊನಾಲ್ಡ್ ಟ್ರಂಪ್ ಅವರು ಅಮೆರಿಕಕ್ಕೆ ಪ್ರವೇಶಿಸುವ ಸರಕುಗಳ ಮೇಲೆ ಈ ಹಿಂದೆ ವಿಧಿಸಿದ್ದ ಪ್ರತಿಸುಂಕವನ್ನು ಅನೂರ್ಜಿತಗೊಳಿಸಿದೆ. ತೀರ್ಪಿನ ಬಳಿಕ ಟ್ರಂಪ್ ಅವರು ಎಲ್ಲ ದೇಶಗಳಿಂದ ಆಮದಾಗುವ ಸರಕುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸಿದ್ದರು. ಆದರೆ, ಈ ಆದೇಶ ಹೊರಡಿಸಿದ ಕೆಲವೇ ಗಂಟೆಗಳಲ್ಲಿ ಸುಂಕವನ್ನು ಶೇ 15ಕ್ಕೆ ಹೆಚ್ಚಳ ಮಾಡಿದ್ದಾರೆ.

150 ದಿನಗಳ ನಂತರ ಏನಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಿರುವುದರಿಂದ ಈ ಸುಂಕದ ಬಗ್ಗೆಯೂ ಗೊಂದಲವಿದೆ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಪ್ರಧಾನ ನಿರ್ದೇಶಕ ಅಜಯ್ ಸಹಾಯ್ ಹೇಳಿದ್ದಾರೆ.

'ಈ ಸುಂಕದ ನಾಟಕಕ್ಕೆ ಈಗಲೇ ತೆರೆ ಎಳೆಯುವ ಅಗತ್ಯವಿದೆ' ಎಂದು ಟೆಕ್ನೋಕ್ರಾಫ್ಟ್ ಇಂಡಸ್ಟ್ರೀಸ್ ಇಂಡಿಯಾದ ಸಂಸ್ಥಾಪಕ ಅಧ್ಯಕ್ಷ ಶರದ್ ಕುಮಾರ್ ಸರಾಫ್ ಹೇಳಿದ್ದಾರೆ. ಭಾರತಕ್ಕೆ ಅಮೆರಿಕವು ಪ್ರಮುಖ ಮಾರುಕಟ್ಟೆಯಾಗಿದ್ದು, ಸುಂಕದ ಮೇಲಿನ ಅನಿಶ್ಚಿತತೆಯು ವ್ಯವಹಾರದ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.



ತೇಜಸ್ ಅವಘಡ: ಸ್ಪಷ್ಟನೆ

ನವದೆಹಲಿ: ಇತ್ತೀಚೆಗೆ ತೇಜಸ್ ಜೆಟ್ ವಿಮಾನ ಅಪಘಾತಕ್ಕೆ ಈಡಾದ ಕಾರಣ ಭಾರತೀಯ ವಾಯುಪಡೆಯ (ಐಎಎಫ್) 30ಕ್ಕೂ ಹೆಚ್ಚು ತೇಜಸ್ ಲಘು ಯುದ್ಧ ವಿಮಾನಗಳನ್ನು 'ನಿಯಮಿತ ನಿರ್ವಹಣಾ ತಪಾಸಣೆ'ಗೆ ಒಳಪಡಿಸಲಾಗಿದೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಐಎಎಫ್ ಮತ್ತು ವಿಮಾನ ತಯಾರಿಕಾ ಸಂಸ್ಥೆ ಎಚ್‌ಎಎಲ್ 'ಘಟನೆಗೆ ಕಾರಣವಾದ ಅಂಶಗಳ ವಿಶ್ಲೇಷಣೆ' ಮಾಡುತ್ತಿವೆ ಮತ್ತು ವಿಶ್ಲೇಷಣೆಯ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

ಎಚ್‌ಎಎಲ್ ನೀಡಿರುವ ಹೇಳಿಕೆಯಲ್ಲಿ, 'ತೇಜಸ್ ಅಪಘಾತದ (ಅಪ್ಪಳಿಸಿರುವ) ಬಗ್ಗೆ ಯಾವುದೇ ವರದಿ ಇಲ್ಲ. ಸಣ್ಣ ಪ್ರಮಾಣದ ತಾಂತ್ರಿಕ ತೊಂದರೆ ಅವಘಡಕ್ಕೆ ಕಾರಣ ಇರಬಹುದು' ಎಂದು ತಿಳಿಸಿದೆ.

2024ರ ಮಾರ್ಚ್‌ನಲ್ಲಿ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಪತನಗೊಂಡಿತ್ತು. 2025ರ ನವೆಂಬರ್‌ನಲ್ಲಿ ದುಬೈನಲ್ಲಿ ಹಾರಾಟದ ಹಂತದಲ್ಲೇ ತೇಜಸ್ ವಿಮಾನ ಹೊತ್ತಿ ಉರಿದು ಪೈಲಟ್ ಮೃತಪಟ್ಟಿದ್ದರು. ಫೆ.7ರಂದು ಮತ್ತೊಂದು ವಿಮಾನ ಅವಘಡಕ್ಕೀಡಾಗಿತ್ತು.

ಇತ್ತೀಚಿನ ದಿನಗಳಲ್ಲಿ ಇದು ತೇಜಸ್‌ನ ಎರಡನೇ ಅಪಘಾತವಾಗಿದೆ. ಇತ್ತೀಚೆಗೆ ತರಬೇತಿ ಸಂದರ್ಭದಲ್ಲಿ ತೇಜಸ್ ವಿಮಾನ ಪತನಗೊಂಡಿತ್ತು. ಬ್ರೇಕಿಂಗ್ ವ್ಯವಸ್ಥೆಯಲ್ಲಿ ಆದ ಸಮಸ್ಯೆಯಿಂದ ಅಪಘಾತ ನಡೆದಿದೆ ಎಂದು ಶಂಕಿಸಲಾಗಿದೆ. ಇದನ್ನು ಐಎಎಫ್ ಮತ್ತು ಎಚ್‌ಎಎಲ್ ದೃಢಪಡಿಸಿಲ್ಲ.

ಏರ್‌ಟೆಲ್ ಮನಿಗೆ ₹20 ಕೋಟಿ ಬಂಡವಾಳ

ಬೆಂಗಳೂರು: ಬ್ಯಾಂಕೇತರ ಹಣಕಾಸು ಕಂಪನಿಯಾಗಿರುವ (ಎನ್‌ಬಿಎಫ್‌ಸಿ) ಏರ್‌ಟೆಲ್ ಮನಿ ಲಿಮಿಟೆಡ್‌ನಲ್ಲಿ ಮುಂದಿನ ಕೆಲವು ವರ್ಷಗಳಲ್ಲಿ ₹20 ಸಾವಿರ ಕೋಟಿ ತೊಡಗಿಸುವುದಾಗಿ ಭಾರ್ತಿ ಏರ್‌ಟೆಲ್ ಪ್ರಕಟಿಸಿದೆ.

ಡಿಜಿಟಲ್ ವೇದಿಕೆಯ ಮೂಲಕ ಹಣಕಾಸಿನ ಸೇವೆಗಳನ್ನು ದೇಶದಾದ್ಯಂತ ಇನ್ನಷ್ಟು ಹೆಚ್ಚು ಒದಗಿಸಲು ಏರ್‌ಟೆಲ್ ಉದ್ದೇಶಿಸಿದೆ.

ಭಾರ್ತಿ ಏರ್‌ಟೆಲ್ ಕಂಪನಿಯು ಏರ್‌ಟೆಲ್ ಮನಿ ವೇದಿಕೆಯ ಮೂಲಕ ಈಗಾಗಲೇ ₹9,000 ಕೋಟಿಗಿಂತ ಹೆಚ್ಚಿನ ಮೊತ್ತವನ್ನು ಸಾಲದ ರೂಪದಲ್ಲಿ ವಿತರಣೆ ಮಾಡಿದೆ ಎಂದು ತಿಳಿಸಿದೆ. ಏರ್‌ಟೆಲ್ ಮನಿ ಕಂಪನಿಗೆ ಆರ್‌ಬಿಐ ಕಡೆಯಿಂದ ಎನ್‌ಬಿಎಫ್‌ಸಿ ಪ್ರಮಾಣ-ಪತ್ರವು ಫೆಬ್ರುವರಿ 13ರಂದು ಸಿಕ್ಕಿದೆ.

ಚಾಲಕರಿಗೆ ಕನಿಷ್ಠ ಆದಾಯದ ಖಾತರಿ

2 ವರ್ಷದಲ್ಲಿ 15 ಕೋಟಿ ಚಾಲಕರನ್ನು ನೋಂದಣಿ ಮಾಡಿಕೊಳ್ಳುವ ಗುರಿ: ಶಾ

ನವದೆಹಲಿ (ಪಿಟಿಐ): ಭಾರತ್ ಟ್ಯಾಕ್ಸಿ ಸೇವೆ ನೀಡುತ್ತಿರುವ ಚಾಲಕರಿಗೆ ಪ್ರತಿ ಕಿಲೋ ಮೀಟರ್‌ಗೆ ಕನಿಷ್ಠ ಆದಾಯದ ಖಾತರಿ ಇರಲಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.

ಸಹಕಾರ ತತ್ವದ ಅಡಿ ಕೆಲಸ ನಿರ್ವಹಿಸುವ ಭಾರತ್ ಟ್ಯಾಕ್ಸಿ ವೇದಿಕೆಯು ಲಾಭದ ಮೊತ್ತದಲ್ಲಿ ಶೇ 80ರಷ್ಟನ್ನು ಚಾಲಕರಿಗೆ ನೀಡಲಿದೆ. ಉಳಿದ ಶೇ 20ರಷ್ಟನ್ನು ಬಂಡವಾಳವಾಗಿ ಉಳಿಸಿಕೊಳ್ಳುತ್ತದೆ ಎಂದು ಕ್ಯಾಬ್ ಮತ್ತು ಆಟೊ ಚಾಲಕರೊಂದಿಗೆ ನಡೆದ ಸಂವಾದದಲ್ಲಿ ಸಚಿವರು ತಿಳಿಸಿದ್ದಾರೆ.

ಕ್ಯಾಬ್ ಸೇವೆ ನೀಡುವ ಅಗ್ರಿಗೇಟರ್‌ಗಳು ಕಾರ್ಪೊರೇಟ್ ಲಾಭವನ್ನು ಹೆಚ್ಚಿಸಲು ಚಾಲಕರಿಗೆ ಆದಾಯ ಖಾತರಿ ನಿಗದಿಪಡಿಸುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿವೆ ಎಂದು ಅವರು ದೂರಿದ್ದಾರೆ.

'ನಿಮ್ಮ ವೇದಿಕೆಯಲ್ಲಿ ಕೆಲಸ ಮಾಡುವ ಚಾಲಕರಿಗೆ ಕನಿಷ್ಠ ಆದಾಯದ ಖಾತರಿ ನೀಡುತ್ತಿದ್ದೀರಾ ಎಂದು ಕ್ಯಾಬ್ ಸೇವೆ ನೀಡುವ ಮೂರು ಕಂಪನಿಗಳಿಗೆ ಕೇಳಿದೆ. ಅವರು ಇಲ್ಲ ಎಂದು ಉತ್ತರಿಸಿದ್ದಾರೆ. ಆದರೆ, ನಾವು ಈ ರೀತಿ ಮಾಡುವುದಿಲ್ಲ. ನಿಮಗೆ ಆದಾಯದ ಖಾತರಿ ಇರುತ್ತದೆ...' ಎಂದು ಹೇಳಿದ್ದಾರೆ.

ಸಹಕಾರ ವಲಯದ ಭಾರತ್ ಟ್ಯಾಕ್ಸಿ ಮತ್ತು 'ಅಮೂಲ್' ಕಾರ್ಮಿಕ ಮಾಲೀಕತ್ವದ ಉದ್ಯಮವಾಗಿವೆ ಎಂದು ಸಚಿವರು ಬಣ್ಣಿಸಿದರು. 36 ಲಕ್ಷ ತಾಯಂದಿರು ಮತ್ತು ಸಹೋದರಿಯರು ತಲಾ ₹50 ಹೂಡಿಕೆ ಮಾಡಿ ಅಮೂಲ್ ಸಂಸ್ಥೆ ಕಟ್ಟಿದರು ಎಂದರು. ಇಂದು ಅಮೂಲ್ ವಾರ್ಷಿಕ ₹1.25 ಲಕ್ಷ ಕೋಟಿ ವಹಿವಾಟು ನಡೆಸುವ ಉದ್ಯಮವಾಗಿದೆ.

ಚಾಲಕರ ಸದಸ್ಯತ್ವ ಹೆಚ್ಚಾದಂತೆ ಭಾರತ್ ಟ್ಯಾಕ್ಸಿಯ ಆಡಳಿತ ಮಂಡಳಿಯಲ್ಲಿನ ಸ್ಥಾನಗಳನ್ನು ಚಾಲಕರ ಪ್ರತಿನಿಧಿಗಳಿಗೆ ಮೀಸಲಿಡಲಾಗುವುದು ಎಂದಿದ್ದಾರೆ.

ಮುಂದಿನ ಎರಡು ವರ್ಷಗಳಲ್ಲಿ 15 ಕೋಟಿ ಚಾಲಕರನ್ನು ಈ ವೇದಿಕೆಯಲ್ಲಿ ನೋಂದಣಿ ಮಾಡಿಕೊಳ್ಳುವ ಗುರಿ ಹೊಂದಲಾಗಿದೆ. ಅಲ್ಲದೆ, ಮೂರು ವರ್ಷಗಳಲ್ಲಿ ಪ್ರತಿ ನಗರಕ್ಕೂ ಈ ಸೇವೆ ವಿಸ್ತರಿಸಲಾಗುವುದು ಎಂದು ಹೇಳಿದ್ದಾರೆ.

ಭಾರತ್ ಟ್ಯಾಕ್ಸಿ ಸೇವೆ ಬಳಸುವ ಮಹಿಳೆಯರಿಗೆ ರಕ್ಷಣೆ ನೀಡಲು ಅದರ ಆ್ಯಪ್‌ನಲ್ಲಿ 'ಸಾರಥಿ ದೀದಿ' ಎನ್ನುವ ವೈಶಿಷ್ಟ್ಯ ಅಳವಡಿಸಲಾಗುವುದು. ಇದು ಮಹಿಳೆಯರಿಗೆ ಪ್ರಯಾಣದ ವೇಳೆ ಸುರಕ್ಷತೆ ಕಲ್ಪಿಸಲಿದೆ. ಸೇವೆಗೆ ಸಂಬಂಧಿಸಿದ ದೂರುಗಳನ್ನು ಆನ್‌ಲೈನ್, ಭೌತಿಕ ಮತ್ತು ಸಹಾಯ ಕೇಂದ್ರಕ್ಕೆ ಕರೆ ಮಾಡಿ, ನೀಡಬಹುದಾಗಿದೆ ಎಂದು ತಿಳಿಸಿದ್ದಾರೆ.



ಟ್ಯಾಕ್ಸಿ ಅಡಮಾನವಾಗಿ ಇಟ್ಟುಕೊಂಡು ಸಹಕಾರ ವಲಯದ ಬ್ಯಾಂಕ್‌ಗಳ ಮೂಲಕ ಹೊಸ ವಾಹನಗಳಿಗೆ ಸಾಲ ನೀಡಲಾಗುವುದು

ಅಮಿತ್ ಶಾ, ಕೇಂದ್ರ ಸಹಕಾರ ಸಚಿವ

ನ್ಯಾಯಯುತ ಬೆಲೆಗೆ ತಂಬಾಕು ಖರೀದಿಸಿ

ರೈತರಿಗೆ ಅನ್ಯಾಯವಾದರೆ ಗೋದಾಮು ಜಪ್ತಿ– ಐಟಿಸಿ ಕಂಪನಿಗೆ ಸಚಿವರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಐಟಿಸಿ ಕಂಪನಿಯು ಹರಾಜಿನಲ್ಲಿ ನ್ಯಾಯಯುತ ಬೆಲೆಗೆ ತಂಬಾಕು ಖರೀದಿಸಬೇಕು. ರೈತರಿಗೆ ಅನ್ಯಾಯವಾದರೆ ಕಂಪನಿಯ ಗೋದಾಮುಗಳನ್ನು ಜಪ್ತಿ ಮಾಡಲಾಗುವುದು' ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಸೋಮವಾರ ಇಲ್ಲಿ ಎಚ್ಚರಿಸಿದರು.

ತಂಬಾಕು ಬೆಳೆಗಾರರು, ಜಿಲ್ಲಾಡಳಿತ, ತಂಬಾಕು ಮಂಡಳಿ ಹಾಗೂ ಕಂಪನಿ ಪ್ರತಿನಿಧಿಗಳೊಂದಿಗಿನ ಸಭೆಯಲ್ಲಿ ಅವರು, 'ಹರಾಜು ಆರಂಭಗೊಂಡ ದಿನ ಇದ್ದ ಬೆಲೆ ಅಥವಾ ಅದಕ್ಕಿಂತ ಹೆಚ್ಚಿನ ದರದಲ್ಲೇ ಹರಾಜು ನಡೆಸಬೇಕು. ಕಂಪನಿಯವರು ಮಂಗಳವಾರ ಸಂಜೆ ಒಳಗೆ ನಿರ್ಧಾರ ಪ್ರಕಟಿಸಬೇಕು' ಎಂದು ಸೂಚಿಸಿದರು.

'ಹೊಗೆಸೊಪ್ಪು ಬೆಲೆ ಕುಸಿತದಿಂದ ರೈತರಿಗೆ ನಷ್ಟವಾಗುತ್ತಿದೆ. ಕಡಿಮೆ ಬೆಲೆಗೆ ಹರಾಜು ಮಾಡುವುದು, ಕಡಿಮೆ ಉತ್ಪನ್ನ ಖರೀದಿಸುವುದು ಸರಿಯಲ್ಲ' ಎಂದು ಅಭಿಪ್ರಾಯಪಟ್ಟರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, 'ತಂಬಾಕಿನಿಂದ ಬೇರೆ ಬೆಳೆಗಳಿಗೆ ರೈತರನ್ನು ಪರಿವರ್ತಿಸುವ ಕುರಿತು ಯೋಜನೆಗಳ ಅವಶ್ಯಕತೆ ಇದೆ. ಈ ಸಂಬಂಧ ಚರ್ಚೆಗೆ ಕೇಂದ್ರ ಸರ್ಕಾರದ ಬಳಿಗೆ ನಿಯೋಗ ಕರೆದೊಯ್ಯಲಾಗುವುದು' ಎಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, 'ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ 10 ಕೋಟಿ ಕೆ.ಜಿ.ಗಳಷ್ಟು ತಂಬಾಕು ಉತ್ಪಾದನೆಯ ಗುರಿ ಇತ್ತು. ಆದರೆ ಕೇವಲ 8 ಕೋಟಿ ಕೆ.ಜಿ.ಗಳಷ್ಟೇ ಉತ್ಪನ್ನವಾಗಿದೆ. ನಿರೀಕ್ಷೆಗಿಂತ ಕಡಿಮೆ ಇದ್ದರೂ ಕಂಪನಿ ಖರೀದಿಸದೆ ಸತಾಯಿಸುವುದು ಸರಿಯಲ್ಲ' ಎಂದು ಆಕ್ಷೇಪಿಸಿದರು.

'ಕಂಪನಿಯ ಷೇರು ದರ ವ್ಯತ್ಯಾಸದಿಂದಾಗಿ ಹರಾಜಿನಲ್ಲಿ ವ್ಯತ್ಯಯವಾಗಿದೆ. ಆದರೆ ಹರಾಜು ನಿಲ್ಲಿಸಿಲ್ಲ. ಕೃಷಿಕರ ಸಮಸ್ಯೆಗಳನ್ನು ಪ್ರಧಾನ ಕಚೇರಿ ಗಮನಕ್ಕೆ ತರಲಾಗುವುದು' ಎಂದು ಕಂಪನಿಯ ಪ್ರತಿನಿಧಿಗಳು ತಿಳಿಸಿದರು.

ಮುಖ್ಯಾಂಶಗಳು

- ಪ್ರತಿ ಕೆ.ಜಿ.ಗೆ ಕನಿಷ್ಠ ₹300 ದರ ನಿಗದಿಪಡಿಸಿ
- ಗ್ರೇಡಿಂಗ್‌ನಲ್ಲಿ ಆಗುತ್ತಿರುವ ಮೋಸ ತಪ್ಪಿಸಿ
- ಹರಾಜಿನ ಆರಂಭದಲ್ಲಿದ್ದ ಬೆಲೆಯಲ್ಲೇ ಖರೀದಿ ನಡೆಸಿ

ಬೆಲೆ ಕುಸಿತದಿಂದ ರೈತರೊಬ್ಬರು ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆ ಸೇರಿದ್ದಾರೆ. ಆಂಧ್ರಪ್ರದೇಶ ಮಾರುಕಟ್ಟೆ ತೆರೆಯುವ ಮೊದಲೇ ಇಲ್ಲಿನ ಸಮಸ್ಯೆ ಬಗೆಹರಿಸಿ ಹರಾಜು ಮುಗಿಸಬೇಕು

ಜಿ.ಡಿ. ಹರೀಶ್ ಗೌಡ ಹುಣಸೂರು ಶಾಸಕ

ಡ್ರಗ್ಸ್ ಜಾಲದ ಪಾತಕಿ 'ಎಲ್ ಮೆಂಚೊ' ಹತ್ಯೆ

ಮೆಕ್ಸಿಕೊ ಸಿಟಿ (ಎಪಿ): ಮೆಕ್ಸಿಕೊದ ಡ್ರಗ್ಸ್ ಜಾಲದ ಪಾತಕಿ, 'ಹಾಲಿಸ್ಕೊ ನ್ಯೂ ಜನರೇಷನ್ ಕಾರ್ಟೆಲ್' ಸಂಘಟನೆಯ ನಾಯಕ 'ಎಲ್ ಮೆಂಚೊ' ಎಂದೇ ಕರೆಯುವ ನೆಮೆಸಿಯೊ ರುಬೆನ್ ಒಸೆಗುರಾ ಸೆರ್ವಾಂಟೆಸ್ ಎಂಬಾತನನ್ನು ಮೆಕ್ಸಿಕೊ ಸೇನೆ ಭಾನುವಾರ ಹತ್ಯೆ ಮಾಡಿದೆ.

'ಹಾಲಿಸ್ಕೊದ ಟಪಲ್ಪಾದಲ್ಲಿ ಸೇನೆಯು ನಡೆಸಿದ ಕಾರ್ಯಾಚರಣೆಯಲ್ಲಿ ಎಲ್ ಮೆಂಚೊ ಗಾಯಗೊಂಡ. ಆತನನ್ನು ಮೆಕ್ಸಿಕೊ ನಗರಕ್ಕೆ ವಿಮಾನದಲ್ಲಿ ಕರೆದೊಯ್ಯುವಾಗ ಮೃತಪಟ್ಟ. ಇದೇ ವೇಳೆ, ಇನ್ನೂ ಮೂವರನ್ನು ಹತ್ಯೆ ಮಾಡಲಾಗಿದ್ದು, ಇಬ್ಬರನ್ನು ಬಂಧಿಸಲಾಗಿದೆ. ಶಸ್ತ್ರಸಜ್ಜಿತ ವಾಹನಗಳು, ರಾಕೆಟ್ ಲಾಂಚರ್‌ಗಳು ಮತ್ತು ಇತರ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೂವರು ಯೋಧರು ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ರಕ್ಷಣಾ ಇಲಾಖೆ ತಿಳಿಸಿದೆ.

ಹಾಲಿಸ್ಕೊನಿಂದ ಅಮೆರಿಕಕ್ಕೆ ಅತಿಹೆಚ್ಚು ಪ್ರಮಾಣದಲ್ಲಿ ಫೆಂಟಾನಿಲ್ ಮತ್ತು ಇತರ ಮಾದಕವಸ್ತುಗಳನ್ನು ಸಾಗಿಸಲಾಗುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈ ಕಾರ್ಯಾಚರಣೆಯನ್ನು ಮೆಕ್ಸಿಕೊದ ವಿಶೇಷ ಪಡೆಗಳು ದ್ವಿಪಕ್ಷೀಯ ಸಹಕಾರದ ಚೌಕಟ್ಟಿನೊಳಗೆ ನಡೆಸಿವೆ. ಇದಕ್ಕೆ ಪೂರಕವಾದ ಗುಪ್ತಚರ ಮಾಹಿತಿಯನ್ನು ಅಮೆರಿಕದ ಅಧಿಕಾರಿಗಳು ಒದಗಿಸಿದ್ದಾರೆ' ಎಂದು ಮೆಕ್ಸಿಕೊದಲ್ಲಿರುವ ಅಮೆರಿಕದ ರಾಯಭಾರ ಕಚೇರಿಯು 'ಎಕ್ಸ್'ನಲ್ಲಿ ತಿಳಿಸಿದೆ.

1.5 ಕೋಟಿ ಡಾಲರ್ ಘೋಷಣೆ: ಎಲ್ ಮೆಂಚೊನನ್ನು ಬಂಧಿಸುವ ಬಗ್ಗೆ ಮಾಹಿತಿ ನೀಡಿದವರಿಗೆ 1.5 ಕೋಟಿ ಡಾಲರ್ (ಸುಮಾರು ₹125 ಕೋಟಿ) ಬಹುಮಾನ ನೀಡುವುದಾಗಿ ಅಮೆರಿಕ ಘೋಷಿಸಿತ್ತು.

'ಸಿಜೆಎನ್‌ಜಿ' ಎಂದು ಕರೆಯುವ 'ಹಾಲಿಸ್ಕೊ ನ್ಯೂ ಜನರೇಷನ್ ಕಾರ್ಟೆಲ್' ಮೆಕ್ಸಿಕೊದಲ್ಲಿ ಅತ್ಯಂತ ಶಕ್ತಿಶಾಲಿ ಮತ್ತು ವೇಗವಾಗಿ ಬೆಳೆಯುತ್ತಿರುವ ಕ್ರಿಮಿನಲ್ ಸಂಘಟನೆಗಳಲ್ಲಿ ಒಂದಾಗಿದೆ. ಇದನ್ನು 2009ರಲ್ಲಿ ಸ್ಥಾಪಿಸಲಾಗಿತ್ತು. ಇದನ್ನು ಟ್ರಂಪ್ ಆಡಳಿತವು 'ವಿದೇಶಿ ಭಯೋತ್ಪಾದಕ ಸಂಘಟನೆ' ಎಂದು ಫೆಬ್ರುವರಿಯಲ್ಲಿ ಘೋಷಿಸಿತ್ತು.

ರಸ್ತೆ ತಡೆ, ವಾಹನಗಳಿಗೆ ಬೆಂಕಿ: ಎಲ್ ಮೆಂಚೊನ ಹತ್ಯೆ ನಂತರ ವಿವಿಧ ಭಾಗಗಳಲ್ಲಿ ಹಿಂಸಾಚಾರ ಭುಗಿಲೆದ್ದಿದೆ. ಹಾಲಿಸ್ಕೊ ಮತ್ತು ಇತರ ರಾಜ್ಯಗಳಲ್ಲಿ ರಸ್ತೆ ತಡೆ ಹಾಗೂ ವಾಹನಗಳಿಗೆ ಬೆಂಕಿ ಹಚ್ಚುವ ಘಟನೆಗಳು ನಡೆದಿವೆ.

ಸುರಕ್ಷಿತ ಸ್ಥಳಕ್ಕೆ ತೆರಳಿ: ಭಾರತ

'ದೇಶದಲ್ಲಿ ಸೇನಾ ಕಾರ್ಯಾಚರಣೆ, ಅದಕ್ಕೆ ಸಂಬಂಧಿಸಿದಂತೆ ರಸ್ತೆ ತಡೆ ಹಾಗೂ ಅಪರಾಧ ಚಟುವಟಿಕೆಗಳು ನಡೆಯುತ್ತಿವೆ. ಹಾಲಿಸ್ಕೊ, ತಮೌಲಿಪಾಸ್, ಮೈಕೊಕಾನ್, ಗುರೆರೊ ಮತ್ತು ನ್ಯೂವೊ ಲಿಯಾನ್ ರಾಜ್ಯಗಳಲ್ಲಿರುವ ಭಾರತೀಯ ಪ್ರಜೆಗಳು ಮುಂದಿನ ಸೂಚನೆ ಬರುವವರೆಗೂ ಸುರಕ್ಷಿತ ಪ್ರದೇಶಗಳಲ್ಲಿ ಆಶ್ರಯ ಪಡೆಯಬೇಕು' ಎಂದು ಮೆಕ್ಸಿಕೊದಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಲಹೆ ನೀಡಿದೆ.

ಉ.ಕೊರಿಯಾ: 'ವರ್ಕರ್ಸ್ ಪಾರ್ಟಿ'ಗೆ ಕಿಮ್ ಮರು ಆಯ್ಕೆ

ಸೋಲ್ (ಎಪಿ): ಉತ್ತರ ಕೊರಿಯಾದ ಸರ್ವೋಚ್ಚ ನಾಯಕ ಕಿಮ್ ಜಾಂಗ್ ಉನ್ (42) ಅವರು ದೇಶದ ಆಡಳಿತಾರೂಢ ಪಕ್ಷವಾಗಿರುವ ವರ್ಕರ್ಸ್ ಪಾರ್ಟಿಯ ಅತ್ಯುನ್ನತ ಹುದ್ದೆಗೆ ಮರು ಆಯ್ಕೆಯಾಗಿದ್ದಾರೆ.

ದೇಶದ ಅಣ್ವಸ್ತ್ರ ಶಕ್ತಿಯನ್ನು ಬಲಪಡಿಸುವ ಉದ್ದೇಶದಿಂದ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಮತ್ತೆ ಕಿಮ್ ಅವರನ್ನೇ ಸದಸ್ಯರು ಆಯ್ಕೆ ಮಾಡಿದ್ದಾರೆ ಎಂದು ಇಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಉತ್ತರ ಕೊರಿಯಾದ ಅಧಿಕೃತ ಸುದ್ದಿ ಸಂಸ್ಥೆಯು ಈ ಕುರಿತು ಮಾಹಿತಿ ನೀಡಿದ್ದು, ನಾಲ್ಕು ದಿನಗಳಿಂದ ಪಕ್ಷದ ಸಭೆ ನಡೆದಿದ್ದು, ಸಭೆಯ ಕೊನೆಯ ದಿನವಾದ ಭಾನುವಾರ ಪಕ್ಷದ ಸಾವಿರಾರು ಸದಸ್ಯರು ಸರ್ವಾನುಮತದಿಂದ ಕಿಮ್ ಅವರನ್ನು ಆಯ್ಕೆ ಮಾಡಿದ್ದಾರೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	48090-51399	ಸಿಪ್ಪೆಗೋಟು	8599-24999	ಬೆಟ್ಟೆ	41508-53699
ಚಿಪ್ಪು	33089-40099	ಬೆಟ್ಟೆ	56572-65300	ಬಿಳಿಗೋಟು	28161-42999
ಕೋಕ	15569-38099	ಗೊರಬಲು	28000-41499	ಚಾಲಿ	38169-50111
ಫ್ಯಾಕ್ಟರಿ	10199-27629	ರಾಶಿ	46000-56599	ಕೆಂಪುಗೋಟು	28158-38899
ಹೊಸಚಾಲಿ	43610-48898	ಸರಕು	60199-97296	ರಾಶಿ	51108-56519
ಪುತ್ತೂರು		**ಸಿದ್ದಾಪುರ**		**ಯಲ್ಲಾಪುರ**	
ಕೋಕ	20000-37500	ಬಿಳಿಗೋಟು	27899-39319	ಆಪಿ	63315-63795
ಹೊಸತು	26000-48500	ಚಾಲಿ	45000-50000	ಬಿಳಿಗೋಟು	24312-41109
ಹಳತು	50000-54000	ಕೋಕ	22699-33189	ಕೋಕ	12609-32198
ಸಾಗರ		ಹೊಸಚಾಲಿ	40899-48659	ಹಳೆಚಾಲಿ	40135-52311
ಬಿಳಿಗೋಟು	12105-37666	ಕೆಂಪುಗೋಟು	31089-35399	ಹೊಸಚಾಲಿ	46399-49599
ಚಾಲಿ	23189-45399	ರಾಶಿ	49899-55099	ಕೆಂಪುಗೋಟು	22189-40619
ಕೋಕ	13127-36599	ತಟ್ಟಿಬೆಟ್ಟೆ	38199-44099	ರಾಶಿ	50669-61009
ಕೆಂಪುಗೋಟು	15129-39419			ತಟ್ಟಿಬೆಟ್ಟೆ	37805-51519
ರಾಶಿ	31109-56333				

'ಅಧಿಕಾರದಿಂದ ತೆಗೆದುಹಾಕಲು ಯತ್ನಿಸಿದ್ದ ಯೂನುಸ್'

ಢಾಕಾ (ಪಿಟಿಐ): 'ನಿಕಟಪೂರ್ವ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮುಹಮ್ಮದ್ ಯೂನುಸ್ ಅವರು ನನ್ನನ್ನು ಹಲವು ಬಾರಿ ಅಧಿಕಾರದಿಂದ ತೆಗೆದುಹಾಕಲು ಯತ್ನಿಸಿದ್ದರು' ಎಂದು ಬಾಂಗ್ಲಾದೇಶದ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಆರೋಪಿಸಿದ್ದಾರೆ.

ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷವು (ಬಿಎನ್‌ಪಿ) ದೇಶದ ಅಧಿಕಾರದ ಚುಕ್ಕಾಣಿ ಹಿಡಿದ ನಂತರ ಅಧ್ಯಕ್ಷರು ಯೂನುಸ್ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಬಾಂಗ್ಲಾದ ಪ್ರಮುಖ ಪತ್ರಿಕೆ 'ಕಾಲರ್ ಕಂಠೋ'ಗೆ ನೀಡಿದ ಸಂದರ್ಶನದಲ್ಲಿ ಮೊಹಮ್ಮದ್ ಶಹಾಬುದ್ದೀನ್ ಅವರು ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. 'ಈ ಹಿಂದಿದ್ದ 18 ತಿಂಗಳ ಮಧ್ಯಂತರ ಸರ್ಕಾರದಲ್ಲಿ ನನ್ನೊಂದಿಗೆ ಯಾವೊಂದು ಪ್ರಮುಖ ವಿಷಯವನ್ನು ಚರ್ಚಿಸದಿದ್ದರೂ, ನನ್ನ ವಿರುದ್ಧ ಹಲವು ಸಂಚುಗಳನ್ನು ರೂಪಿಸಲಾಗಿತ್ತು' ಎಂದಿದ್ದಾರೆ.

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ಇರಾನ್ ಕೂಡಲೇ ತೊರೆಯಿರಿ'

ನವದೆಹಲಿ (ಪಿಟಿಐ): ಇರಾನ್‌ನಲ್ಲಿ ಪರಿಸ್ಥಿತಿ ವಿಷಮಗೊಂಡಿರುವ ಬೆನ್ನಲ್ಲೇ, ವಾಣಿಜ್ಯ ವಿಮಾನ ಸೇರಿದಂತೆ ಲಭ್ಯವಿರುವ ಎಲ್ಲ ಸಾರಿಗೆ ಸೌಲಭ್ಯಗಳನ್ನು ಬಳಸಿಕೊಂಡು ದೇಶ ಬಿಟ್ಟು ಮರಳುವಂತೆ ಭಾರತವು ತನ್ನ ನಾಗರಿಕರಿಗೆ ಸೂಚನೆ ನೀಡಿದೆ.

ಟೆಹರಾನ್‌ನಲ್ಲಿ ಮತ್ತೆ ಪ್ರತಿಭಟನೆಗಳು ಆರಂಭಗೊಂಡಿದ್ದು, ಅಮೆರಿಕವು ಸೇನಾ ಕಾರ್ಯಾಚರಣೆ ನಡೆಸುವ ಆತಂಕ ಎದುರಾಗಿದೆ. ಇದರ ಬೆನ್ನಲ್ಲೇ, ಭಾರತದ ನಾಗರಿಕರಿಗೆ ಇರಾನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯು ಸಲಹೆ ನೀಡಿದೆ.

ಕಳೆದ ತಿಂಗಳು ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಹಲವು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಇದಾದ ಬಳಿಕ, ಹೋರಾಟ ತಣ್ಣಗಾಗಿತ್ತು. ಇದೀಗ ಹೊಸತಾಗಿ ಪ್ರತಿಭಟನೆಗಳು ಆರಂಭಗೊಂಡ ಬೆನ್ನಲ್ಲೇ, ರಾಯಭಾರ ಕಚೇರಿಯು ಈ ಸಲಹೆಯನ್ನು ಹೊರಡಿಸಿದೆ.

ಅಂದಾಜಿನ ಪ್ರಕಾರ, ವಿದ್ಯಾರ್ಥಿಗಳು ಸೇರಿದಂತೆ 10 ಸಾವಿರ ಭಾರತೀಯರು ಇರಾನ್‌ನಲ್ಲಿ ನೆಲಸಿದ್ದಾರೆ.

'ಇರಾನ್‌ನಲ್ಲಿ ಪರಿಸ್ಥಿತಿ ಪ್ರಕ್ಷುಬ್ಧಗೊಳ್ಳುತ್ತಿರುವ ಬೆನ್ನಲ್ಲೇ, ಜನವರಿ 5ರಂದು ಹೊರಡಿಸಿದ್ದ ಸಲಹೆ ಮುಂದುವರಿಕೆಯಾಗಿ ಇರಾನ್‌ನಲ್ಲಿ ನೆಲಸಿರುವ ಎಲ್ಲ ಭಾರತೀಯರಿಗೂ ಮಾಹಿತಿ ನೀಡಲಾಗಿದೆ. ವಿದ್ಯಾರ್ಥಿಗಳು, ಉದ್ಯಮಿಗಳು ಹಾಗೂ ಪ್ರವಾಸಿಗರು ಸೇರಿದಂತೆ ಎಲ್ಲರೂ ಭಾರತಕ್ಕೆ ಮರಳುವಂತೆ ಸೂಚನೆ ನೀಡಲಾಗಿದೆ' ಎಂದು ರಾಯಭಾರ ಕಚೇರಿಯು ತಿಳಿಸಿದೆ.

'ಎಲ್ಲ ಭಾರತೀಯರು ಹಾಗೂ ಭಾರತದ ಮೂಲದವರು ಪ್ರತಿಭಟನೆ ನಡೆಯುವ ಸ್ಥಳಗಳಿಗೆ ತೆರಳಬಾರದು, ಯಾವುದೇ ಸಮಸ್ಯೆ ಉಂಟಾದರೂ ರಾಯಭಾರ ಕಚೇರಿ ಸಂಪರ್ಕಿಸಬೇಕು' ಎಂದು ಕೋರಲಾಗಿದೆ.

'ಪ್ರಯಾಣ ಹಾಗೂ ವಲಸೆ ದಾಖಲಾತಿಗಳು, ಪಾಸ್‌ಪೋರ್ಟ್, ಗುರುತಿನ ಚೀಟಿಯನ್ನು ಸುಲಭವಾಗಿ ಸಿಗುವಂತೆ ಇಟ್ಟುಕೊಳ್ಳಲು ಸೂಚನೆ ನೀಡಲಾಗಿದೆ. ಯಾವುದೇ ರೀತಿಯ ನೆರವು ಬೇಕಿದ್ದರೂ ಭಾರತೀಯ ರಾಯಭಾರ ಕಚೇರಿಯನ್ನು ಸಂಪರ್ಕಿಸಬಹುದು' ಎಂದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

'ಸೀಮಿತ ದಾಳಿಯೂ ಆಕ್ರಮಣಕಾರಿ ಕೃತ್ಯ'

ಟೆಹರಾನ್ (ಎಎಫ್‌ಪಿ): 'ಇರಾನ್ ಮೇಲೆ ಅಮೆರಿಕವು ಸೀಮಿತ ದಾಳಿ ನಡೆಸಿದರೂ, ಆಕ್ರಮಣಕಾರಿ ಕೃತ್ಯವೆಂದೇ ಪರಿಗಣಿಸಲಾಗುತ್ತದೆ. ಅದು ಪ್ರತಿಕ್ರಿಯೆಯನ್ನು ಪ್ರಚೋದಿಸುತ್ತದೆ' ಎಂದು ಅಮೆರಿಕಕ್ಕೆ ಇರಾನ್ ಎಚ್ಚರಿಕೆ ನೀಡಿದೆ.

ಗ್ರಾಮೀಣ 'ಉದ್ಯೋಗ'ಕ್ಕೆ ಗ್ರಹಣ

ಒಂದನೇ ಪುಟದಿಂದ...

2009ರಲ್ಲಿ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' ಎಂದು ಮರು ನಾಮಕರಣ ಮಾಡಲಾಯಿತು. ಎರಡು ದಶಕಗಳು ಗ್ರಾಮೀಣ ಕೂಲಿ ಕಾರ್ಮಿಕರಿಗೆ ವರ್ಷದಲ್ಲಿ 100 ದಿನಗಳು ಉದ್ಯೋಗ ನೀಡುವ ಜತೆಗೆ, ಗ್ರಾಮಗಳಲ್ಲಿ ರಸ್ತೆ, ಕುಡಿಯುವ ನೀರು, ಕೆರೆ ಸಂರಕ್ಷಣೆ, ಶೌಚಾಲಯಗಳ ನಿರ್ಮಾಣ, ಹೊಲ, ತೋಟದ ಕೆಲಸಗಳು, ಜಾನುವಾರು ಕೊಟ್ಟಿಗೆಗಳು, ಶಾಲಾ, ಅಂಗನವಾಡಿ ಕಟ್ಟಡಗಳು ಸೇರಿದಂತೆ ಹಲವು ಆಸ್ತಿಗಳನ್ನು ಸೃಜಿಸುವಲ್ಲಿ ಮಹತ್ವದ ಪಾತ್ರವಹಿಸಿತ್ತು. ರಾಜ್ಯಗಳಲ್ಲಿ ಅನುಷ್ಠಾನಗೊಳ್ಳುವ ಯೋಜನೆಯ ಸಂಪೂರ್ಣ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತಿತ್ತು. ಆಡಳಿತಾತ್ಮಕ ವೆಚ್ಚದ ರೂಪದಲ್ಲಿ ಶೇ 10ರಷ್ಟನ್ನು ಮಾತ್ರ ರಾಜ್ಯ ಸರ್ಕಾರ ನೀಡುತ್ತಿತ್ತು.

ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರ ಈಗ ನರೇಗಾ ಹೆಸರು ಬದಲಿಸಿ, 'ವಿಕಸಿತ ಭಾರತ-ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ' (ವಿಬಿ- ಜಿ ರಾಮ್ ಜಿ) ಕಾಯ್ದೆ ಜಾರಿಗೆ ತಂದಿದೆ. ಹೊಸ ಯೋಜನೆಯಲ್ಲಿ ಮೊದಲಿದ್ದ 100 ದಿನಗಳನ್ನು 125 ದಿನಗಳಿಗೆ ಹೆಚ್ಚಿಸಿದೆ.

ಕೇಂದ್ರ ಹಾಗೂ ರಾಜ್ಯದ ಪಾಲನ್ನು 60:40ರ ಅನುಪಾತದಲ್ಲಿ ನಿಗದಿ ಮಾಡಿದೆ. 2026-27ನೇ ಹಣಕಾಸು ವರ್ಷದಲ್ಲಿ ಯೋಜನೆಗೆ ಇಡೀ ದೇಶಕ್ಕೆ ₹1.51 ಲಕ್ಷ ಕೋಟಿ ನಿಗದಿ ಮಾಡಿದ್ದು, ಇದರಲ್ಲಿ ₹95,600 ಕೋಟಿ ಮೊತ್ತವನ್ನು ಕೇಂದ್ರ ಸರ್ಕಾರ ಭರಿಸಲಿದೆ.

ಹೊಸ ಕಾಯ್ದೆಯನ್ನು ಕರ್ನಾಟಕ ತೀವ್ರವಾಗಿ ವಿರೋಧಿಸಿದ್ದು, ಅದಕ್ಕಾಗಿ ವಿಶೇಷ ಅಧಿವೇಶನ ಕರೆದಿತ್ತು. ವಿಬಿ ಜಿ ರಾಮ್ ಜಿ ಕಾಯ್ದೆ ರದ್ದುಪಡಿಸಿ, ನರೇಗಾ ಕಾಯ್ದೆಯನ್ನು ಮರು ಸ್ಥಾಪಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ರಾಜ್ಯ ಸರ್ಕಾರ ಮಂಡಿಸಿದ ನಿರ್ಣಯವು ಉಭಯ ಸದನಗಳಲ್ಲಿ ಅಂಗೀಕಾರಗೊಂಡಿತ್ತು.

'ಹೊಸ ಯೋಜನೆಯನ್ನು ರಾಜ್ಯ ಸರ್ಕಾರ ತೀವ್ರವಾಗಿ ವಿರೋಧಿಸುತ್ತಿರುವ ಕಾರಣ ಕ್ರಿಯಾ ಯೋಜನೆ ಸಿದ್ಧಪಡಿಸಿಲ್ಲ. ತನ್ನ ಪಾಲಿನ ಶೇ 40ರಷ್ಟು ಮೊತ್ತವನ್ನು ಬಜೆಟ್‌ನಲ್ಲಿ ಮೀಸಲಿಟ್ಟರೆ ಮಾತ್ರ ವರ್ಷದ ಮಧ್ಯದ ಅವಧಿಯಲ್ಲಾದರೂ ಯೋಜನೆಯ ಅನುಷ್ಠಾನಕ್ಕೆ ಪ್ರಯತ್ನ ಮಾಡಬಹುದು. ಇಲ್ಲದಿದ್ದರೆ ಅದೂ ಸಾಧ್ಯವಿಲ್ಲ' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಇಚ್ಛಿಸದ ಗ್ರಾಮೀಣಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿ.

ಬಾಕಿ ಕೆಲಸ ತ್ವರಿತಕ್ಕೆ ಸೂಚನೆ

ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ 2025-26ನೇ ಸಾಲಿನಲ್ಲಿ ಕೈಗೊಂಡಿದ್ದ ನರೇಗಾ ಯೋಜನೆಯ ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ ಸೂಚಿಸಿದೆ.

ನರೇಗಾ ಯೋಜನೆಯಡಿ ಇದುವರೆಗೆ ಸೃಜಿಸಲಾದ ಮಾನವ ದಿನಗಳನ್ನು ಪರಿಶೀಲಿಸಿ, ಪ್ರಸ್ತುತ ಕೂಲಿಕಾರರ ಬೇಡಿಕೆ ಎಷ್ಟಿದೆ ಎಂಬ ವಾಸ್ತವ ಲೆಕ್ಕಾಚಾರಗಳ ಆಧಾರದಲ್ಲಿ ಮರುಮೌಲ್ಯಮಾಪನ ಮಾಡಿಕೊಳ್ಳಬೇಕು. ಪಿಡಿಒಗಳೊಂದಿಗೆ ಸಭೆ ನಡೆಸಿ, ನಿಖರ ಮಾಹಿತಿ ಕಲೆಹಾಕಬೇಕು. ಸದಸ್ಯಕ್ಕೆ 10 ಕಾಮಗಾರಿಗಳನ್ನು ಪಟ್ಟಿ ಮಾಡಿಟ್ಟುಕೊಳ್ಳಬೇಕು ಎಂದು ಪಿಡಿಒಗಳಿಗೆ ಜಿಲ್ಲಾ ಪಂಚಾಯಿತಿ ಸಿಇಒಗಳು ಸೂಚಿಸಿದ್ದಾರೆ.

ರಸ್ತೆ, ಕಾಂಪೌಂಡ್ ಸೇರಿದಂತೆ ಗ್ರಾಮೀಣ ಆಸ್ತಿಗಳ ಸೃಜನೆಗೆ ಪ್ರಸ್ತುತ ಲಭ್ಯ ಇರುವ ಇತರೆ ಯೋಜನೆಗಳನ್ನು ಬಳಸಿಕೊಳ್ಳುವ ಕುರಿತು ನಿಖರ ವರದಿಯನ್ನು ಆಯುಕ್ತರಿಗೆ ಸಲ್ಲಿಸಬೇಕು ಎಂದು ಎಲ್ಲ ಜಿಲ್ಲಾ ಪಂಚಾಯಿತಿಗಳ ಸಿಇಒಗಳಿಗೆ ಗ್ರಾಮೀಣಾಭಿವೃದ್ಧಿ ಇಲಾಖೆ ಸೂಚಿಸಿದೆ.

7,000 ಸಿಬ್ಬಂದಿ ಕೆಲಸಕ್ಕೆ ಕುತ್ತು

ನರೇಗಾ ಯೋಜನೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ 7,000ಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದು, ಯೋಜನೆ ಸ್ಥಗಿತವಾದರೆ ಎಲ್ಲರೂ ಕೆಲಸ ಕಳೆದುಕೊಳುವ ಭೀತಿ ಎದುರಿಸುತ್ತಿದ್ದಾರೆ. ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಗತ್ಯವಾದ ಎಂಜಿನಿಯರ್, ತಾಂತ್ರಿಕ ತಜ್ಞರು, ಯೋಜನಾ ಸಂಯೋಜಕರು, ನಿರ್ವಾಹಕರು, ದೂರು ನಿರ್ವಹಣಾ ಸಿಬ್ಬಂದಿಗಳು ಸೇರಿದಂತೆ ವಿವಿಧ ಹಂತದ ಸಿಬ್ಬಂದಿ ಹಲವು ವರ್ಷಗಳಿಂದ ಹೊರ ಗುತ್ತಿಗೆ ಆಧಾರದಲ್ಲೇ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ.

'ನರೇಗಾ ಯೋಜನೆಯನ್ನೇ ನಂಬಿಕೊಂಡು ಕೆಲಸ ಮಾಡುತ್ತಿದ್ದೇವೆ. 5 ತಿಂಗಳಿಂದ ವೇತನವೂ ಪಾವತಿಯಾಗಿಲ್ಲ. ಮುಂದಿನ ಹಣಕಾಸು ವರ್ಷಕ್ಕೆ ಸೇವೆ ಮುಂದುವರಿಯುವ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಯಾವುದೇ ಭರವಸೆ ಸಿಕ್ಕಿಲ್ಲ. ಕುಟುಂಬಗಳು ಬೀದಿಗೆ ಬೀಳುವ ಸ್ಥಿತಿ ಎದುರಾಗಿದೆ' ಎನ್ನುತ್ತಾರೆ ತಾಂತ್ರಿಕ ತಜ್ಞ ರಮೇಶ್.



ಮೃಣಾಲ್ ಠಾಕೂರ್

ಮದುವೆ ಮಂಟಪದತ್ತ ವಿರೋಶ್ ಜೋಡಿ



ರಶ್ಮಿಕಾ ಮಂದಣ್ಣ



ವಿಜಯ್ ದೇವರಕೊಂಡ

ನಟ ವಿಜಯ್ ದೇವರಕೊಂಡ ಜೊತೆ ಮದುವೆಯನ್ನು ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಖಚಿತಪಡಿಸಿದ್ದು, ಈ ಮೂಲಕ ವದಂತಿಗೆ ತೆರೆಬಿದ್ದಿದೆ.

ಕಳೆದ ಕೆಲವು ತಿಂಗಳಿಂದ ರಶ್ಮಿಕಾ–ವಿಜಯ್ ಮದುವೆಯ ಬಗ್ಗೆ ಗಾಳಿಸುದ್ದಿ ಇತ್ತು. ಹಲವು ಬಾರಿ ಜೊತೆಯಾಗಿ ಕಾಣಿಸಿಕೊಂಡರೂ ಈ ಬಗ್ಗೆ ಇಬ್ಬರೂ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಇದೀಗ ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಈ ಕುರಿತು ಬರೆದುಕೊಂಡಿರುವ ರಶ್ಮಿಕಾ, 'ನೀವು ಪ್ರೀತಿಯಿಂದ ನಮಗೆ 'ವಿರೋಶ್' ಎಂಬ ಹೆಸರು ನೀಡಿದಿರಿ. ಇದೇ ಹೆಸರಿನಲ್ಲಿ ನಾವಿಂದು ಒಂದಾಗುತ್ತಿದ್ದೇವೆ. ಹೀಗಾಗಿ ನಾವು ಇದನ್ನು 'ದಿ ವೆಡ್ಡಿಂಗ್ ಆಫ್ ವಿರೋಶ್' ಎಂದು ಕರೆಯುತ್ತಿದ್ದೇವೆ. ನಿಮ್ಮ ಪ್ರೀತಿಗೆ ಋಣಿ. ನೀವು ಸದಾ ನಮ್ಮ ಪಯಣದ ಒಂದು ಭಾಗ' ಎಂದು ಉಲ್ಲೇಖಿಸಿದ್ದಾರೆ.

2017ರಲ್ಲಿ ತೆಲುಗಿನ 'ಗೀತ ಗೋವಿಂದಂ' ಸಿನಿಮಾ ಸೆಟ್‌ನಲ್ಲಿ ಭೇಟಿಯಾದ ವಿಜಯ್–ರಶ್ಮಿಕಾ ಬಳಿಕ 2019ರಲ್ಲಿ 'ಡಿಯರ್ ಕಾಮ್ರೆಡ್'ನಲ್ಲೂ ಜೊತೆಯಾಗಿ ನಟಿಸಿದ್ದರು. ಇನ್ನಷ್ಟೇ ಬಿಡುಗಡೆಯಾಗಬೇಕಿರುವ ವಿಜಯ್ ನಟನೆಯ 14ನೇ ಸಿನಿಮಾ 'ರಣಬಾಲಿ'ಯಲ್ಲೂ ಈ ಜೋಡಿ ಜೊತೆಯಾಗಿ ನಟಿಸಿದೆ. ಮದುವೆಯ ದಿನಾಂಕ ಹಾಗೂ ಸ್ಥಳವನ್ನು ರಶ್ಮಿಕಾ ಅಧಿಕೃತವಾಗಿ ಘೋಷಿಸಿಲ್ಲ. ಫೆ.26ರಂದು ರಾಜಸ್ಥಾನದ ಉದಯಪುರದಲ್ಲಿ ಮದುವೆ ನಡೆಯಲಿದೆ ಎನ್ನಲಾಗಿದೆ.

ಕೊಡಗಿನ ವಿರಾಜಪೇಟೆಯ ರಶ್ಮಿಕಾ ಮಂದಣ್ಣ ಕನ್ನಡದ 'ಕಿರಿಕ್ ಪಾರ್ಟಿ' ಸಿನಿಮಾ ಮೂಲಕ ಚಿತ್ರರಂಗಕ್ಕೆ ಹೆಜ್ಜೆ ಇಟ್ಟವರು. ಕನ್ನಡದಲ್ಲಿ 'ಅಂಜನಿಪುತ್ರ', 'ಯಜಮಾನ', 'ಚಮಕ್' 'ಪೊಗರು' ಸಿನಿಮಾಗಳಲ್ಲಿ ನಟಿಸಿದ್ದಾರೆ. 'ಚಲೋ' ಸಿನಿಮಾದ ಮೂಲಕ ಅವರು ಟಾಲಿವುಡ್ ಪ್ರವೇಶಿಸಿದರು. ತೆಲುಗಿನಲ್ಲೇ ಹೆಚ್ಚಿನ ಸಿನಿಮಾಗಳಿಗೆ ರಶ್ಮಿಕಾ ಬಣ್ಣಹಚ್ಚಿದ್ದಾರೆ. ಅಲ್ಲು ಅರ್ಜುನ್ ನಟನೆಯ ತೆಲುಗು ಸಿನಿಮಾ 'ಪುಷ್ಪ' ಸರಣಿ ಹಾಗೂ ರಣ್‌ಬೀರ್ ಕಪೂರ್ ನಟನೆಯ ಹಿಂದಿ ಸಿನಿಮಾ 'ಆ್ಯನಿಮಲ್' ರಶ್ಮಿಕಾ ಬಣ್ಣದ ಬದುಕಿಗೆ ದೊಡ್ಡ ತಿರುವು ನೀಡಿದ ಸಿನಿಮಾಗಳು.

ನರಕಕ್ಕೆ 'ಟಿಕೆಟ್' ನೀಡಿದ ಯಶ್



ಯಶ್

ಕೆಲ ದಿನಗಳ ಹಿಂದೆ ಬಿಡುಗಡೆಗೊಂಡ 'ಟಾಕ್ಸಿಕ್: ಎ ಫೇರಿಟೇಲ್ ಫಾರ್ ಗ್ರೋನ್ ಅಪ್ಸ್' ಸಿನಿಮಾದ ಟೀಸರ್ ಎಲ್ಲರ ಗಮನಸೆಳೆದಿದೆ. ಸಿನಿಮಾದಲ್ಲಿ ನಟ ಯಶ್ ಹಲವು ಅವತಾರಗಳಲ್ಲಿ ಪ್ರೇಕ್ಷಕರೆದುರಿಗೆ ಬರುವ ಸುಳಿವು ನೀಡಿದ್ದಾರೆ. 'ರಾಯ'ನಾಗಿ ಕಾಣಿಸಿಕೊಂಡಿರುವ ಯಶ್ 'ಟಿಕೆಟ್' ಎಂಬ ಪಾತ್ರದಲ್ಲೂ ಮಿಂಚಿದ್ದಾರೆ.

ಉದ್ದನೆಯ ಗಡ್ಡ ಬಿಟ್ಟು 'ರಾಯ'ನಾಗಿ ಕಾಣಿಸಿಕೊಂಡಿದ್ದ ಯಶ್ ಯಾರೂ ಊಹಿಸದ ರೀತಿಯಲ್ಲಿ 'ಟಿಕೆಟ್' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. 'ಇದು ನರಕಕ್ಕಿರುವ ನಿಮ್ಮ ಟಿಕೆಟ್' ಎಂದು ಪಾತ್ರವನ್ನು ಯಶ್ ಬಣ್ಣಿಸಿದ್ದಾರೆ. ಗಡ್ಡಕ್ಕೆ ಕತ್ತರಿ ಹಾಕಿ ಭಿನ್ನವಾದ ಲುಕ್‌ನಲ್ಲಿ ಯಶ್ ಬಂದಿದ್ದಾರೆ. ತಮ್ಮದೇ ಡಾನ್ಸ್ ಶೈಲಿಯನ್ನೂ ಇಲ್ಲಿ ತೆರೆದಿಟ್ಟಿದ್ದಾರೆ. ಈ ಮೂಲಕ ಸಿನಿಮಾದಲ್ಲಿನ ಅವರ ಎರಡನೇ ಲುಕ್ ಪರಿಚಯಿಸಿದ್ದಾರೆ. ಜೊತೆಗೆ ಡಬಲ್ ರೋಲ್‌ನ ಆಖ್ಯಾನಕ್ಕೆ ಮತ್ತಷ್ಟು ಪುಷ್ಟಿ ದೊರೆತಿದೆ.

ಸಿನಿಮಾದ ಟೀಸರ್ ಯುಟ್ಯೂಬ್‌ನಲ್ಲಿ ಟ್ರೆಂಡಿಂಗ್‌ನಲ್ಲಿದ್ದು, ಇದರಲ್ಲಿರುವ ದೃಶ್ಯಗಳನ್ನು ಆಧಾರವಾಗಿಟ್ಟುಕೊಂಡು ಪ್ರೇಕ್ಷಕರು, ಅಭಿಮಾನಿಗಳು ಕಥೆಯನ್ನು ಊಹಿಸುತ್ತಿದ್ದಾರೆ. ಬಿಡುಗಡೆಯಾದ 24 ಗಂಟೆಗಳಲ್ಲೇ ಸಿನಿಮಾದ ಟೀಸರ್ 19.7 ಕೋಟಿ ವೀಕ್ಷಣೆ ಪಡೆದಿದೆ. 'ಟಾಕ್ಸಿಕ್'ನಲ್ಲಿ ನಾಯಕರಾಗಿ, ಸಹ–ಬರಹಗಾರರಾಗಿ, ಸಹ–ನಿರ್ಮಾಪಕರಾಗಿ ಯಶ್ ಹೊಸ ಹೆಜ್ಜೆ ಇಟ್ಟಿದ್ದು, ವೆಂಕಟ್ ಕೆ.ನಾರಾಯಣ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಮಾನ್‌ಸ್ಟರ್‌ಮೈಂಡ್ ಕ್ರಿಯೇಷನ್ಸ್‌ನಡಿ ಯಶ್ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ.

ಈ ಸಿನಿಮಾ ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಏಕಕಾಲದಲ್ಲಿ ಚಿತ್ರೀಕರಣಗೊಂಡಿದೆ. ಸಿನಿಮಾವು ಹಿಂದಿ, ತಮಿಳು, ತೆಲುಗು, ಮಲಯಾಳ ಸೇರಿದಂತೆ ಹಲವು ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಡಬ್ ಆಗಿ ಮಾರ್ಚ್ 19ರಂದು ರಿಲೀಸ್ ಆಗಲಿದೆ. ಜೆ.ಜೆ.ಪೆರ್ರಿ 'ಟಾಕ್ಸಿಕ್'ನ ಸಾಹಸ ದೃಶ್ಯಗಳ ಸಂಯೋಜನೆ ಮಾಡಿದ್ದು, ರವಿ ಬಸ್ರೂರು ಸಂಗೀತ ನಿರ್ದೇಶನ, ರಾಜೀವ್ ರವಿ ಛಾಯಾಚಿತ್ರಗ್ರಹಣ, ಉಜ್ವಲ್ ಕುಲಕರ್ಣಿ ಸಂಕಲನ, ಟಿಪಿ ಅಬಿದ್ ನಿರ್ಮಾಣ ವಿನ್ಯಾಸ ಚಿತ್ರಕ್ಕಿದೆ.

ಅಲ್ಲು ಅರ್ಜುನ್ ಜೊತೆ ನಟಿಸುವಾಸೆ

ಸದ್ಯ ಬಾಲಿವುಡ್ ಹಾಗೂ ಟಾಲಿವುಡ್‌ನಲ್ಲಿ ಸಾಲು ಸಾಲು ಸಿನಿಮಾಗಳನ್ನು ಮಾಡುತ್ತಿರುವ ನಟಿ ಮೃಣಾಲ್ ಠಾಕೂರ್ ನಟ ಅಲ್ಲು ಅರ್ಜುನ್ ಅವರೊಂದಿಗೆ ಸಿನಿಮಾ ಮಾಡುವ ಆಸೆ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ 'ಪಿಟಿಐ' ಜೊತೆಗಿನ ಸಂದರ್ಶನದಲ್ಲಿ ಅವರು ಮಾತನಾಡಿದ್ದಾರೆ. ಅಲ್ಲು ಅರ್ಜುನ್ ಹಾಗೂ ನಿರ್ದೇಶಕ ಅಟ್ಲಿ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ 'ಎಎ26Xಎ6' ಸಿನಿಮಾದಲ್ಲಿ ಮೃಣಾಲ್ ನಟಿಸಲಿದ್ದಾರೆ ಎನ್ನುವ ವದಂತಿ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, 'ನಾನು ಖಂಡಿತವಾಗಿಯೂ ಈ ಸಿನಿಮಾದ ಭಾಗವಾಗಲು ಬಯಸುತ್ತೇನೆ. ಈ ಬಗ್ಗೆ ನಿರೀಕ್ಷೆಯಲ್ಲಿದ್ದೇನೆ. 'ಪುಷ್ಪ' ಸಿನಿಮಾ ಸರಣಿ ಹಾಗೂ ಅಲ್ಲು ಅರ್ಜುನ್ ಅವರ ಉಳಿದ ಸಿನಿಮಾಗಳನ್ನು ನೋಡಿದ ಬಳಿಕ ಅವರ ದೊಡ್ಡ ಅಭಿಮಾನಿಯಾಗಿದ್ದೇನೆ' ಎಂದಿದ್ದಾರೆ.

'ನಾನು ಹಿಂದಿ ಹಾಗೂ ದಕ್ಷಿಣ ಭಾರತೀಯ ಸಿನಿಮಾಗಳಲ್ಲಿ ನಟಿಸುವುದನ್ನು ಮುಂದುವರಿಸಲಿದ್ದೇನೆ. ತಮಿಳಿನಲ್ಲೂ ನಾನು ಸಿನಿಮಾ ಮಾಡುತ್ತೇನೆ' ಎನ್ನುತ್ತಾರೆ ಮೃಣಾಲ್.

ಅಶಿಸ್ತಿನ ವರ್ತನೆ ಹತ್ತಿಕ್ಕಲು ಕ್ರಮ: ವಿ.ವಿ

ಜೆಎನ್‌ಯು ಕ್ಯಾಂಪಸ್‌ನಲ್ಲಿ ಘರ್ಷಣೆ • ಹಲವು ವಿದ್ಯಾರ್ಥಿಗಳಿಗೆ ಗಾಯ

ಮುಖ್ಯಾಂಶಗಳು
- ಎಡಪಂಥೀಯ ವಿದ್ಯಾರ್ಥಿಗಳಿಂದ ಕಲ್ಲು ತೂರಾಟ: ಎಬಿವಿಪಿ
- ಕ್ಯಾಂಪಸ್‌ನ ಒಳಗಿರುವ ಹಲವು ಶೈಕ್ಷಣಿಕ ಕಟ್ಟಡಗಳಿಗೆ ಬೀಗ

ನವದೆಹಲಿ (ಪಿಟಿಐ): ಇಲ್ಲಿನ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಆವರಣದಲ್ಲಿ ಭಾನುವಾರ ತಡರಾತ್ರಿ ನಡೆದ ಸಂಘರ್ಷದಲ್ಲಿ ಹಲವು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಘಟನೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ವಿ.ವಿಯ ಆಡಳಿತ ಮಂಡಳಿ, ಅಶಿಸ್ತು ತೋರುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಎಡಪಂಥೀಯ ಸಂಘಟನೆಯ ವಿದ್ಯಾರ್ಥಿಗಳು ಹಿಂಸಾಚಾರದಲ್ಲಿ ತೊಡಗಿ, ಕಲ್ಲು ತೂರಾಟ ನಡೆಸಿದ್ದಾರೆ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ (ಎಬಿವಿಪಿ) ಸಂಘಟನೆಯ ಮುಖಂಡರು ಆರೋಪಿಸಿದ್ದಾರೆ.

'ಆವರಣದಲ್ಲಿ ಶೈಕ್ಷಣಿಕ ಪರಿಸರವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು. ಅಶಿಸ್ತಿನ ವರ್ತನೆ ತೋರಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಜೆಎನ್‌ಯು ಬಿಡುಗಡೆಗೊಳಿಸಿರುವ ಪ್ರಕಟಣೆಯಲ್ಲಿ ತಿಳಿಸಿದೆ.

'ಕ್ಯಾಂಪಸ್‌ನ ಒಳಗಿರುವ ಹಲವು ಶೈಕ್ಷಣಿಕ ಕಟ್ಟಡಗಳಿಗೆ ಪ್ರತಿಭಟನೆನಿರತ ವಿದ್ಯಾರ್ಥಿಗಳು ಬೀಗ ಹಾಕಿರುವುದು ಕಂಡುಬಂದಿದೆ. ಪ್ರತಿಭಟನಕಾರರು ಗ್ರಂಥಾಲಯ ಪ್ರವೇಶಿಸಿ, ಪ್ರತಿಭಟನೆಗೆ ಕೈ ಜೋಡಿಸುವಂತೆ ವಿದ್ಯಾರ್ಥಿಗಳಿಗೆ ಬೆದರಿಕೆ ಹಾಕಿದ್ದಾರೆ. ಈ ವೇಳೆ ಎರಡು ಕಡೆಗಳಲ್ಲಿ ಸಂಘರ್ಷ ನಡೆದಿದ್ದು, ಈ ವಿಚಾರವನ್ನು ಜೆಎನ್‌ಯು ಆಡಳಿತ ಮಂಡಳಿಯೂ ಗಂಭೀರವಾಗಿ ಪರಿಗಣಿಸಿದೆ' ಎಂದು ತಿಳಿಸಿದೆ.

ಎಲ್ಲಾ ವಿದ್ಯಾರ್ಥಿಗಳು ಶಾಂತಿ ಕಾಪಾಡಬೇಕು ಹಾಗೂ ಆವರಣದಲ್ಲಿ ಹಿಂದೆ ನಿಗದಿಯಾಗಿರುವ ಶೈಕ್ಷಣಿಕ ಚಟುವಟಿಕೆಗಳು ಎಂದಿನಂತೆ ಮುಂದುವರಿಯಲಿದೆ ಎಂದು ತಿಳಿಸಿದೆ.



ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಆವರಣದಲ್ಲಿ ಭಾನುವಾರ ರಾತ್ರಿ ನಡೆದ ಸಂಘರ್ಷದಲ್ಲಿ ಗಾಯಗೊಂಡವರ ಕುರಿತು ಎಬಿವಿಪಿ ರಾಜ್ಯ ಕಾರ್ಯದರ್ಶಿ ವಿಕಾಸ್ ಪಟೇಲ್ ಮಾಹಿತಿ ನೀಡಿದರು –ಪಿಟಿಐ ಚಿತ್ರ

ಎಬಿವಿಪಿ ಆರೋಪ: 'ಗ್ರಂಥಾಲಯದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಮೇಲೆ ಎಡಪಂಥೀಯ ಸಂಘಟನೆಯ ವಿದ್ಯಾರ್ಥಿಗಳು ಹಲ್ಲೆ ನಡೆಸಿದ್ದರಿಂದ ಹಿಂಸಾಚಾರ ಸಂಭವಿಸಿತ್ತು' ಎಂದು ಎಬಿವಿಪಿ ಆರೋಪಿಸಿದೆ.

'ಹಲವು ವಿದ್ಯಾರ್ಥಿಗಳನ್ನು ಶೌಚಾಲಯದಲ್ಲಿ ಕೂಡಿ ಹಾಕಲಾಗಿತ್ತು. ಅಲ್ಲದೇ, ಗ್ರಂಥಾಲಯವನ್ನೇ ಬಂದ್ ಮಾಡುವಂತೆ ಒತ್ತಾಯಿಸುತ್ತಿದ್ದರು' ಎಂದು ಎಬಿವಿಪಿ ರಾಜ್ಯ ಕಾರ್ಯದರ್ಶಿ ವಿಕಾಸ್ ಪಟೇಲ್ ದೂರಿದ್ದಾರೆ.

'ಆವರಣದಲ್ಲಿ ಹಿಂಸಾಚಾರ ಪ್ರಚೋದಿಸಲು ಕೆಲವರು ಬಡಿಗೆ, ಕಲ್ಲು ತಂದಿದ್ದರು' ಎಂದು ಆರೋಪಿಸಿದ್ದಾರೆ.

ಪ್ರತಿಭಟನೆ ಏಕೆ: ವಿಶ್ವವಿದ್ಯಾಲಯದ ಉಪಕರಣಗಳನ್ನು ಹಾನಿಗೊಳಿಸಿದ ಆರೋಪದ ಮೇಲೆ ಕೆಲವು ವಿದ್ಯಾರ್ಥಿಗಳನ್ನು ವಿ.ವಿಯಿಂದ ಹೊರಹಾಕಲಾಗಿತ್ತು. ಅವರ ಮೇಲಿನ ಶಿಸ್ತುಕ್ರಮವನ್ನು ಹಿಂದಕ್ಕೆ ಪಡೆಯಬೇಕೆಂದು ಹಾಗೂ ಜೆಎನ್‌ಯು ವಿಶ್ವವಿದ್ಯಾಲಯದ ಕುಲಪತಿ ಶಾಂತಿಶ್ರೀ ಪಂಡಿತ್ ರಾಜೀನಾಮೆಗೆ ಒತ್ತಾಯಿಸಿ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು 'ಸಮತಾ ಜೂಲೂಸ್' ಹೆಸರಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ್ದವು.

ಸಂಕ್ಷಿಪ್ತ ಸುದ್ದಿ

ರಾಜಾಜಿ ಪ್ರತಿಮೆ ಅನಾವರಣ



ಚಕ್ರವರ್ತಿ ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನಾವರಣಗೊಳಿಸಿದರು. ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ರಾಜಗೋಪಾಲಾಚಾರಿ ಅವರ ಕುಟುಂಬದ ಸದಸ್ಯರು ಈ ವೇಳೆ ಇದ್ದರು (ಪಿಟಿಐ ಚಿತ್ರ)

ನವದೆಹಲಿ (ಪಿಟಿಐ): ಸ್ವತಂತ್ರ ಭಾರತದ ಮೊದಲ ಮತ್ತು ಏಕೈಕ ಭಾರತೀಯ ಗವರ್ನರ್ ಜನರಲ್, ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ) ಅವರ ಪ್ರತಿಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಸೋಮವಾರ ಅನಾವರಣಗೊಳಿಸಿದರು.

ವಸಾಹತುಶಾಹಿ ಕುರುಹುಗಳನ್ನು ತೊಡೆದುಹಾಕಲು ತೆಗೆದುಕೊಳ್ಳಲಾಗುತ್ತಿರುವ ಸರಣಿ ಕ್ರಮಗಳ ಭಾಗವಾಗಿ ಈ ಉಪಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ರಾಷ್ಟ್ರಪತಿ ಕಚೇರಿ ಹೇಳಿದೆ.

ರಾಷ್ಟ್ರಪತಿ ಭವನದ ಅಶೋಕ ಮಂಟಪದ ಬಳಿಯಿರುವ ಭವ್ಯವಾದ ತೆರೆದ ಮೆಟ್ಟಿಲುಗಳಲ್ಲಿ ಇದ್ದ, ನವದೆಹಲಿಯ ಹಲವಾರು ಕಟ್ಟಡಗಳ ಪ್ರಮುಖ ವಾಸ್ತುಶಿಲ್ಪಿ ಎಡ್ವಿನ್ ಲಟ್ಯೆನ್ಸ್ ಅವರ ಪ್ರತಿಮೆಯನ್ನು ತೆರವುಗೊಳಿಸಿ, ರಾಜಗೋಪಾಲಾಚಾರಿ ಅವರ ಪ್ರತಿಮೆಯನ್ನು ಇಡಲಾಗಿದೆ.

'ವಸಾಹತುಶಾಹಿ ಮನಃಸ್ಥಿತಿಯ ಕುರುಹುಗಳನ್ನು ತೊಡೆದುಹಾಕಲು ಮತ್ತು ಭಾರತೀಯ ಸಂಸ್ಕೃತಿ, ಪರಂಪರೆ ಮತ್ತು ಸಂಪ್ರದಾಯಗಳ ಶ್ರೀಮಂತಿಕೆಯನ್ನು ಹೆಮ್ಮೆಯಿಂದ ಅಳವಡಿಸಿಕೊಳ್ಳಲು ಹಾಗೂ ಭಾರತಮಾತೆಗೆ ಅಸಾಧಾರಣ ಸೇವೆ ಸಲ್ಲಿಸಿದವರನ್ನು ಗೌರವಿಸಲು ತೆಗೆದುಕೊಳ್ಳುತ್ತಿರುವ ಸರಣಿ ಕ್ರಮಗಳ ಭಾಗವಾಗಿ ಪ್ರತಿಮೆ ಅನಾವರಣ ಮಾಡಲಾಗಿದೆ' ಎಂದು ರಾಷ್ಟ್ರಪತಿ ಕಚೇರಿ 'ಎಕ್ಸ್' ಮಾಡಿದೆ.

'ಸಚಿವರ ನಿಯಂತ್ರಿಸಲು ಲಂಚ ಪ್ರಕರಣ ಬಳಕೆ'

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಸಚಿವರನ್ನು ಹಿಡಿತದಲ್ಲಿಡಲು ಅವರ ಭ್ರಷ್ಟಾಚಾರ ಪ್ರಕರಣವನ್ನು ಬಳಸುತ್ತಿದ್ದಾರೆ ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಸೋಮವಾರ ಆರೋಪಿಸಿದ್ದಾರೆ.

ಲಂಚ ಪ್ರಕರಣಕ್ಕೆ ಸಂಬಂಧಿಸಿ ಎನ್‌ಸಿಪಿ (ಅಜಿತ್ ಪವಾರ್) ನಾಯಕ, ಸಚಿವ ನರಹರಿ ಜಿರ್ವಾಲ್ ಅವರ ಇಲಾಖೆಯ ಅಧಿಕಾರಿಯ ಮೇಲೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಇತ್ತೀಚೆಗೆ ದಾಳಿ ನಡೆಸಿತ್ತು.

ಈ ದಾಳಿಯನ್ನು ಉಲ್ಲೇಖಿಸಿದ ರಾವುತ್, 'ಸಚಿವರ ಕಚೇರಿಗಳ ಮೇಲೆ ಎಸಿಬಿ ದಾಳಿ ಮಾಡಿ, ಕ್ರಮ ಕೈಗೊಳ್ಳುವ ಬದಲು ಕ್ಲೀನ್ ಚಿಟ್ ನೀಡುತ್ತದೆ. ಭ್ರಷ್ಟರಾಗಿ ಇರಿ, ಆದರೆ ಫಡಣವೀಸ್ ಅವರ ನಿಯಂತ್ರಣದಲ್ಲಿರಿ ಎಂದು ಸರ್ಕಾರ ಸಂದೇಶ ಕಳುಹಿಸುತ್ತಿದೆ' ಎಂದು ತಿಳಿಸಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ಕ್ರಮ ಕೈಗೊಳ್ಳುವ ವಿಷಯದಲ್ಲಿ ಫಡಣವೀಸ್ 'ಕಪಟ' ಎಂದು ಹೇಳಿದ ರಾವುತ್, 'ರಾಜ್ಯದ ಎಲ್ಲಾ ಸಚಿವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ. ಎಸಿಬಿ ಅವರ ಮೇಲೆ ನಿಗಾ ಇಟ್ಟಿದ್ದರೂ, ಫಡಣವೀಸ್ ನಿರ್ದೇಶನ ನೀಡುವವರೆಗೆ ಅದು ಕ್ರಮ ಕೈಗೊಳ್ಳುವುದಿಲ್ಲ' ಎಂದು ಆರೋಪಿಸಿದ್ದಾರೆ.

ಯುವ ಕಾಂಗ್ರೆಸ್‌ನ ಮೂವರ ಸೆರೆ

ನವದೆಹಲಿ (ಪಿಟಿಐ): ಎ.ಐ ಶೃಂಗಸಭೆಯಲ್ಲಿ ಅಂಗಿ ತೆಗೆದು ಪ್ರತಿಭಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವ ಕಾಂಗ್ರೆಸ್‌ನ ಮೂವರು ಮುಖಂಡರನ್ನು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಜಿತೇಂದ್ರ ಯಾದವ್, ರಾಜ್ ಗುಜ್ಜರ್ ಮತ್ತು ಅಜಯ್ ಕುಮಾರ್ ಅವರನ್ನು ಬಂಧಿಸಲಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ಒಟ್ಟು ಏಳು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಐವೈಸಿಯ (ಭಾರತೀಯ ಯುವ ಕಾಂಗ್ರೆಸ್) ಪ್ರಧಾನ ಕಾರ್ಯದರ್ಶಿ ಲಲಿತ್‌ಪುರದ ರಿತಿಕ್ ಅಲಿಯಾಸ್ ಮಾಂಟಿ ಶುಕ್ಲಾ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಐವೈಸಿ ಅಧ್ಯಕ್ಷ ಉದಯ್ ಭಾನು ಚಿಬ್ ಅವರನ್ನು ವಿಚಾರಣೆ ನಡೆಸಿದ್ದಾರೆ. ಗುಂಪುಗಳ ನಡುವೆ ದ್ವೇಷ ಬಿತ್ತಿದ ಹಾಗೂ ರಾಷ್ಟ್ರೀಯ ಸಮಗ್ರತೆಗೆ ಧಕ್ಕೆ ತಂದ ಆರೋಪಗಳನ್ನು ಇವರ ವಿರುದ್ಧ ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ.

ದತ್ತಾಂಶ ಹಂಚಿಕೆ: ಬಳಕೆದಾರರ ಆಯ್ಕೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೆಟಾ ಪ್ಲಾಟ್‌ಫಾರ್ಮ್ಸ್ ಅಥವಾ ಮೆಟಾ ಸಮೂಹದ ಇತರ ಕಂಪನಿಗಳೊಂದಿಗೆ ದತ್ತಾಂಶ ಹಂಚಿಕೊಳ್ಳುವ ಆಯ್ಕೆಯನ್ನು ಬಳಕೆದಾರರಿಗೇ ಬಿಡಬೇಕು ಎಂದು ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ನೀಡಿರುವ ಆದೇಶವನ್ನು ಜಾರಿಗೆ ತರುವುದಾಗಿ ವಾಟ್ಸ್‌ಆ್ಯಪ್, ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.

ಸಿಸಿಐ ಶಿಫಾರಸು ಗಮನದಲ್ಲಿ ಇಟ್ಟುಕೊಂಡು, ವಾಟ್ಸ್‌ಆ್ಯಪ್ ಮತ್ತು ಅದರ ಮಾತೃಸಂಸ್ಥೆ ಮೆಟಾ ಪ್ಲಾಟ್‌ಫಾರ್ಮ್‌ನಲ್ಲಿ ಜಾಹೀರಾತುಗಳ ಮೇಲೆ ಐದು ವರ್ಷ ನಿಷೇಧ ಹೇರಬೇಕು ಎಂಬ ಅರ್ಜಿಯ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಈ ಎರಡೂ ಕಂಪನಿಗಳಿಗೆ ಸಿಜೆಐ ನೇತೃತ್ವದ ಪೀಠವು ಸೂಚಿಸಿತು.

ಉಗ್ರರ ನಿಗ್ರಹಕ್ಕೆ 'ಪ್ರಹಾರ್'

ಒಂದನೇ ಪುಟದಿಂದ...


'ಭಾರತದ ನೆರೆಯ ಪ್ರದೇಶದಲ್ಲಿ ಒಮ್ಮೊಮ್ಮೆ ಅರಾಜಕತೆ ತಲೆದೋರಿರುವ ಇತಿಹಾಸವಿದೆ. ನೆರೆಯ ಕೆಲವು ದೇಶಗಳು ಭಯೋತ್ಪಾದನೆಯನ್ನು ತಮ್ಮ ಸರ್ಕಾರದ ನೀತಿಯ ಸಾಧನ ವಾಗಿ ಬಳಸಿಕೊಂಡಿವೆ' ಎಂದು ಪಾಕಿಸ್ತಾನವನ್ನು ಹೆಸರಿಸದೆಯೇ ತಿಳಿಸಿದೆ.

'ಇದರ ಹೊರತಾಗಿಯೂ, ಭಾರತ ಭಯೋತ್ಪಾದನೆಯನ್ನು ಯಾವುದೇ ನಿರ್ದಿಷ್ಟ ರಾಷ್ಟ್ರೀಯತೆ, ಜನಾಂಗ, ಧರ್ಮ, ಅಥವಾ ನಾಗರಿಕತೆ ಜತೆ ತಳಕು ಹಾಕುವ ಕೆಲಸ ಮಾಡಿಲ್ಲ. ಎಲ್ಲ ರೀತಿಯ ಭಯೋತ್ಪಾದಕ ಚಟುವಟಿಕೆಗಳನ್ನು ಖಂಡಿಸಿದೆ' ಎಂದಿದೆ.

'ಭಾರತವು ಹಿಂದಿನಿಂದಲೂ ಗಡಿಯಾಚೆಗಿನ ಭಯೋತ್ಪಾದನೆಯಿಂದ ತೊಂದರೆ ಅನುಭವಿಸಿದೆ. ಜಿಹಾದಿ ಭಯೋತ್ಪಾದಕ ಸಂಘಟನೆಗಳು ಮತ್ತು ಅವುಗಳ ಅಂಗ ಸಂಸ್ಥೆಗಳು ಭಯೋತ್ಪಾದಕ ದಾಳಿ ಯೋಜಿಸುವುದು, ಸಂಘಟಿಸುವುದು ಮತ್ತು ಕಾರ್ಯಗತಗೊಳಿಸುವುದನ್ನು ಮುಂದುವರಿಸಿವೆ. ಸ್ಲೀಪರ್ ಸೆಲ್‌ಗಳ ಮೂಲಕ ದೇಶದಲ್ಲಿ ಹಿಂಸೆ ಹರಡಲು ಪ್ರಯತ್ನಿಸುತ್ತಿರುವ ಅಲ್ ಕೈದಾ ಮತ್ತು ಐಸಿಸ್‌ನಂತಹ ಜಾಗತಿಕ ಭಯೋತ್ಪಾದಕ ಸಂಘಟನೆಗಳಿಗೆ ಭಾರತ ಗುರಿಯಾಗಿದೆ' ಎಂದು ಹೇಳಿದೆ.

ತಿರುಪತಿ ಲಾಡು ಪ್ರಕರಣ: ಎಸ್‌ಐಟಿ ವರದಿ ಪರಿಶೀಲನೆಗಾಗಿ ಸಮಿತಿ

ಏಕಸದಸ್ಯ ಸಮಿತಿ: ವಿಚಾರಣೆಗೆ 'ಸುಪ್ರೀಂ' ನಕಾರ



ಅಮರಾವತಿ (ಪಿಟಿಐ): ತಿರುಪತಿ ಲಾಡು ವಿವಾದಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ಸಲ್ಲಿಸಿರುವ ವರದಿಯ ಪರಿಶೀಲನೆಗಾಗಿ ಆಂಧ್ರ ಪ್ರದೇಶ ಸರ್ಕಾರ ಏಕಸದಸ್ಯ ಸಮಿತಿ ರಚನೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಬಿಜೆಪಿ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು ಸರ್ಕಾರದ ನಿರ್ಧಾರ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ್ದರು.

ಸುಪ್ರೀಂ ಕೋರ್ಟ್ ನಿರ್ಧಾರವನ್ನು ಆಡಳಿತಾರೂಢ ಟಿಡಿಪಿ ಸ್ವಾಗತಿಸಿದೆ. ಪಕ್ಷದ ವಕ್ತಾರ ನಿಲಾಯಪಾಲೆಂ ವಿಜಯ್ ಕುಮಾರ್ ಅವರು, 'ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಮಿತಿ ರಚನೆ ಮಾಡುವ ಅಧಿಕಾರ ಸರ್ಕಾರಕ್ಕಿದೆ ಎಂಬುದನ್ನು ಸುಪ್ರೀಂ ಕೋರ್ಟ್ ದೃಢಪಡಿಸಿದೆ' ಎಂದು ಹೇಳಿದ್ದಾರೆ.

ಚಂದ್ರಬಾಬು ನಾಯ್ಡು ನೇತೃತ್ವದ ಸರ್ಕಾರವು, ನಿವೃತ್ತ ಐಎಎಸ್ ಅಧಿಕಾರಿ ದಿನೇಶ್ ಕುಮಾರ್ ಅವರನ್ನು ಒಳಗೊಂಡ ಏಕಸದಸ್ಯ ಸಮಿತಿಯನ್ನು ರಚನೆ ಮಾಡಿದೆ. ಸುಪ್ರೀಂ ಕೋರ್ಟ್ ನೇಮಿಸಿದ್ದ ಸಿಬಿಐ ನೇತೃತ್ವದ ಎಸ್‌ಐಟಿ ವರದಿ ಸಲ್ಲಿಸಿದ ಬೆನ್ನಲ್ಲೇ ಸರ್ಕಾರ ಈ ಸಮಿತಿಯನ್ನು ನೇಮಕ ಮಾಡಿದೆ.

'ಗೃಹಿಣಿಯ ಕೊಡುಗೆಯ ಉಪೇಕ್ಷೆ ಅನ್ಯಾಯ'

ನವದೆಹಲಿ (ಪಿಟಿಐ): ಗೃಹಿಣಿಯ ಶ್ರಮವು ಸಂಪಾದನೆ ಮಾಡುವ ಸಂಗಾತಿಯು ಪರಿಣಾಮಕಾರಿಯಾಗಿ ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. ಆಕೆಯ ಕೊಡುಗೆಯನ್ನು ಉಪೇಕ್ಷೆ ಮಾಡುವುದು ಸರಿಯಲ್ಲ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿತು.

ಪತಿಯಿಂದ ದೂರವಾದ ಪತ್ನಿಗೆ ಜೀವನಾಂಶ ನೀಡುವ ಕುರಿತ ಅರ್ಜಿಯ ವಿಚಾರಣೆ ವೇಳೆ, 'ಗೃಹಿಣಿಯ ಕೊಡುಗೆಯನ್ನು ತಾತ್ಸಾರ ಮಾಡುವುದು ಅವಾಸ್ತವಿಕ ಮತ್ತು ಅನ್ಯಾಯ' ಎಂದು ಕೋರ್ಟ್ ಹೇಳಿತು.

ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು, 'ಪತ್ನಿಯ ಸಂಬಳರಹಿತ ಉದ್ಯೋಗವನ್ನು ಪ್ರಯೋಜನಕ್ಕಿಲ್ಲದ್ದು ಅಥವಾ ಉದ್ದೇಶಪೂರ್ವಕ ಅವಲಂಬನೆ ಎನ್ನಲಾಗದು. ಹಣ ಸಂಪಾದನೆ ಮಾತ್ರವಲ್ಲದೆ ಮನೆ ಮತ್ತು ವೈವಾಹಿಕ ಸಂಬಂಧಕ್ಕೆ ಗೃಹಿಣಿಯ ಕೊಡುಗೆಯ ಆರ್ಥಿಕ ಮೌಲ್ಯವನ್ನೂ ಕಾನೂನು ಗುರುತಿಸಬೇಕು' ಎಂದು ಅಭಿಪ್ರಾಯಪಟ್ಟರು.

'ಹಣ ಸಂಪಾದನೆ ಮಾಡದ ಸಂಗಾತಿಯು 'ಆಲಸಿ' ಎಂಬ ಗ್ರಹಿಕೆಯು ಮನೆಗೆಲಸಕ್ಕೆ ಆಕೆ ನೀಡುವ ಕೊಡುಗೆಯನ್ನು ನಿರ್ಲಕ್ಷಿಸಿರುವುದನ್ನು ಸಂಕೇತಿಸುತ್ತದೆ' ಎಂದು ಹೇಳಿದರು.

ದಂಪತಿ 2012ರಲ್ಲಿ ವಿವಾಹವಾಗಿದ್ದರು. 2020ರಲ್ಲಿ ಪತಿ–ಪತ್ನಿ ದೂರವಾಗಿದ್ದು, ಜೀವನಾಂಶ ನೀಡುವಂತೆ ಪತ್ನಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಅರ್ಜಿ ವಿಚಾರಣೆ ನಡೆಸಿದ್ದ ಮ್ಯಾಜಿಸ್ಟೀರಿಯಲ್ ನ್ಯಾಯಾಲಯವು ಮಹಿಳೆಗೆ ಜೀವನಾಂಶಕ್ಕೆ ಆದೇಶಿಸಲು ನಿರಾಕರಿಸಿತ್ತು.

'ಲೈಂಗಿಕ ಸಂಬಂಧದ ನಂತರ ಮದುವೆ ನಿರಾಕರಣೆ ಅಪರಾಧ'



ನವದೆಹಲಿ (ಪಿಟಿಐ): ಮದುವೆಯಾಗುವ ಭರವಸೆ ನೀಡಿ ದೈಹಿಕ ಸಂಬಂಧ ಬೆಳೆಸಿ, ನಂತರ ಗಣಕೂಟ ಹೊಂದಾಣಿಕೆಯಾಗಲಿಲ್ಲ ಎಂಬ ಕಾರಣಕ್ಕಾಗಿ ಮದುವೆಯಾಗಲು ನಿರಾಕರಿಸುವುದು ಅಪರಾಧ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿತು.

ಇಂಥ ವರ್ತನೆಯ ವಿರುದ್ಧ ಭಾರತೀಯ ನ್ಯಾಯಸಂಹಿತೆಯ ಸೆಕ್ಷನ್ 69ರ ಅಡಿಯಲ್ಲಿ ಪ್ರಕರಣ ದಾಖಲಿಸಬಹುದು ಎಂದು ಹೇಳಿತು.

ಆರೋಪಿಗೆ ನ್ಯಾಯಮೂರ್ತಿ ಸ್ವರ್ಣ ಕಾಂತಾ ಶರ್ಮಾ ಅವರು ಜಾಮೀನು ನಿರಾಕರಿಸಿದರು. ಆರೋಪಿಯು ಜನವರಿ 4ರಿಂದ ನ್ಯಾಯಾಂಗ ವಶದಲ್ಲಿದ್ದಾರೆ.

'ಲಂಚಕೋರರೇ ಸಿ.ಎಂ ಸ್ನೇಹಿತರು'

ವೆಲ್ಲೂರ್ (ತಮಿಳು ನಾಡು) (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿರುದ್ಧ ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಅವರು ಸೋಮವಾರ ಬಿರುಸಿನ ವಾಗ್ದಾಳಿ ನಡೆಸಿದ್ದಾರೆ. 'ರಾಜಕೀಯ ಲಾಭದ ಮೇಲೆ ಕಣ್ಣಿಟ್ಟಿರುವವರು, ಭ್ರಷ್ಟರು ಹಾಗೂ ಲಂಚಕೋರರೇ ಡಿಎಂಕೆ ಅಧ್ಯಕ್ಷರ ನಿಜವಾದ ಸ್ನೇಹಿತರು' ಎಂದು ವಿಜಯ್ ದೂರಿದ್ದಾರೆ.

ಇಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ವಿಜಯ್, 'ಏಪ್ರಿಲ್‌ನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯನ್ನು ತಮಿಳುನಾಡು ಹಾಗೂ ದೆಹಲಿ–ಎನ್‌ಡಿಎ ನಡುವಿನ ಯುದ್ಧ ಎಂದು ಡಿಎಂಕೆ ಬಿಂಬಿಸುತ್ತಿದೆ. ಆದರೆ, ವಾಸ್ತವದಲ್ಲಿ ಇದು ರಾಜ್ಯದ ಜನರು ಹಾಗೂ ಭ್ರಷ್ಟಾಚಾರದ ನಡುವೆ ನಡೆಯುತ್ತಿರುವ ಯುದ್ಧ' ಎಂದಿದ್ದಾರೆ.

ಅಲ್ಲದೇ, ಡಿಎಂಕೆ ಅಸಮರ್ಥ ಸರ್ಕಾರ ಎಂದು ಟೀಕಿಸಿರುವ ಅವರು, ನೇರವಾಗಿ ಮುಖ್ಯಮಂತ್ರಿಗೆ ಸವಾಲೆಸೆದು 'ನಿಮ್ಮ ಹಣದ ಮೂಲ ಯಾವುದು? ನೀವು ಕಷ್ಟಪಟ್ಟು ಈ ಹಣವನ್ನು ಸಂಪಾದಿಸಿದ್ದೀರೆ ? ಅಥವಾ ನೀವು ರಾಜಕೀಯಕ್ಕೆ ಬಂದ ಬಳಿಕ ಸಂಗ್ರಹಿಸಿದ ಹಣವೇ ? ಅದನ್ನು ನೀವು ಧೈರ್ಯವಾಗಿ ಬಹಿರಂಗಪಡಿಸುವಿರೇ' ಎಂದು ಪ್ರಶ್ನಿಸಿದ್ದಾರೆ. 'ರಾಜಕೀಯದಲ್ಲಿ ನನಗೆ ಯಾರೂ ಶತ್ರುಗಳಿಲ್ಲ, ಎಲ್ಲರೂ ಮಿತ್ರರೇ' ಎಂದು ಸ್ಟಾಲಿನ್ ಅವರು ನೀಡಿದ್ದ ಹೇಳಿಕೆ ಕುರಿತೂ ಆಕ್ಷೇಪಿಸಿ, 'ಎಲ್ಲರೂ ಸ್ನೇಹಿತರೇ ಆಗಿದ್ದಿದ್ದರೆ ಕರೂರು ಕಾಲ್ತುಳಿತ ಪ್ರಕರಣದಲ್ಲಿ ನನ್ನನ್ನು ಏಕೆ ದೂಷಿಸಿದಿರಿ' ಎಂದೂ ಪ್ರಶ್ನಿಸಿದ್ದಾರೆ.

ತಮಿಳುನಾಡು: 70 ಲಕ್ಷ ಮತದಾರರು ಪಟ್ಟಿಯಿಂದ ಹೊರಕ್ಕೆ

ಚೆನ್ನೈ (ಪಿಟಿಐ): ವಿವಿಧ ವಿಭಾಗಗಳಿಂದ 70 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಅಂತಿಮ ಕರಡು ಪಟ್ಟಿಯಲ್ಲಿ ಅಳಿಸಿಹಾಕಲಾಗಿದೆ ಎಂದು ತಮಿಳುನಾಡಿನ ಮುಖ್ಯ ಚುನಾವಣಾ ಅಧಿಕಾರಿ ಅರ್ಚನಾ ಪಟ್ನಾಯಕ್ ಸೋಮವಾರ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮೊದಲು ತಮಿಳುನಾಡಿನಲ್ಲಿ 6.41 ಕೋಟಿ ಮತದಾರರು ಇದ್ದರು. ಈಗ ಅಂತಿಮ ಕರಡು ಪಟ್ಟಿಯಲ್ಲಿ 5.67 ಕೋಟಿಗೆ ಇಳಿದಿದೆ. 18–19 ವಯಸ್ಸಿನ 7.40 ಲಕ್ಷ ಮತದಾರರನ್ನು ಪಟ್ಟಿಗೆ ಸೇರಿಸಲಾಗಿದೆ' ಎಂದು ತಿಳಿಸಿದ್ದಾರೆ.

ನೀಟ್–ಪಿ.ಜಿ: ಗುಣಮಟ್ಟದ ಕುರಿತು 'ಸುಪ್ರೀಂ' ಕಾಳಜಿ • ಕೇಂದ್ರದಿಂದ ಅಫಿಡವಿಟ್

'ಕಟ್ ಆಫ್ ಕಡಿತ: ಅವಲೋಕಿಸಬೇಕಿದೆ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನೀಟ್–ಪಿ.ಜಿ' ಕಟ್ ಆಫ್ ಅನ್ನು ಕಡಿಮೆ ಮಾಡುವುದರಿಂದ ಆಗುವ ಪರಿಣಾಮಗಳ ಕುರಿತು ನ್ಯಾಯಾಲಯ ಕೂಲಂಕಷವಾಗಿ ಅವಲೋಕಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನೀಟ್–ಪಿ.ಜಿ ಬರೆಯುವ ಅಭ್ಯರ್ಥಿಗಳು ಈಗಾಗಲೇ ವೈದ್ಯರಾಗಿರುತ್ತಾರೆ ಎಂದು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದ್ದರೂ, ಕಟ್ ಆಫ್ ಕಡಿತದ ಪರಿಣಾಮಗಳು ಮತ್ತು ಶೈಕ್ಷಣಿಕ ಗುಣಮಟ್ಟದ ಬಗ್ಗೆ ಕಾಳಜಿವಹಿಸಬೇಕಿದೆ ಎಂದು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರ ನೇತೃತ್ವದ ಪೀಠ ಹೇಳಿದೆ.

'ಕಟ್ ಆಫ್ ಅನ್ನು ಕಡಿತಗೊಳಿಸುವುದರಿಂದ, ಅದನ್ನು ಶೂನ್ಯಕ್ಕೆ ಇಳಿಸುವುದರಿಂದ ಶೈಕ್ಷಣಿಕ ಗುಣಮಟ್ಟಕ್ಕೆ ತೊಂದರೆ ಆಗುವುದಿಲ್ಲ ಎಂಬುದರ ಕುರಿತು ಸರ್ಕಾರವು ಕೋರ್ಟ್‌ಗೆ ಮನದಟ್ಟು ಮಾಡಿಸಬೇಕು' ಎಂದು ಪೀಠ ತಿಳಿಸಿದೆ.

ಕೇಂದ್ರದ ಅಫಿಡವಿಟ್‌ನಲ್ಲಿ ಏನಿದೆ: ತನ್ನ ಕ್ರಮವನ್ನು ಸಮರ್ಥಿಸಿಕೊಂಡು ಕೇಂದ್ರ ಸರ್ಕಾರ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದೆ. 'ಪರ್ಸೆಂಟೈಲ್ ಕಡಿತದ ಬಳಿಕವೂ ಸೀಟು ಹಂಚಿಕೆಯು ಅರ್ಹತೆ ಮತ್ತು ಅಭ್ಯರ್ಥಿಗಳ ಆದ್ಯತೆಗಳನ್ನು ಅನುಸರಿಸಿಯೇ ನಡೆಯುತ್ತದೆ. ಹೀಗಾಗಿ ಈ ಕ್ರಮವು ಶೈಕ್ಷಣಿಕ ಮಾನದಂಡಗಳ ಜತೆ ರಾಜಿ ಮಾಡಿಕೊಳ್ಳುವುದಿಲ್ಲ' ಎಂದು ಅದು ಪ್ರತಿಪಾದಿಸಿದೆ.

'ನೀಟ್–ಪಿ.ಜಿ ಆರಂಭವಾದ 2017ರಿಂದಲೇ ಸೀಟುಗಳು ಉಳಿಯುವುದನ್ನು ತಡೆಯಲು ಸೂಕ್ತ ಸಂದರ್ಭಗಳಲ್ಲಿ ಕಟ್–ಆಫ್ ಕಡಿತಗೊಳಿಸುವುದನ್ನು ಜಾರಿಗೆ ತರಲಾಗಿದೆ. 2023ರ ಶೈಕ್ಷಣಿಕ ಸಾಲಿನಲ್ಲೂ ಅರ್ಹತಾ ಪರ್ಸೆಂಟೈಲ್ ಅನ್ನು ಕಡಿತಗೊಳಿಸಿ ಶೂನ್ಯಕ್ಕೆ ಇಳಿಸಲಾಗಿತ್ತು. ಹೀಗಾಗಿ ಈ ಬಾರಿಯ ನಿರ್ಧಾರವು ಜಾರಿಯಲ್ಲಿರುವ ನೀತಿ ಮತ್ತು ಆಡಳಿತಾತ್ಮಕ ಅಭ್ಯಾಸಕ್ಕೆ ಅನುಗುಣವಾಗಿದೆ' ಎಂದು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ.

'ದೇಶದ ಆರೋಗ್ಯ ಸೇವೆಗೆ ಪ್ರವೇಶವನ್ನು ವಿಸ್ತರಿಸುವ ಮತ್ತು ವೈದ್ಯಕೀಯ ಮೂಲಸೌಕರ್ಯ ಬಲಪಡಿಸುವ ಮಹತ್ವದ ಉದ್ದೇಶವನ್ನು ಈ ನೀತಿ ಹೊಂದಿದೆ' ಎಂದಿದೆ. ನೀಟ್–ಪಿ.ಜಿ ಬರೆಯುವ ಅಭ್ಯರ್ಥಿಗಳು ಶೈಕ್ಷಣಿಕವಾಗಿ ಪ್ರತಿಭಾ ವಂತರಾಗಿದ್ದು, ಆಧುನಿಕ ವೈದ್ಯಕೀಯ ಕುರಿತು ನಾಲ್ಕೂವರೆ ವರ್ಷಗಳವರೆಗೆ ಕಠಿಣ ತರಬೇತಿ ಪಡೆದು ಯಶಸ್ವಿ ಯಾಗಿರುತ್ತಾರೆ. ನಕರಾತ್ಮಕ ಅಂಕಗಳ ಅನ್ವಯ ಕೆಲ ಅಭ್ಯರ್ಥಿಗಳು ಕಡಿಮೆ ಅಥವಾ ಶೂನ್ಯ ಅಥವಾ ಮೈನಸ್ ಅಂಕಗಳನ್ನು ಪಡೆಯಬಹುದು. ಆದರೆ ಇದನ್ನು ಕ್ಲಿನಿಕಲ್ ಅಸಮರ್ಥತೆ ಎಂದು ನಿರ್ಣಯಿಸಲಾಗದು ಎಂದಿದೆ.

2025–26ರ ನೀಟ್–ಪಿಜಿ 3ನೇ ಸುತ್ತಿನ ಕೌನ್ಸೆಲಿಂಗ್‌ನ ಅರ್ಹತಾ ಕಟ್ ಆಫ್ ಅನ್ನು ಜನವರಿ 13ರಂದು ಕಡಿತಗೊಳಿಸಿದ ಕ್ರಮವನ್ನು ಪ್ರಶ್ನಿಸಿ ಹರಿಶರಣ್ ದೇವಗನ್ ಮತ್ತು ಇತರರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಮೀಸಲು ಪ್ರವರ್ಗದ ಅಭ್ಯರ್ಥಿಗಳ ಅರ್ಹತಾ ಪರ್ಸೆಂಟೈಲ್ ಅನ್ನು ಶೂನ್ಯಕ್ಕೆ ಇಳಿಸಿದ ನಿರ್ಧಾರವನ್ನು ಪ್ರಶ್ನಿಸಲಾಗಿದೆ.

ಕಲಬೆರಕೆ ಹಾಲು: ನಾಲ್ವರ ಸಾವು

ಒಂದನೇ ಪುಟದಿಂದ...

ಮೃತಪಟ್ಟ ನಾಲ್ವರ ಮನೆಗಳಿಗೂ ಸ್ಥಳೀಯ ಮಾರಾಟಗಾರರೊಬ್ಬರೇ ಹಾಲು ಪೂರೈಸಿದ್ದಾರೆ. ಈ ಮಾರಾಟಗಾರ ತನ್ನ 46 ಹಸುಗಳು ಮತ್ತು ಇತರ ಸ್ಥಳೀಯ ರೈತರಿಂದ ಹಾಲನ್ನು ಪಡೆದು ಮನೆಗಳಿಗೆ ವಿತರಿಸುತ್ತಿದ್ದರು ಎಂದು ಡಿಎಸ್‌ಪಿ ಹೇಳಿದರು. ಈ ಮಾರಾಟಗಾರ ಹಾಲು ಪೂರೈಸಿರುವ 106 ಮನೆಗಳಲ್ಲಿನ ಜನರ ರಕ್ತಪರೀಕ್ಷೆ ನಡೆಲಾಗುತ್ತಿದ್ದು, ನಿರಂತರ ವೈದ್ಯಕೀಯ ಮೇಲ್ವಿಚಾರಣೆಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಪಶುಸಂಗೋಪನಾ ಇಲಾಖೆಯು 46 ಜಾನುವಾರುಗಳನ್ನು ಪರೀಕ್ಷಿಸಿ, ಅವುಗಳ ರಕ್ತದ ಮಾದರಿಗಳನ್ನು ಪಶುವೈದ್ಯಕೀಯ ಪ್ರಯೋಗಾಲಯಗಳಿಗೆ ರವಾನಿಸಿದೆ. ಅಲ್ಲದೆ ಆಹಾರ ಸುರಕ್ಷತಾ ಅಧಿಕಾರಿಗಳು ಹಾಲು ಮತ್ತು ಮೊಸರಿನ ಮಾದರಿಗಳನ್ನು ಹೈದರಾಬಾದ್ ಮತ್ತು ವಿಶಾಖಪಟ್ಟಣಂನ ಪ್ರಯೋಗಾಲಯಗಳಿಗೆ ಕಳುಹಿಸಿದ್ದಾರೆ.

₹10 ಲಕ್ಷ ಪರಿಹಾರ ಘೋಷಣೆ

ಕಲಬೆರಕೆ ಹಾಲು ಕುಡಿದು ಮೃತಪಟ್ಟ ನಾಲ್ವರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರವನ್ನು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಸೋಮವಾರ ಘೋಷಿಸಿದರು.

> **ಆಹಾರ ಸುರಕ್ಷತೆಯ ನಿರ್ಲಕ್ಷ್ಯದಿಂದ ಈ ದುರಂತ ಸಂಭವಿಸಿದೆ. ಕಲಬೆರಕೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು**
> **ವೈ.ಎಸ್.ಜಗನ್ ಮೋಹನ್ ರೆಡ್ಡಿ**
> ವೈಎಸ್‌ಆರ್‌ಸಿಪಿ ಮುಖ್ಯಸ್ಥ

ವಿಧಾನಸಭೆಯಲ್ಲಿ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಜನರ ಪೂರ್ಣ ವೈದ್ಯಕೀಯ ವೆಚ್ಚವನ್ನು ಸರ್ಕಾರವೇ ಭರಿಸಲಿದೆ ಎಂದರು.

ಈ ಪ್ರಕರಣ ಕುರಿತು ಸರ್ಕಾರ ಎಲ್ಲ ಕೋನಗಳಿಂದಲೂ ವಿಚಾರಣೆ ನಡೆಸುತ್ತಿದ್ದು, ದುರಂತಕ್ಕೆ ಕಾರಣರಾದವರ ವಿರುದ್ಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಒಬ್ಬ ವಶಕ್ಕೆ: ಮೃತರ ಮನೆಗಳಿಗೆ ಹಾಲು ಪೂರೈಸಿದ್ದ ಮಾರಾಟಗಾರನೊಬ್ಬನನ್ನು ವಶಕ್ಕೆ ಪಡೆಯಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ಒಂಬತ್ತನೇ ಕಿರೀಟದತ್ತ ಕರ್ನಾಟಕದ ಚಿತ್ತ

ರಾಜನಗರದಲ್ಲಿ 'ದೇಶಿ ಕ್ರಿಕೆಟ್ ರಾಜ'ನಾಗಲು ಪಡಿಕ್ಕಲ್ ಪಡೆ, ಜಮ್ಮು–ಕಾಶ್ಮೀರ ಪೈಪೋಟಿ

• ಗಿರೀಶ ದೊಡ್ಡಮನಿ

ಹುಬ್ಬಳ್ಳಿ: ನೃಪತುಂಗ ಬೆಟ್ಟದಿಂದ ಬೀಸಿ ಬರುವ ಗಾಳಿಯೂ ಈಗ ಕ್ರಿಕೆಟ್ ಕಂಪು ಸೂಸುತ್ತಿದೆ. ಬಿರುಬಿಸಿಲಿನಲ್ಲಿ ಬೆವರಿನ ಜಳಕ ಮಾಡುತ್ತಲೇ ಕ್ರಿಕೆಟ್ ಅಭಿಮಾನಿಗಳು ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದ ಸುತ್ತ ಜಮಾಯಿಸುತ್ತಿದ್ದಾರೆ. ಅದಕ್ಕೆ ಕಾರಣ ಇದೇ ಮೊದಲ ಬಾರಿ ಇಲ್ಲಿ ರಣಜಿ ಟ್ರೋಫಿ ಫೈನಲ್ ಪಂದ್ಯ ನಡೆಯಲಿದೆ.


ಪಾರಸ್ ಡೋಗ್ರಾ

ಮಂಗಳವಾರ ಜಮ್ಮು–ಕಾಶ್ಮೀರ ಎದುರು ಆರಂಭವಾಗಲಿರುವ ಈ ಹಣಾಹಣಿಯಲ್ಲಿ ಆಡಲಿರುವ ಕರ್ನಾಟಕ ತಂಡದಲ್ಲಿರುವ ತಾರೆಗಳನ್ನು ಕಣ್ತುಂಬಿಕೊಳ್ಳಲು ಜನರು ಕಾತುರರಾಗಿದ್ದಾರೆ. 11 ವರ್ಷಗಳ ನಂತರ ಫೈನಲ್‌ಗೆ ಲಗ್ಗೆಯಿಟ್ಟಿರುವ ಬಳಗದಲ್ಲಿ ಭಾರತ ತಂಡದ ಆಟಗಾರರಾದ ಕೆ.ಎಲ್. ರಾಹುಲ್, ಕರುಣ್ ನಾಯರ್, ಮಯಂಕ್ ಅಗರವಾಲ್, ಪ್ರಸಿದ್ಧಕೃಷ್ಣ ಮತ್ತು ನಾಯಕ ದೇವದತ್ತ ಪಡಿಕ್ಕಲ್ ಪ್ರಮುಖ ಆಕರ್ಷಣೆಯಾಗಿದ್ದಾರೆ.

2014–15ರಲ್ಲಿ ಕೊನೆಯ ಬಾರಿ ಕರ್ನಾಟಕವು ಟ್ರೋಫಿ ಗೆದ್ದಿತ್ತು.



ಆಗ ತಂಡದಲ್ಲಿದ್ದ ರಾಹುಲ್, ಕರುಣ್, ಮಯಂಕ್ ಹಾಗೂ ಸ್ಪಿನ್–ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಈ ಬಾರಿಯೂ ಕಣಕ್ಕಿಳಿಯಲಿದ್ದಾರೆ. ಇವರೆಲ್ಲರೂ ಅಮೋಘ ಲಯದಲ್ಲಿದ್ದಾರೆ. ಅನುಭವ, ಕೌಶಲ ಮತ್ತು ಈ ಟೂರ್ನಿಯುದ್ದಕ್ಕೂ ತೋರಿದ ಅಮೋಘ ಆಟದಿಂದಾಗಿ ದೇವದತ್ತ ಪಡಿಕ್ಕಲ್ ನಾಯಕತ್ವದ ಕರ್ನಾಟಕವೇ ಗೆಲ್ಲುವ ನೆಚ್ಚಿನ ತಂಡವಾಗಿದೆ. ಗುಂಪು ಹಂತದ ಕೊನೆಯಲ್ಲಿ ನಾಯಕತ್ವ ಬದಲಾವಣೆಯಾಗಿತ್ತು. ಮಯಂಕ್ ಅವರ ಸ್ಥಾನಕ್ಕೆ ಎಡಗೈ ಬ್ಯಾಟರ್ ದೇವದತ್ತ ನಾಯಕರಾದರು. ಸೆಮಿಫೈನಲ್ ಪಂದ್ಯದಲ್ಲಿ ಲಖನೌ ವಿರುದ್ಧ ಒಟ್ಟು ಒಂದು ಸಾವಿರಕ್ಕೂ ಹೆಚ್ಚು ರನ್ ಗಳಿಸಿತ್ತು. ಅದರಲ್ಲಿ ದೇವದತ್ತ ದ್ವಿಶತಕವೂ ಸೇರಿತ್ತು.

ತಮ್ಮ ಎರಡನೇ ಋತುವಿನಲ್ಲಿ ಆಡುತ್ತಿರುವ ಸ್ಮರಣ್ ರವಿಚಂದ್ರನ್ ಈ ಬಾರಿ ಸಹಸ್ರ ರನ್ ಸಾಧನೆ ಮಾಡುವತ್ತ ಸಾಗಿದ್ದಾರೆ. ಕರುಣ್ ಮತ್ತು ರಾಹುಲ್ ತಮ್ಮ ಟೆಸ್ಟ್ ಕ್ರಿಕೆಟ್ ಅನುಭವವನ್ನು ಧಾರೆಯೆರೆದಿದ್ದಾರೆ. ರಾಹುಲ್ 3 ಪಂದ್ಯಗಳಲ್ಲಿ 2 ಶತಕ ಸೇರಿದಂತೆ 457 ರನ್ ಗಳಿಸಿದ್ದಾರೆ.


ಹುಬ್ಬಳ್ಳಿಯ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ಅಭ್ಯಾಸ ನಡೆಸಿದ ನಂತರ ಕರ್ನಾಟಕ ತಂಡದ ಕೆ.ಎಲ್. ರಾಹುಲ್, ಪ್ರಸಿದ್ಧಕೃಷ್ಣ ಮತ್ತು ದೇವದತ್ತ ಪಡಿಕ್ಕಲ್ ಮಾತುಕತೆಯಲ್ಲಿ ತೊಡಗಿರುವುದು ಚಿತ್ರ: ಗೋವಿಂದರಾಜ ಜವಳಿ

ತಂಡಗಳು

ಕರ್ನಾಟಕ: ದೇವದತ್ತ ಪಡಿಕ್ಕಲ್ (ನಾಯಕ), ಮಯಂಕ್ ಅಗರವಾಲ್, ಕೆ.ಎಲ್.ರಾಹುಲ್, ಕರುಣ್ ನಾಯರ್, ಆರ್.ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ವೈಶಾಖ ವಿಜಯಕುಮಾರ್, ವಿದ್ಯಾಧರ ಪಾಟೀಲ, ಪ್ರಸಿದ್ಧ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಅನೀಶ್ ಕೆ.ವಿ, ಶ್ರೀಜಿತ್ ಕೆ.ಎಲ್ (ವಿಕೆಟ್ ಕೀಪರ್), ವಿದ್ವತ್ ಕಾವೇರಪ್ಪ.

ಜಮ್ಮು–ಕಾಶ್ಮೀರ ತಂಡ: ಪಾರಸ್ ಡೋಗ್ರಾ (ನಾಯಕ), ಶುಭಂ ಖಜೂರಿಯಾ, ಯಾವರ್ ಹಸನ್, ಶುಭಂ ಸಿಂಗ್ ಪುಂಡಿರ್, ಅಬ್ದುಲ್ ಸಮದ್, ಕನ್ಹಯ್ಯ ವಾಧ್ವಾನ್ (ವಿಕೆಟ್ ಕೀಪರ್), ಅಬಿದ್ ಮುಷ್ತಾಕ್, ಅಕೀಬ್ ನಬಿ ದಾರ್, ಯುಧ್‌ವೀರ್ ಸಿಂಗ್, ವಂಶಜ್ ಶರ್ಮಾ, ಸುನಿಲ್ ರಾಮ್ ಕುಮಾರ್, ಕವಲ್ ಪ್ರೀತ್ ಸಿಂಗ್, ಸಾಹಿತ್ ಲೋತ್ರಾ, ದಿಕ್ಷಾಂತ್ ಕುಂಡಾಲ್ (ವಿಕೆಟ್ ಕೀಪರ್), ಉಮರ್ ನಜೀರ್.

ಶ್ರೇಯಸ್ ಗೋಪಾಲ್ ಈ ಬಾರಿ ತಮ್ಮ ಪೂರ್ಣ ಸಾಮರ್ಥ್ಯ ಮೆರೆಯುತ್ತಿದ್ದಾರೆ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅವರ ಆಟ ಅಮೋಘ. ರಾಯಚೂರು ಹುಡುಗ ವಿದ್ಯಾಧರ್ ಪಾಟೀಲ ಈ ಋತುವಿನಲ್ಲಿ ಕರ್ನಾಟಕಕ್ಕೆ ಲಭಿಸಿರುವ ಭರವಸೆಯ ಆಲ್‌ರೌಂಡರ್ ಆಗಿದ್ದಾರೆ. ವೇಗದ ಬೌಲಿಂಗ್‌ನಲ್ಲಿ ಪ್ರಸಿದ್ಧಕೃಷ್ಣ, ವಿದ್ವತ್ ಕಾವೇರಪ್ಪ, ವೈಶಾಖ್ ಅವರೊಂದಿಗೆ ಉತ್ತಮ ಜೊತೆ ನೀಡಿರುವ ಆಟಗಾರ, ಕೆಳಕ್ರಮಾಂಕದಲ್ಲಿ ತಂಡವನ್ನು ಗೆಲುವಿನ ಗಡಿ ಮುಟ್ಟಿಸುವ ಉಪಯುಕ್ತ ಬ್ಯಾಟರ್ ಕೂಡ ಆಗಿದ್ದಾರೆ.

ಸ್ಪಿನ್ ಪ್ರತಿಭೆಗಳಾದ ಶಿಖರ್ ಶೆಟ್ಟಿ ಮತ್ತು ಮೊಹ್ಸಿನ್ ಖಾನ್ ಅವರಿಗೆ ವೃತ್ತಿಜೀವನದ ಆರಂಭದಲ್ಲಿಯೇ ರಣಜಿ ಫೈನಲ್ ಆಡುವ ಅವಕಾಶ ಲಭಿಸಿದೆ. ಈ ಹಂತಕ್ಕೆ ತಂಡವು ತಲುಪುವಲ್ಲಿ ಅವರ ಬೌಲಿಂಗ್ ಕೂಡ ಪ್ರಮುಖ ಪಾತ್ರ ವಹಿಸಿದೆ. ಬಿ ಗುಂಪಿನಲ್ಲಿ ಕರ್ನಾಟಕವು 3 ಜಯ, 3 ಡ್ರಾ ಮತ್ತು ಒಂದು ಸೋಲಿನೊಂದಿಗೆ ನಾಕೌಟ್ ಪ್ರವೇಶಿಸಿತ್ತು.

ಕ್ವಾರ್ಟರ್‌ಫೈನಲ್‌ನಲ್ಲಿ ಮುಂಬೈ ಎದುರು ಸಾಧಿಸಿದ ಅಮೋಘ ಜಯವು ರಣಜಿ ಇತಿಹಾಸದ ಅವಿಸ್ಮರಣೀಯ ಪಂದ್ಯಗಳಲ್ಲಿ ಒಂದು. ಅದರಲ್ಲೂ ರಾಹುಲ್ ಆಟದ ಸೊಬಗು ಮನಗೆದ್ದಿತ್ತು.

ಗಾಯದ ಸಮಸ್ಯೆ: ಹಸಿರು ಗರಿಕೆಗಳು ಇರುವ ಪಿಚ್‌ನಲ್ಲಿ ತಮ್ಮ ಸಾಮರ್ಥ್ಯ ಮೆರೆಯಲು ಜಮ್ಮು–ಕಾಶ್ಮೀರದ ಮಧ್ಯಮವೇಗಿ ಅಕೀಬ್ ನಬಿ ದಾರ್ ಸಿದ್ಧರಾಗಿದ್ದಾರೆ. ಇಡೀ ಟೂರ್ನಿಯಲ್ಲಿ 59 ವಿಕೆಟ್ ಪಡೆದಿದ್ದಾರೆ. ಬಂಗಾಳ ವಿರುದ್ಧದ ಸೆಮಿಫೈನಲ್‌ನಲ್ಲಿ ನಬಿ ಸಹಿತ ತಂಡದ ಎಲ್ಲರೂ ಅಮೋಘ ಆಟವಾಡಿದ್ದರು. ತಂಡ ಮೊದಲ ಸಲ ಫೈನಲ್ ಪ್ರವೇಶಿಸಿದ್ದು, ಎಂಟು ಸಲದ ಚಾಂಪಿಯನ್ ತಂಡದ ಎದುರು ಗೆಲ್ಲುವ ಆತ್ಮವಿಶ್ವಾಸವೂ ಸೋಮವಾರ ಅಭ್ಯಾಸ ಮಾಡುತ್ತಿದ್ದ ಆಟಗಾರರ ಹಾವಭಾವಗಳಲ್ಲಿ ಎದ್ದು ಕಂಡಿತು.

ಆದರೆ ತಂಡದ ಇಬ್ಬರು ಆಟಗಾರರು ಗಾಯಗೊಂಡಿರುವುದು ಚಿಂತೆಯ ವಿಷಯವಾಗಿದೆ. ಎಡಗೈ ಸ್ಪಿನ್ನರ್ ವಂಶಜ್ ಶರ್ಮಾ ಅವರು ಅಭ್ಯಾಸ ಮಾಡುವ ಸಂದರ್ಭದಲ್ಲಿ ಸ್ನಾಯುಸೆಳೆತದಿಂದ ಬಳಲಿದರು. ಆರಂಭಿಕ ಬ್ಯಾಟರ್ ಶುಭಂ ಖಜೂರಿಯಾ ಅವರೂ ತಾಲೀಮು ಮಾಡುವ ಸಂದರ್ಭದಲ್ಲಿ ಬೆನ್ನುನೋವಿನಿಂದ ಬಳಲಿದರು. ಅವರನ್ನು ಮೈದಾನದಿಂದ ಸ್ಟ್ರೆಚರ್ ಮೂಲಕ ಚಿಕಿತ್ಸೆಗಾಗಿ ವೈದ್ಯಕೀಯ ಕೋಣೆಗೆ ಕರೆತರಲಾಯಿತು. ಅವರಿಬ್ಬರೂ ಕಣಕ್ಕಿಳಿಯುವ ಬಗ್ಗೆ ಖಚಿತ ಮಾಹಿತಿ ಲಭಿಸಿಲ್ಲ. ಇದೆಲ್ಲದರ ನಡುವೆ ಹುಬ್ಬಳ್ಳಿ ಕ್ರಿಕೆಟ್‌ಪ್ರಿಯರು ಐತಿಹಾಸಿಕ ಫೈನಲ್ ಪಂದ್ಯಕ್ಕೆ ಸಾಕ್ಷಿಯಾಗಲು ತುದಿಗಾಲಿನಲ್ಲಿ ನಿಂತಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಹೆಚ್ಚು ರನ್ ಗಳಿಸಿದವರು (ಕರ್ನಾಟಕ)

ಆಟಗಾರ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಆರ್.ಸ್ಮರಣ್	8	950	227	4	3
ಕರುಣ್ ನಾಯರ್	8	699	233	2	3
ದೇವದತ್ತ ಪಡಿಕ್ಕಲ್	5	532	232	2	1
ಹೆಚ್ಚು ರನ್ ಗಳಿಸಿದವರು (ಜಮ್ಮು–ಕಾಶ್ಮೀರ)					
ಅಬ್ದುಲ್ ಸಮದ್	9	655	125	1	4
ಪಾರಸ್ ಡೋಗ್ರಾ	9	551	144	2	3
ಅಬೀದ್ ಮುಷ್ತಾಕ್	9	417	177	1	1

ಹೆಚ್ಚು ವಿಕೆಟ್ ಗಳಿಸಿದವರು (ಕರ್ನಾಟಕ)

ಬೌಲರ್	ಪಂದ್ಯ	ವಿಕೆಟ್	ಶ್ರೇಷ್ಠ (ಇನಿಂಗ್ಸ್)
ಶ್ರೇಯಸ್ ಗೋಪಾಲ್	9	46	110ಕ್ಕೆ8
ವಿದ್ವತ್ ಕಾವೇರಪ್ಪ	6	21	51ಕ್ಕೆ5
ಶಿಖರ್ ಶೆಟ್ಟಿ	7	21	61ಕ್ಕೆ5
ಹೆಚ್ಚು ವಿಕೆಟ್ ಗಳಿಸಿದವರು (ಜಮ್ಮು–ಕಾಶ್ಮೀರ)			
ಅಕೀಬ್ ನಬಿ ದಾರ್	8	55	24ಕ್ಕೆ7
ಸುನೀಲ್ ರಾಮಕುಮಾರ್	8	29	29ಕ್ಕೆ5
ಅಬೀದ್ ಮುಷ್ತಾಕ್	9	20	68ಕ್ಕೆ7

ಕರ್ನಾಟಕ ರಣಜಿ ವಿಜಯಗಳು

ವರ್ಷ	ಫೈನಲ್ ಎದುರಾಳಿ	ಸ್ಥಳ	ನಾಯಕ
1973-74	ರಾಜಸ್ಥಾನ	ಜೈಪುರ	ಇ.ಎ.ಎಸ್. ಪ್ರಸನ್ನ
1977-78	ಉತ್ತರಪ್ರದೇಶ	ಮೋಹನನಗರ	ಇ.ಎ.ಎಸ್. ಪ್ರಸನ್ನ
1982-83	ಬಾಂಬೆ	ಮುಂಬೈ	ಬ್ರಿಜೇಶ್ ಪಟೇಲ್
1995-96	ತಮಿಳುನಾಡು	ಚೆನ್ನೈ	ಅನಿಲ್ ಕುಂಬ್ಳೆ
1997-98	ಉತ್ತರಪ್ರದೇಶ	ಬೆಂಗಳೂರು	ರಾಹುಲ್ ದ್ರಾವಿಡ್
1998-99	ಮಧ್ಯಪ್ರದೇಶ	ಬೆಂಗಳೂರು	ಸುನೀಲ್ ಜೋಶಿ
2013-14	ಮಹಾರಾಷ್ಟ್ರ	ಹೈದರಾಬಾದ್	ಆರ್.ವಿನಯಕುಮಾರ್
2014-15	ತಮಿಳುನಾಡು	ಮುಂಬೈ	ಆರ್.ವಿನಯಕುಮಾರ್

'ಹುಬ್ಬಳ್ಳಿಯಲ್ಲಿ ಆಡುವುದು ಖುಷಿಯ ವಿಷಯ'

• ಸತೀಶ ಬಿ.

ಹುಬ್ಬಳ್ಳಿ: ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ತಮ್ಮ ಬಲಗೈನ ಎರಡೂ ಬೆರಳಿಗೆ ಬ್ಯಾಂಡೇಜ್ ಪಟ್ಟಿ ಹಾಕಿಕೊಂಡಿದ್ದರು. ತಮ್ಮ ಎಂದಿನ ಶಾಂತ ಮುಖಭಾವ ಮತ್ತು ಕಿರುನಗೆಯೊಂದಿಗೆ ಸುದ್ದಿಗಾರರ ಮುಂದೆ ಕುಳಿತರು.

ಐತಿಹಾಸಿಕ ಫೈನಲ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿರುವ ದೇವದತ್ತ ಪಕ್ಕದಲ್ಲಿ ಜಮ್ಮು–ಕಾಶ್ಮೀರ ತಂಡದ ನಾಯಕ ಪಾರಸ್ ಡೋಗ್ರಾ ಕೂಡ ಇದ್ದರು. ಇಬ್ಬರೂ ಸಮಚಿತ್ತದ ಮತ್ತು ಕರಾರುವಾಕ್ ಉತ್ತರಗಳನ್ನು ನೀಡಿದರು.

'ರಣಜಿ ಟ್ರೋಫಿಯಂತಹ ಮಹತ್ವದ ಟೂರ್ನಿಯ ಮಧ್ಯದಲ್ಲಿ ನಾಯಕತ್ವ ವಹಿಸುವುದು ಸವಾಲಿನದ್ದು. ಆದರೆ, ತಂಡದಲ್ಲಿ ಅನುಭವಿ ಆಟಗಾರರಿರುವುದರಿಂದ ಕಷ್ಟವಾಗಲಿಲ್ಲ' ಎಂದು ಪಡಿಕ್ಕಲ್ ಹೇಳಿದರು.

ಉತ್ತರಾಖಂಡ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಫೀಲ್ಡಿಂಗ್ ವೇಳೆ ಕೈಬೆರಳಿಗೆ ಗಾಯಮಾಡಿಕೊಂಡಿದ್ದ ಅವರು, ಸಂಪೂರ್ಣ ಚೇತರಿಸಿಕೊಂಡಿದ್ದಾರೆ.

'ಫೈನಲ್ ಪಂದ್ಯವೆಂದರೆ ಸಹಜವಾಗಿಯೇ ಒತ್ತಡ ಇರುತ್ತದೆ. ಆದರೆ, ತವರಿನ ಅಂಗಳದಲ್ಲಿ ಈ ಪಂದ್ಯ ಆಡುತ್ತಿರುವುದು ಖುಷಿಯ ವಿಚಾರ. ಫೈನಲ್‌ಗೆ ನಮ್ಮ ತಂಡ ಸಜ್ಜಾಗಿದೆ' ಎಂದು ಹೇಳಿದರು.

ರಾಜ್ಯದ ಎಲ್ಲ ಭಾಗಗಳಲ್ಲಿಯೂ ಉತ್ತಮ ಪ್ರತಿಭಾವಂತ ಆಟಗಾರರಿದ್ದಾರೆ. ಉತ್ತರ ಕರ್ನಾಟಕ ಭಾಗದಿಂದ ಬಂದವರೂ ಟೆಸ್ಟ್ ಕ್ರಿಕೆಟ್ ಆಡಿದ್ದಾರೆ. ಯುವ ಪ್ರತಿಭೆಗಳಿಗೆ ಹೆಚ್ಚು ಪ್ರೋತ್ಸಾಹ ಸಿಗಬೇಕೆಂದರೆ ಇಲ್ಲಿ ಹೆಚ್ಚು ಪಂದ್ಯಗಳು ನಡೆಯಬೇಕು ಎಂದರು.

ಪಾರಸ್ ಡೋಗ್ರಾ ಮಾತನಾಡಿ, 'ಫೈನಲ್ ತಲುಪಿರುವುದು ಮಹತ್ವದ ಸಂಗತಿ. ಸೆಮಿಫೈನಲ್ ಪಂದ್ಯದಲ್ಲಿ ಎರಡು ಬಾರಿಯ ಚಾಂಪಿಯನ್ ತಂಡ ಬಂಗಾಳವನ್ನು ಸೋಲಿಸಿದ್ದರಿಂದ ನಮ್ಮ ಆಟಗಾರರದಲ್ಲಿ ಆತ್ಮವಿಶ್ವಾಸ ಹೆಚ್ಚಿದೆ. ಕರ್ನಾಟಕ ತಂಡದಲ್ಲಿ ಖ್ಯಾತ ಆಟಗಾರರಿದ್ದಾರೆ. ಆದರೆ, ನಾವು ನಮ್ಮ ಆಟ ಆಡುತ್ತೇವೆ' ಎಂದರು.

ಸಂಕ್ಷಿಪ್ತ ಸುದ್ದಿ

ಮುಂಬೈನ ಮೂವರ ಶತಕ; ಇಕ್ಕಟ್ಟಿನಲ್ಲಿ ಕರ್ನಾಟಕ ತಂಡ

ಮುಂಬೈ (ಪಿಟಿಐ): ಆರಂಭ ಆಟಗಾರ ಆಯುಷ್ ಜೇಥ್ವಾ ಜೊತೆಗೆ ಮನನ್ ಭಟ್ ಮತ್ತು ಅಭಿಜ್ಞಾನ್ ಕುಂಡು ಅವರ ಭರ್ಜರಿ ಶತಕಗಳ ನೆರವಿನಿಂದ ಮುಂಬೈ ತಂಡ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ (23 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರ್ನಾಟಕ ವಿರುದ್ಧ ಮೂರನೇ ದಿನವಾದ ಸೋಮವಾರ ಆಟ ಕೊನೆಗೊಂಡಾಗ 7 ವಿಕೆಟ್‌ಗೆ 616 ರನ್ ಗಳಿಸಿದೆ. ಆ ಮೂಲಕ 376 ರನ್‌ಗಳ ಭಾರಿ ಮುನ್ನಡೆ ಪಡೆದಿದೆ.

ಇದರೊಂದಿಗೆ ಪಂದ್ಯ ಕರ್ನಾಟಕದ ಕೈಎಟಕಿನಿಂದ ದೂರವಾಯಿತು. ಮಂಗಳವಾರ ಪಂದ್ಯದ ಕೊನೆಯ ದಿನವಾಗಿದ್ದು, ಕರ್ನಾಟಕ ತಂಡ ಡ್ರಾ ಮಾಡಿಕೊಳ್ಳಲು ಯಶಸ್ವಿಯಾಗುವುದೇ ಎಂಬುದಷ್ಟೇ ಕುತೂಹಲದ ವಿಷಯ.

ಭಾನುವಾರ 1 ವಿಕೆಟ್‌ಗೆ 310 ರನ್‌ಗಳೊಡನೆ ಆಟ ಮುಂದುವರಿಸಿದ ಮುಂಬೈ ತಂಡದ ಮೊತ್ತವನ್ನು ಆಯುಷ್ (151, 353 ಎಸೆತ, 4x20, 6x1), ಮನನ್ (120, 238 ಎಸೆತ, 4x15, 6x1) ಮತ್ತು ಅಂತರ ರಾಷ್ಟ್ರೀಯ ಆಟಗಾರ ಅಭಿಜ್ಞಾನ್ (159, 214ಎಸೆತ, 4x17, 6x5) ಏರಿಸುತ್ತ ಹೋದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ: 78.5 ಓವರುಗಳಲ್ಲಿ 240; ಮುಂಬೈ 187 ಓವರುಗಳಲ್ಲಿ 7 ವಿಕೆಟ್‌ಗೆ 617 (ಆಯುಷ್ ಜೇಥ್ವಾ 151, ಮನನ್ ಭಟ್ 120, ಅಭಿಜ್ಞಾನ್ ಕುಂಡು 159; ಸಮಿತ್ ದ್ರಾವಿಡ್ 71ಕ್ಕೆ2, ಅನೀಶ್ವರ ಗೌತಮ್ 12ಕ್ಕೆ2).

ಕಾಮನ್‌ವೆಲ್ತ್ ಗೇಮ್ಸ್ ಜುಡೊ: ರೋಹಿತ್‌ಗೆ ಅರ್ಹತೆ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಉದಯೋನ್ಮುಖ ಜುಡೊ



ಆಟಗಾರ ರೋಹಿತ್ ಮಜಗುಲ್ ಅವರು ವರ್ಷಾಂತ್ಯದಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಹಾಗೂ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದಿದ್ದಾರೆ.

22 ವರ್ಷ ವಯಸ್ಸಿನ ರೋಹಿತ್ ಅವರು ದೆಹಲಿಯಲ್ಲಿ ಭಾನುವಾರ ಮುಕ್ತಾಯಗೊಂಡ ಆಯ್ಕೆ ಟ್ರಯಲ್ಸ್‌ನಲ್ಲಿ ಗಮನಾರ್ಹ ಪ್ರದರ್ಶನ ತೋರಿದ್ದರು. ಅವರು ಕಳೆದ ಎರಡು ವರ್ಷಗಳಲ್ಲಿ ನಡೆದ ಸೀನಿಯರ್ ನ್ಯಾಷನಲ್ಸ್ ಕೂಟದ 66 ಕೆ.ಜಿ. ವಿಭಾಗದಲ್ಲಿ ಸೋಲಿಲ್ಲದ ಸರದಾರನಾಗಿದ್ದಾರೆ.

ಅತಿಯಾದ ಆತ್ಮವಿಶ್ವಾಸದಿಂದ ಹೊರಬನ್ನಿ: ಗಾವಸ್ಕರ್

ಅಹಮದಾಬಾದ್ (ಪಿಟಿಐ): 'ಭಾರತ



ತಂಡವು ಟಿ20 ವಿಶ್ವಕಪ್ ಪಂದ್ಯದಲ್ಲಿ ಅತಿಯಾದ ಆತ್ಮವಿಶ್ವಾಸದಿಂದ ಹೊರಬಂದು ಪರಿಸ್ಥಿತಿಗಳಿಗೆ ಹೊಂದಿಕೊಂಡು ಆಡಬೇಕಿತ್ತು' ಎಂದು ಕ್ರಿಕೆಟ್ ದಿಗ್ಗಜ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

ಭಾನುವಾರ ದಕ್ಷಿಣ ಆಫ್ರಿಕಾ ವಿರುದ್ಧ 76 ರನ್‌ಗಳಿಂದ ಹೀನಾಯವಾಗಿ ಸೋಲುವ ಮೂಲಕ ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡದ 12 ಪಂದ್ಯಗಳ ಅಜೇಯ ಓಟಕ್ಕೆ ತೆರೆಬಿತ್ತು.

ದಕ್ಷಿಣ ಆಫ್ರಿಕಾದ ಡೆವಾಲ್ಡ್ ಬ್ರೆವಿಸ್ ಮತ್ತು ಡೇವಿಡ್ ಮಿಲ್ಲರ್ ಅವರ ಇನಿಂಗ್ಸ್‌ನಿಂದ ಪ್ರೇರಣೆ ಪಡೆದು ಭಾರತ ಬ್ಯಾಟರ್‌ಗಳು ಪಾಠ ಕಲಿಯಬೇಕಿತ್ತು. ಆದರೆ, ಹಾಗೆ ಮಾಡಲಿಲ್ಲ. ಅವರು ಅತಿಯಾದ ಆತ್ಮವಿಶ್ವಾಸ ಹೊಂದಿದ್ದರು. ಎಲ್ಲದಕ್ಕೂ ದೊಡ್ಡ ಹೊಡೆತಕ್ಕೆ ಮುಂದಾಗಿ ವಿಕೆಟ್‌ಗಳನ್ನು ಕಳೆದುಕೊಂಡರು. ದಕ್ಷಿಣ ಆಫ್ರಿಕಾಕ್ಕೆ ಅರ್ಹವಾದ ಗೆಲುವು ಲಭಿಸಿತು' ಎಂದು ಗಾವಸ್ಕರ್ ಜಿಯೊ ಸ್ಟಾರ್‌ನಲ್ಲಿ ಹೇಳಿದರು.

ವೆಸ್ಟ್ ಇಂಡೀಸ್ ತಂಡಕ್ಕೆ 107 ರನ್‌ಗಳ ಸುಲಭ ಜಯ, ಜಿಂಬಾಬ್ವೆಗೆ ನಿರಾಸೆ

ಹೆಟ್ಮೆಯರ್, ಪಾವೆಲ್ ಆಟಕ್ಕೆ ಒಲಿದ ಗೆಲುವು

ಮುಂಬೈ (ಪಿಟಿಐ): ಶಿಮ್ರಾನ್ ಹೆಟ್ಮೆಯರ್ ಮತ್ತು ರೋವ್ಮನ್ ಪಾವೆಲ್ ಅವರ ಸಿಡಿಲಬ್ಬರದ ಇನಿಂಗ್ಸ್ ಬಳಿಕ ಎಡಗೈ ಸ್ಪಿನ್ನರ್ ಗುಡಕೇಶ್ ಮೋತಿ ಕೈಚಳಕ ತೋರಿದರು. ಅವರ ಅಮೋಘ ಪ್ರದರ್ಶನದ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ಸೋಮವಾರ ಟಿ20 ವಿಶ್ವಕಪ್ ಸೂಪರ್ 8ರ ಹಂತದ ಪಂದ್ಯದಲ್ಲಿ 107 ರನ್‌ಗಳಿಂದ ಜಿಂಬಾಬ್ವೆ ತಂಡವನ್ನು ನಿರಾಯಾಸವಾಗಿ ಮಣಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ವಿಂಡೀಸ್ ತಂಡವು ಹೆಟ್ಮೆಯರ್ (85; 34ಎ, 4x7, 6x7) ಮತ್ತು ಪಾವೆಲ್ (59;35ಎ, 4x4, 6x4) ಅವರ ಬ್ಯಾಟಿಂಗ್ ಬಲದಿಂದ 6 ವಿಕೆಟ್‌ಗೆ 254 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಇದು ವಿಶ್ವಕಪ್ ಇತಿಹಾಸದಲ್ಲೇ ಎರಡನೇ ಅತ್ಯಧಿಕ ಮೊತ್ತ ಎನಿಸಿತು.

ಈ ಕಠಿಣ ಗುರಿಯನ್ನು ಬೆನ್ನಟ್ಟಿದ ಜಿಂಬಾಬ್ವೆ 17.4 ಓವರ್‌ಗಳಲ್ಲಿ 147 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಸ್ಪಿನ್ನರ್‌ಗಳಾದ ಗುಡಕೇಶ್ (28ಕ್ಕೆ 4) ಮತ್ತು ಅಖೀಲ್ ಹುಸೇನ್ (28ಕ್ಕೆ 3) ಎದುರಾಳಿ ತಂಡವನ್ನು ಕಟ್ಟಿಹಾಕುವಲ್ಲಿ ಪ್ರಮುಖ ಪಾತ್ರವಹಿಸಿದರು. ಇದು ವಿಂಡೀಸ್‌ಗೆ ಟಿ20 ಕ್ರಿಕೆಟ್‌ನಲ್ಲಿ ಎರಡನೇ ಅತಿದೊಡ್ಡ ರನ್ ಅಂತರದ ಗೆಲುವಾಗಿದೆ. ಈ ಜಯದೊಂದಿಗೆ ತಂಡವು ಒಂದನೇ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು.

ಜಿಂಬಾಬ್ವೆಯ ಇನಿಂಗ್ಸ್ ಆರಂಭಕ್ಕೆ ಮುನ್ನವೇ ವಿಂಡೀಸ್ ಗೆಲುವು ಬಹುತೇಕ ಖಚಿತವಾಗಿತ್ತು. ಸಿಕಂದರ್ ರಝಾ ಪಡೆಯು ಯಾವುದೇ ಹಂತದಲ್ಲಿ ದಿಟ್ಟ ಹೋರಾಟ ತೋರಲಿಲ್ಲ. 20 ರನ್‌ಗಳಿಗೆ ಪ್ರಮುಖ ಮೂರು ವಿಕೆಟ್ ಕಳೆದುಕೊಂಡ ತಂಡಕ್ಕೆ ಮಧ್ಯಮ ಕ್ರಮಾಂಕದಲ್ಲಿ ಡಿಯೋನ್ ಮೈಯರ್ಸ್ (28) ಮತ್ತು ರಝಾ (27) ಕೊಂಚ ಚೇತರಿಕೆ ನೀಡಿದರು. ನಂತರದಲ್ಲಿ ಬ್ರಾಡ್ ಇವಾನ್ಸ್ (43;21ಎ) ಹೋರಾಟ ನಡೆಸಿದರು. ಅವರು ರಿಚರ್ಡ್ ಎನ್‌ಗವಾರ (ಔಟಾಗದೆ 7) ಜೊತೆ 10ನೇ ವಿಕೆಟ್‌ಗೆ 45 ರನ್ ಸೇರಿಸಿದ್ದು, ಇನಿಂಗ್ಸ್‌ನ ದೊಡ್ಡ ಜೊತೆಯಾಟ ಎನಿಸಿತು.

ಇದಕ್ಕೂ ಮುನ್ನ ಹೆಟ್ಮೆಯರ್ ಅವರು ಜಿಂಬಾಬ್ವೆ ದಾಳಿಯನ್ನು ಹಿಗ್ಗಾಮುಗ್ಗಾ ದಂಡಿಸಿದರು. ಮೂರನೇ ಕ್ರಮಾಂಕದಲ್ಲಿ ಆಡಿದ ಅವರು ಕೇವಲ 19 ಎಸೆತಗಳಲ್ಲೇ ಅರ್ಧಶತಕ ತಲುಪಿದರು. ಜಿಂಬಾಬ್ವೆಯ ತಶಿಂಗ ಮುಸೆಕಿವ ಅವರಿಗೆ ಈ ಪಂದ್ಯ ದುಃಸ್ವಪ್ನವಾಯಿತು. ಹೆಟ್ಮೆಯರ್ ಅವರು 9 ರನ್ ಮತ್ತು 70 ರನ್ ಗಳಿಸಿದ್ದಾಗ ಅವರು ಸುಲಭ ಕ್ಯಾಚ್ ಕೈಬಿಟ್ಟರು. ಇದರಿಂದ ಜಿಂಬಾಬ್ವೆ ತಂಡ ಕೈಸುಟ್ಟುಕೊಳ್ಳುವಂತಾಯಿತು. ಪವರ್ ಪ್ಲೇ ಅವಧಿಯಲ್ಲಿ ವೆಸ್ಟ್ ಇಂಡೀಸ್ ಮೊತ್ತ 2 ವಿಕೆಟ್‌ಗೆ 55. ಆದರೆ, ನಂತರ ರನ್ ವೇಗ ಒಂದೇ ಸಮನೆ ಏರತೊಡಗಿತು.

ರಿಚರ್ಡ್ ಬೌಲಿಂಗ್‌ನಲ್ಲಿ (ಇನಿಂಗ್ಸ್‌ನ ಮೂರನೇ ಓವರ್) ಬ್ರಾಂಡೆನ್ ಕಿಂಗ್ (9) ಅವರ ಕ್ಯಾಚನ್ನು ಡೀಪ್ ಬ್ಯಾಕ್‌ವರ್ಡ್ ಸ್ಕ್ವೇರ್‌ನಲ್ಲಿ ಹಿಡಿದಿದ್ದ ಮುಸೆಕಿವ, ಬ್ಲೆಸಿಂಗ್ ಮುಝರಬಾನಿ ಮಾಡಿದ ಮರು ಓವರಿನಲ್ಲೇ ಚೆಂಡು ಕೈಗೆ ಬಂದರೂ ಹಿಡಿತಕ್ಕೆ ಪಡೆಯಲಾಗಲಿಲ್ಲ. ಇದು ಪಂದ್ಯಕ್ಕೆ ತಿರುವು ನೀಡಿತು. ಗ್ರೇಮ್ ಕ್ರೀಮರ್ ಮಾಡಿದ ಏಳನೇ ಓವರಿನಲ್ಲಿ ಎರಡು ಭರ್ಜರಿ ಸಿಕ್ಸರ್‌ಗಳನ್ನು ಹೊಡೆದ ಹೆಟ್ಮೆಯರ್ ಅವರು ನಂತರ ಒಂದೇ ಸಮನೇ ಆಕ್ರಮಣಕ್ಕಿಳಿದು ಚೆಂಡನ್ನು ಕ್ರೀಡಾಂಗಣದ ಮೂಲೆಮೂಲೆ ಗಟ್ಟಿದರು. ರಝಾ (3–0–52–0) ಅವರ ಒಂದೇ ಓವರಿನಲ್ಲಿ ಅವರು 20 ರನ್ ಬಾಚಿದರು.

ಹೆಟ್ಮೆಯರ್ ಅವರಿಗೆ ರೋವ್ಮನ್ ಪಾವೆಲ್ ಸಮರ್ಥ ಬೆಂಬಲ ನೀಡಿದರು. ಇವರಿಬ್ಬರು ಮೂರನೇ ವಿಕೆಟ್‌ಗೆ ಕೇವಲ 52 ಎಸೆತಗಳಲ್ಲಿ 122 ರನ್ ಜೊತೆಯಾಟವಾಡಿದರು. ಕೊನೆಯಲ್ಲಿ ಶೆರ್ಫೇನ್ ರುದರ್‌ಫೋರ್ಡ್ (ಅಜೇಯ 31; 13ಎ), ರೊಮಾರಿಯೊ ಶೆಫರ್ಡ್ (21;10ಎ), ಜೇಸನ್ ಹೋಲ್ಡರ್ (13;4ಎ) ಅವರು ತಂಡ 250 ಗಡಿದಾಟಲು ನೆರವಾದರು.

ವೆಸ್ಟ್ ಇಂಡೀಸ್ ಇನಿಂಗ್ಸ್‌ನಲ್ಲಿ 19 ಸಿಕ್ಸರ್‌ಗಳಿದ್ದವು. ಶ್ರೀಲಂಕಾ ಮೊದಲ ಆವೃತ್ತಿಯಲ್ಲಿ (2007) ಐರ್ಲೆಂಡ್ ವಿರುದ್ಧ ಗಳಿಸಿದ 260 ರನ್‌ಗಳು ವಿಶ್ವಕಪ್‌ನಲ್ಲಿ ತಂಡವೊಂದರ ಗರಿಷ್ಠ ಮೊತ್ತವಾಗಿತ್ತು. ಆ ದಾಖಲೆ ಸ್ವಲ್ಪದರಲ್ಲೇ ಅಬಾಧಿತವಾಗಿ ಉಳಿಯಿತು.

ಸ್ಕೋರುಗಳು: ವೆಸ್ಟ್ ಇಂಡೀಸ್: 20 ಓವರುಗಳಲ್ಲಿ 6 ವಿಕೆಟ್‌ಗೆ 254 (ಶಿಮ್ರಾನ್ ಹೆಟ್ಮೆಯರ್ 85, ರೋವ್ಮನ್ ಪಾವೆಲ್ 59, ಶೆರ್ಫೇನ್ ರುದರ್‌ಫೋರ್ಡ್ ಔಟಾಗದೆ 31; ರಿಚರ್ಡ್ ಎನ್‌ಗವಾರ 47ಕ್ಕೆ2, ಬ್ಲೆಸಿಂಗ್ ಮುಝರಬಾನಿ 42ಕ್ಕೆ2). ಜಿಂಬಾಬ್ವೆ: 17.4 ಓವರ್‌ಗಳಲ್ಲಿ 147 (ಡಿಯೋನ್ ಮೈಯರ್ಸ್ 28, ಮತ್ತು ನಾಯಕ ಸಿಕಂದರ್ ರಝಾ 27, ಬ್ರಾಡ್ ಇವಾನ್ಸ್ 43; ಅಕೇಲ್ ಹುಸೇನ್ 28ಕ್ಕೆ 3, ಮ್ಯಾಥ್ಯೂ ಫೋರ್ಡ್ 27ಕ್ಕೆ 2, ಗುಡಕೇಶ್ ಮೋತಿ 28ಕ್ಕೆ 4). ಫಲಿತಾಂಶ: ವೆಸ್ಟ್ ಇಂಡೀಸ್‌ಗೆ 107 ರನ್‌ಗಳ ಗೆಲುವು. ಪಂದ್ಯದ ಆಟಗಾರ: ಶಿಮ್ರಾನ್ ಹೆಟ್ಮೆಯರ್


ಅರ್ಧಶತಕ ಗಳಿಸಿದ ರೋವ್ಮನ್ ಪಾವೆಲ್ (ಎಡ) ಹಾಗೂ ಶಿಮ್ರಾನ್ ಹೆಟ್ಮೆಯರ್ ಪಿಟಿಐ ಚಿತ್ರ

ಟಿ20 ವಿಶ್ವಕಪ್‌ನಲ್ಲಿ ಅತ್ಯಧಿಕ ಮೊತ್ತಗಳು

ರನ್	ತಂಡ	ಎದುರಾಳಿ	ತಾಣ	ವರ್ಷ
6ಕ್ಕೆ 260	ಶ್ರೀಲಂಕಾ	ಕೆನ್ಯಾ	ಜೋಬರ್ಗ್	2007
6ಕ್ಕೆ 254	ವೆಸ್ಟ್ ಇಂಡೀಸ್	ಜಿಂಬಾಬ್ವೆ	ವಾಂಖೆಡೆ	2026
5ಕ್ಕೆ 235	ಐರ್ಲೆಂಡ್	ಒಮಾನ್	ಕೊಲಂಬೊ	2026
8ಕ್ಕೆ 230	ಇಂಗ್ಲೆಂಡ್	ದಕ್ಷಿಣ ಆಫ್ರಿಕಾ	ವಾಂಖೆಡೆ	2016
4ಕ್ಕೆ 229	ದಕ್ಷಿಣ ಆಫ್ರಿಕಾ	ಇಂಗ್ಲೆಂಡ್	ವಾಂಖೆಡೆ	2016

ಐಸಿಸಿ ಪುರುಷರ ಟಿ20 ವಿಶ್ವಕಪ್ 2026

ಸ್ಪಿನ್ನರ್‌ಗಳ ಮೇಲೆ ತಂಡಗಳ ವಿಶ್ವಾಸ

ಪಲ್ಲೆಕೆಲೆ (ಪಿಟಿಐ): ಇಂಗ್ಲೆಂಡ್ ಮತ್ತು ಪಾಕಿಸ್ತಾನ ತಂಡಗಳು ಮಂಗಳವಾರ ನಡೆಯುವ ಟಿ20 ವಿಶ್ವಕಪ್ ಸೂಪರ್ ಎಂಟರ ಹಂತದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಈ ಕ್ರೀಡಾಂಗಣದ ಪಿಚ್ ನಿಧಾನಗತಿಯ ಬೌಲರ್‌ಗಳಿಗೆ ಒಲಿಯುವ ನಿರೀಕ್ಷೆಯಿದ್ದು, ಉಭಯ ತಂಡಗಳು ಸ್ಪಿನ್ ಸಂಪನ್ಮೂಲವನ್ನು ಅವಲಂಬಿಸಿಕೊಂಡಿವೆ.

ಇಂಗ್ಲೆಂಡ್ ತಂಡ ಟೂರ್ನಿಯಲ್ಲಿ ಇನ್ನೂ ತನ್ನ ಮೇರು ಹಂತದ ಆಟ ಕಂಡುಕೊಂಡಿಲ್ಲ. ಆದರೆ ಎರಡು ಬಾರಿಯ ಚಾಂಪಿಯನ್ ತಂಡ ಗೆಲುವನ್ನು ಒಲಿಸಿಕೊಳ್ಳುವ ದಾರಿ ಕಂಡುಕೊಂಡಿದೆ. 'ಸೂಪರ್ 8'ರ ಹಂತದ ಮೊದಲ ಪಂದ್ಯದಲ್ಲಿ ಶ್ರೀಲಂಕಾ ತಂಡದ ಮೇಲೆ ಆಂಗ್ಲರ ಪಡೆ 51 ರನ್‌ಗಳ ಜಯಪಡೆದಿತ್ತು. ತಂಡದ ರನ್ ರೇಟ್ ಸಹ ಸುಧಾರಿಸಿದೆ.

ಇಲ್ಲಿನ ಪರಿಸ್ಥಿತಿಯನ್ನು ಪರಿಪೂರ್ಣವಾಗಿ ಬಳಸಿಕೊಂಡಿರುವ ಇಂಗ್ಲೆಂಡ್, ಶ್ರೀಲಂಕಾ ಎದುರು 146 ರನ್‌ಗಳ ಸಾಧಾರಣ ಮೊತ್ತವನ್ನು ರಕ್ಷಿಸಿಕೊಂಡಿತ್ತು. ವೇಗದ ಬೌಲರ್ ಜೋಫ್ರಾ ಆರ್ಚರ್ ಆರಂಭದಲ್ಲಿ ಯಶಸ್ಸು ದೊರಕಿಸಿಕೊಟ್ಟ ನಂತರ ಸ್ಪಿನ್ನರ್‌ಗಳು ಆತಿಥೇಯ ತಂಡದ ಕುಸಿತಕ್ಕೆ ಕಾರಣರಾದರು.

ಸ್ಪಿನ್ನರ್ ಅದಿಲ್ ರಶೀದ್ ಮತ್ತು ಎಡಗೈ ಸ್ಪಿನ್ನರ್ ಲಿಯಾಂ ಡಾಸನ್ ಪಿಚ್‌ನ ಪೂರ್ಣ ಲಾಭ ಪಡೆದರು. ಇವರ ಜೊತೆಗೆ ವಿಲ್ ಜ್ಯಾಕ್ಸ್ ಅವರ ಆಫ್ ಸ್ಪಿನ್ ದಾಳಿ ತಂಡದ ಗೆಲುವಿಗೆ ನೆರವಾಯಿತು. ಬ್ಯಾಟಿಂಗ್‌ನಲ್ಲೂ ಅವರ ಕಾಣಿಕೆ ಉಪಯುಕ್ತವಾಗಿದೆ.

ಆರಂಭ ಆಟಗಾರ ಫಿಲ್ ಸಾಲ್ಟ್ ಲಯಕ್ಕೆ ಮರಳಿದ್ದಾರೆ. ಈ ಟೂರ್ನಿಯಲ್ಲಿ ಮೊದಲ ಬಾರಿ ಅವರು ಲಂಕಾ ವಿರುದ್ಧ ಪವರ್‌ಪ್ಲೇ ನಂತರವೂ ಬ್ಯಾಟಿಂಗ್ ಮುಂದುವರಿಸಿದ್ದರು. ಆದರೆ ಅನುಭವಿ ಜೋಸ್ ಬಟ್ಲರ್ ವೈಫಲ್ಯ ಚಿಂತೆಗೆ ಕಾರಣವಾಗಿದೆ. ನಾಯಕ ಹ್ಯಾರಿ ಬ್ರೂಕ್ ಸಹ ತಿಣುಕಾಡುತ್ತಿದ್ದಾರೆ.

ಇಂಗ್ಲೆಂಡ್‌ಗೆ ಅನುಕೂಲಕರವಾದ ಅಂಶ ಈ ತಾಣಕ್ಕೆ ಒಗ್ಗಿಕೊಂಡಿರುವುದು. ಇದೇ ಕ್ರೀಡಾಂಗಣದಲ್ಲಿ ಈ ತಂಡ ಮೂರು ಪಂದ್ಯಗಳ ಟಿ20 ಸರಣಿಯನ್ನು ಸ್ವೀಪ್ ಮಾಡಿತ್ತು. ಎರಡು ದಿನಗಳ ಹಿಂದೆ ಲಂಕಾ ವಿರುದ್ಧವೂ ಸೂಪರ್ 8ರಲ್ಲಿ ಗೆದ್ದು ಶುಭಾರಂಭ ಮಾಡಿದೆ.

ಇನ್ನೊಂದು ಕಡೆ ಪಾಕಿಸ್ತಾನ ತಂಡವು, ನ್ಯೂಜಿಲೆಂಡ್ ಎದುರಿನ ಮೊದಲ ಪಂದ್ಯವು ಮಳೆಗೆ ಕೊಚ್ಚಿಹೋದ ಕಾರಣ ಹತಾಶಗೊಂಡಿದೆ. ಪಂದ್ಯ ಸಾಗಿದಂತೆ ಇಲ್ಲಿನ ಪಿಚ್ ನಿಧಾನಗತಿ ಕಾಣುವುದರಿಂದ ಸಲ್ಮಾನ್ ಅಲಿ ಆಘಾ ಪಡೆ, ವೈವಿಧ್ಯಮಯ ಸ್ಪಿನ್ ದಾಳಿಯ ಮೇಲೆ ಭರವಸೆ ಇಟ್ಟುಕೊಂಡಿದೆ.

ಪಾಕ್ ತಂಡವು 'ಪಾರ್ಟ್ (ತಡೆದು ಬೌಲ್ ಮಾಡುವ) ಸ್ಪಿನ್ನರ್' ಉಸ್ಮಾನ್ ತಾರಿಖ್ ಜೊತೆ ಸೈಮ್ ಅಯೂಬ್, ಅಬ್ರಾರ್ ಅಹ್ಮದ್, ಶದಾಬ್ ಖಾನ್ ಮತ್ತು ಮೊಹಮ್ಮದ್ ನವಾಜ್ ಅವರನ್ನು ಒಳಗೊಂಡ ಸ್ಪಿನ್ನರ್‌ಗಳ ಸೈನ್ಯ ಹೊಂದಿದೆ.

ಆದರೆ ಪಾಕಿಸ್ತಾನದ ಬ್ಯಾಟಿಂಗ್ ನಿರ್ವಹಣೆ ಕಳವಳಕ್ಕೆ ಕಾರಣವಾಗಿದೆ. ಅದರಲ್ಲೂ ಗುಣಮಟ್ಟದ ಸ್ಪಿನ್ ದಾಳಿಯೆದುರು ತಂಡ ಪರದಾಡಿದೆ. ಆರಂಭ ಆಟಗಾರ ಸಾಹಿಬ್‌ಝಾದ ಫರ್ಹಾನ್ ಮಾತ್ರ ಗಮನ ಸೆಳೆದಿದ್ದು ಒಂದು ಶತಕ ಸೇರಿದಂತೆ 4 ಇನಿಂಗ್ಸ್‌ಗಳಲ್ಲಿ 220 ರನ್ ಹೊಡೆದು ಟೂರ್ನಿಯ ಗರಿಷ್ಠ ಸ್ಕೋರರ್ ಎನಿಸಿದ್ದಾರೆ.


ವಿಲ್ ಜಾಕ್ಸ್ ಎಎಫ್‌ಪಿ ಚಿತ್ರ

ಇಂದಿನ ಪಂದ್ಯ
ಇಂಗ್ಲೆಂಡ್ V/s ಪಾಕಿಸ್ತಾನ
ತಾಣ: ಪಲ್ಲೆಕೆಲೆ, ಆರಂಭ: ರಾತ್ರಿ 7
ಲೈವ್ ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಕ್ವಾರ್ಟರ್‌ನಲ್ಲಿ ಸೋತ ಶುಭಾ ಪಡೆ

ಬೆಂಗಳೂರು: ಬಲಗೈ ಬ್ಯಾಟರ್ ಶಿಪ್ರಾ ಗಿರಿ ಅವರ ಶತಕದ ಬಲದಿಂದ ರೈಲ್ವೇಸ್ ತಂಡವು ಸೀನಿಯರ್ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ 18 ರನ್‌ಗಳಿಂದ ಕರ್ನಾಟಕ ತಂಡವನ್ನು ಮಣಿಸಿತು.


ಶಿಪ್ರಾ ಗಿರಿ

ಗುಂಪು ಹಂತದ ಕೊನೆಯ ಎರಡು ಪಂದ್ಯಗಳಲ್ಲಿ ಸೋತರೂ ಎಂಟರ ಘಟ್ಟಕ್ಕೆ ಅರ್ಹತೆ ಪಡೆದಿದ್ದ ಶುಭಾ ಸತೀಶ್ ಪಡೆ ಅಭಿಯಾನ ಮುಗಿಸಿತು.

ಮೊಹಾಲಿಯ ಐ.ಎಸ್.ಬಿಂದ್ರಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ರೈಲ್ವೇಸ್ ತಂಡದ ನಾಯಕಿ ಏಕ್ತಾ ಬಿಷ್ಟ್ ಬ್ಯಾಟಿಂಗ್ ಆಯ್ದುಕೊಂಡರು. ಶಿಪ್ರಾ (126; 119ಎ, 4x13, 6x1) ಅಮೋಘ ಬ್ಯಾಟಿಂಗ್‌ನೊಂದಿಗೆ ಕರ್ನಾಟಕದ ಬೌಲರ್‌ಗಳನ್ನು ದಂಡಿಸಿದರು. ಕೊನೆಯಲ್ಲಿ ಆರುಷಿ ಗೋಯಲ್ 45 ಎಸೆತಗಳಲ್ಲಿ 43 ರನ್ ಸೂರೆ ಮಾಡಿದರು. ರೈಲ್ವೇಸ್ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗೆ 251 ರನ್ ಪೇರಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ರಾಜ್ಯ ತಂಡದ ಮೊತ್ತ 8 ರನ್ ಇದ್ದಾಗ ರೋಷಿಣಿ ಕಿರಣ್ ಶೂನ್ಯಕ್ಕೆ ನಿರ್ಗಮಿಸಿದರು. ನಾಯಕಿ ಶುಭಾ (43; 70ಎ, 4x4) ಹಾಗೂ ಶಿಶಿರಾ ಎ. ಗೌಡ (55; 93ಎ, 4x7) ಎರಡನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಿ ಚೇತರಿಕೆ ನೀಡಿದರು.

ಮಧ್ಯಮ ಕ್ರಮಾಂಕದಲ್ಲಿ ಮಿಥಿಲಾ ವಿನೋದ್ (31; 28ಎ, 4x5) ಹಾಗೂ ನಿಕಿ ಪ್ರಸಾದ್ (46; 52ಎ, 4x4) ಪ್ರತಿರೋಧ ತೋರಿದರು. ಆದರೆ, ಶ್ರಾಯೊಸಿ ಪಿ. ಐಶ್ (48ಕ್ಕೆ3) ಹಾಗೂ ಸಿಮ್ರನ್ ದಿಲ್ ಬಹದೂರ್ (32ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಎದುರು ಕೆಳಕ್ರಮಾಂಕದ ಆಟಗಾರ್ತಿಯರು ಇನಿಂಗ್ಸ್ ಕಟ್ಟುವಲ್ಲಿ ವಿಫಲರಾದರು. ಶುಭಾ ಪಡೆಯು 9 ವಿಕೆಟ್‌ಗೆ 233 ರನ್ ಗಳಿಸಿ ಹೋರಾಟ ಮುಗಿಸಿತು.

ಸಂಕ್ಷಿಪ್ತ ಸ್ಕೋರು: ರೈಲ್ವೇಸ್: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 251 (ಶಿಪ್ರಾ ಗಿರಿ 126, ಆರುಷಿ ಗೋಯಲ್ ಔಟಾಗದೆ 43; ರಾಜೇಶ್ವರಿ ಗಾಯಕವಾಡ 44ಕ್ಕೆ1, ಸಹನಾ ಎಸ್. ಪವಾರ್ 39ಕ್ಕೆ1). ಕರ್ನಾಟಕ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 233 (ಶುಭಾ ಸತೀಶ್ 43, ಶಿಶಿರಾ ಎ. ಗೌಡ 55, ನಿಕಿ ಪ್ರಸಾದ್ 46; ಸಿಮ್ರನ್ ದಿಲ್ ಬಹದೂರ್ 32ಕ್ಕೆ2, ಶ್ರಾಯೊಸಿ ಪಿ. ಐಶ್ 48ಕ್ಕೆ3).

ಚಾಂಪಿಯನ್ನರಿಗೆ ಆಸ್ಟ್ರೇಲಿಯಾ ಸವಾಲು

ಟಿ20 ಸರಣಿ ಜಯಿಸಿ ಆತ್ಮವಿಶ್ವಾಸದಲ್ಲಿರುವ ಹರ್ಮನ್ ಪಡೆ

ಬ್ರಿಸ್ಬೇನ್ (ಪಿಟಿಐ): ಆಸ್ಟ್ರೇಲಿಯಾ ನೆಲದಲ್ಲಿ ಮೊದಲ ಬಾರಿ ಟಿ20 ಸರಣಿಯನ್ನು ಗೆದ್ದು ಆತ್ಮವಿಶ್ವಾಸದಲ್ಲಿರುವ ಭಾರತ ವನಿತೆಯರ ತಂಡವು ಮಂಗಳವಾರ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯ ತಂಡವನ್ನು ಎದುರಿಸಲಿದೆ.

ಹರ್ಮನ್‌ಪ್ರೀತ್ ಕೌರ್ ಪಡೆಯು ನವೆಂಬರ್‌ನಲ್ಲಿ ಐಸಿಸಿ ವಿಶ್ವಕಪ್ ಮುಡಿಗೇರಿಸಿಕೊಂಡ ಬಳಿಕ ಇದೇ ಮೊದಲ ಬಾರಿ ಏಕದಿನ ಪಂದ್ಯ ಆಡಲು ಕಣಕ್ಕಿಳಿಯಲಿದೆ. ನವಿಮುಂಬೈನಲ್ಲಿ ನಡೆದಿದ್ದ ವಿಶ್ವಕಪ್ ಸೆಮಿಫೈನಲ್‌ನ ರೋಚಕ ಹಣಾಹಣಿಯಲ್ಲಿ ಭಾರತ ತಂಡವು ಆಸ್ಟ್ರೇಲಿಯಾವನ್ನು ಐದು ವಿಕೆಟ್‌ಗಳಿಂದ ಮಣಿಸಿತ್ತು. ಇದೀಗ ಅತಿಥೇಯರು ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿದ್ದಾರೆ.

ಆಸ್ಟ್ರೇಲಿಯಾದ ಶ್ರೇಷ್ಠ ಬ್ಯಾಟರ್‌ಗಳಲ್ಲಿ ಒಬ್ಬರಾದ ಅಲಿಸಾ ಹೀಲಿ ಅವರು ಈ ಸರಣಿಯ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ. 35 ವರ್ಷದ ಹೀಲಿ ಅವರೇ ಆತಿಥೇಯ ತಂಡವನ್ನು ಮುನ್ನಡೆಸಲಿದ್ದು, ಹೀಗಾಗಿ ಸರಣಿ ಇನ್ನಷ್ಟು ಮಹತ್ವ ಪಡೆದಿದೆ. ಮಾರ್ಚ್ 6ರಂದು ಪರ್ತ್‌ನಲ್ಲಿ ಆರಂಭವಾಗುವ ಟೆಸ್ಟ್ ಪಂದ್ಯವು ಅವರಿಗೆ ವೃತ್ತಿಜೀವನದ ಕೊನೆಯ ಪಂದ್ಯವಾಗಲಿದೆ.

ಅಡಿಲೇಡ್‌ನಲ್ಲಿ ಶನಿವಾರ ನಡೆದ ಕೊನೆಯ ಟಿ20 ಪಂದ್ಯವನ್ನು 17 ರನ್‌ಗಳಿಂದ ಗೆದ್ದ ಭಾರತ ತಂಡವು ಮೂರು ಪಂದ್ಯಗಳ ಸರಣಿಯನ್ನು 2-1ರಿಂದ ವಶಮಾಡಿಕೊಂಡಿತ್ತು. ಏಕದಿನ ಸರಣಿಯ ಇತರ ಎರಡು ಪಂದ್ಯಗಳು ಫೆ.27 ಮತ್ತು ಮಾರ್ಚ್ 1ರಂದು ಹೋಬಾರ್ಟ್‌ನಲ್ಲಿ ನಡೆಯಲಿವೆ.

ಮೂರನೇ ಟಿ20 ಪಂದ್ಯದಲ್ಲಿ 82 ರನ್ ಗಳಿಸಿ ಗೆಲುವಿನ ರೂವಾರಿಯಾಗಿದ್ದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಅವರು ಭಾರತದ ಬ್ಯಾಟಿಂಗ್‌ನಲ್ಲಿ ಪ್ರಮುಖ ಪಾತ್ರ ವಹಿಸುವ ನಿರೀಕ್ಷೆಯಿದೆ. ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಅಜೇಯ 127 ರನ್ ಗಳಿಸಿದ್ದ ಜೆಮಿಮಾ ರಾಡ್ರಿಗಸ್ ಅವರತ್ತ ಎಲ್ಲರ ಚಿತ್ತ ನೆಟ್ಟಿದೆ. ಅವರು ನಿರ್ಣಾಯಕ ಟಿ20 ಪಂದ್ಯದಲ್ಲೂ 59 ರನ್‌ಗಳ ಅಮೂಲ್ಯ ಆಟವಾಡಿದ್ದರು. ಪಾದದ ಗಾಯದಿಂದ ಚೇತರಿಸಿಕೊಂಡ ನಂತರ ಪ್ರತೀಕಾ ರಾವಲ್ ಅವರು ಏಕದಿನ ತಂಡಕ್ಕೆ ಮರಳಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.20
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್


ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಕ್ರಾಂತಿ ಗೌಡ್ ಹಾಗೂ ಉಪನಾಯಕಿ ಸ್ಮತಿ ಮಂದಾನ

ಪ್ರೊ ಹಾಕಿ: ಭಾರತಕ್ಕೆ ಸ್ಪೇನ್ ಸವಾಲು

ಹೋಬಾರ್ಟ್ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಮಂಗಳವಾರ ಎಫ್‌ಐಎಚ್ ಪ್ರೊ ಲೀಗ್‌ನ 'ರಿವರ್ಸ್' ಪಂದ್ಯದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ.

ಒಂಬತ್ತು ತಂಡಗಳ ಟೂರ್ನಿಯಲ್ಲಿ ಭಾರತದ ಈವರೆಗಿನ ಪ್ರದರ್ಶನ ನೀರಸವಾಗಿದೆ. ರೂರ್ಕೆಲಾ ಮತ್ತು ಹೋಬಾರ್ಟ್ ಲೆಗ್‌ಗಳಲ್ಲಿ ಆಡಿದ ಎಲ್ಲಾ ಆರು ಪಂದ್ಯಗಳನ್ನೂ ಸೋತಿದೆ. ಹಾರ್ದಿಕ್ ಸಿಂಗ್ ನಾಯಕತ್ವದ ತಂಡವು ಮೊದಲ ಜಯದ ನಿರೀಕ್ಷೆಯಲ್ಲಿದೆ.

ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ಭಾನುವಾರ ನಡೆದ ಪಂದ್ಯದಲ್ಲಿ ಭಾರತದ ವೀರೋಚಿತ ಹೋರಾಟ ಗಮನ ಸೆಳೆದಿತ್ತು. ನಿಗದಿತ ಅವಧಿಯ ಪಂದ್ಯವನ್ನು 2–2 ಡ್ರಾಗೊಂಡ ಬಳಿಕ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತ 4–5ರಿಂದ ಮುಗ್ಗರಿಸಿತ್ತು. ಇದಕ್ಕೂ ಮುನ್ನ 0–2ರಿಂದ ಸ್ಪೇನ್‌ಗೆ ಸೋತಿದ್ದ ಹಾರ್ದಿಕ್ ಪಡೆಯು ಮುಯ್ಯಿ ತೋರಿಸಿಕೊಳ್ಳುವ ತವಕದಲ್ಲಿದೆ.

ಆರು ಪಂದ್ಯಗಳಿಂದ ಒಂದು ಅಂಕ ಗಳಿಸಿರುವ ಭಾರತ, ಲೀಗ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 2


ಶ್ರೀಕಾಂತ್, ತನ್ವಿ ಮೇಲೆ ನಿರೀಕ್ಷೆ

ಮುಲ್ಹೇಮ್ ಆನ್ ಡೆರ್ ರುಹುವಾ (ಜರ್ಮನಿ) (ಪಿಟಿಐ): ಅನುಭವಿ ಕಿದಂಬಿ ಶ್ರೀಕಾಂತ್ ಹಾಗೂ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಬೆಳ್ಳಿ ವಿಜೇತೆ ತನ್ವಿ ಶರ್ಮಾ ಅವರು ಮಂಗಳವಾರ ಇಲ್ಲಿ ಆರಂಭವಾಗುವ ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಶ್ರೀಕಾಂತ್ ಅವರು ಕಳೆದ ಋತುವಿನಲ್ಲಿ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಹಾಗೂ ಸೈಯದ್ ಮೋದಿ ಅಂತರರಾಷ್ಟ್ರೀಯ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಗಳಲ್ಲಿ ರನ್ನರ್ಸ್‌ಅಪ್ ಆಗಿದ್ದು, ಇಲ್ಲಿ ಪ್ರಶಸ್ತಿಯ ನಿರೀಕ್ಷೆಯಲ್ಲಿದ್ದಾರೆ.

16 ವರ್ಷ ವಯಸ್ಸಿನ ತನ್ವಿ ಮೊದಲ ಸುತ್ತಿನಲ್ಲಿ ಮಲೇಷ್ಯಾದ ವಾಂಗ್ ಲಿಂಗ್ ಶಿಂಗ್ ಅವರನ್ನು ಎದುರಿಸಲಿದ್ದಾರೆ. ತಮಗಿಂತಲೂ ಉನ್ನತ ಕ್ರಮಾಂಕದ ಆಟಗಾರ್ತಿಯರಿಗೆ ಸೋಲಿನ ಆಘಾತ ನೀಡಿರುವ ತನ್ವಿ, ಭಾರತದ ಭರವಸೆಯಾಗಿದ್ದಾರೆ.

ಕಿರಣ್ ಜಾರ್ಜ್ ಹಾಗೂ ತರುಣ್ ಮನ್ನೆಪಲ್ಲಿ ಅವರು ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಕ್ರಮವಾಗಿ ಕ್ರಿಸ್ಟೊ ಪಾಪೊವ್ (ಫ್ರಾನ್ಸ್) ಮತ್ತು ವಾಂಗ್ ಟ್ಝು ವೀಯಿ (ತೈವಾನ್) ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಮಾಳವಿಕಾ ಬನ್ಸೋಡ್, ಇಶಾರಾನಿ ಬರೂವಾ ಹಾಗೂ ತಸ್ನೀಮ್ ಮೀರ್ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಕಣದಲ್ಲಿರುವ ಭಾರತದ ಪ್ರಮುಖರಾಗಿದ್ದಾರೆ.


ಭಾರತದ ತನ್ವಿ ಶರ್ಮಾ